ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜೂನ್, ೨೦೧೬ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೫ ಸಂಚಿಕೆ: ೧೧

ಬೆಲೆ: ಬಿಡಿ ಪ್ರತಿ: ರೂ. ೨೦/- ಪುಟ: ೨೦

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ *ಈ ಮೇಲ್:* dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಐದು ರಾಜ್ಯಗಳ ವಿಧಾನ ಸಭಾ ಚುನಾವಣಾ ಫಲಿತಾಂಶಗಳು ಬಂದಿವೆ. ಇದರ ಬೆನ್ನಲ್ಲೇ ನಮ್ಮ ಪ್ರಧಾನ ಮಂತ್ರಿ ಮೋದಿಯವರು ಮತ್ತು ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯನವರೂ ತಮ್ಮ ಅಧಿಕಾರಾವಧಿಯನ್ನು ಕ್ರಮವಾಗಿ ಎರಡು ಮತ್ತು ಮೂರು ವರ್ಷಗಳನ್ನು ಪೂರೈಸಿದ್ದಾರೆ. ಮೋದಿ ಮತ್ತು ಅವರ ಬಿಜೆಪಿ ಪಕ್ಷದ ನಾಯಕರೇನೋ ವಿಧಾನಸಭಾ ಚುನಾವಣಾ ಫಲಿತಾಂಶಗಳು ತಮ್ಮ ಪರವಾಗಿವೆ ಎಂದು ಹೇಳಿಕೊಂಡು ಕುಣಿಯುತ್ತಿದ್ದಾರೆ. ಜೊತೆಗೆ ಇದು ತಮ್ಮ ಕಾಂಗ್ರೆಸ ಮುಕ್ತ ಭಾರತದ ಕನಸು ನನಸಾಗುವ ದಿನ ದೂರವಿಲ್ಲ ಎಂಬುದರ ಸೂಚನೆಯೆಂದೂ ಬೀಗುತ್ತಿದ್ದಾರೆ. ಇನ್ನು ಕಾಂಗ್ರೆಸ್ಸಿಗರು ಕರ್ನಾಟಕದ ಜೊತೆ ಇದ್ದ ಒಂದು ದೊಡ್ಡ ರಾಜ್ಯ ಅಸ್ಸಾಂನ್ನೂ ಈಗ ಕಳೆದುಕೊಂಡು ದಿಕ್ಕು ತೋಚದವರಂತಾಗಿ ತಮ್ಮ ಸೋಲಿಗೆ ನಿಜವಾದ ಕಾರಣಗಳನ್ನು ಬಿಟ್ಟು ಇಲ್ಲಸಲ್ಲದ ಕಾರಣಗಳನ್ನು ಹುಡುಕುತ್ತಾ ಬಾಯಿಗೆ ಬಂದಂತೆ ಬಡಬಡಿಸುತ್ತಿದ್ದಾರೆ.

ಆದರೆ ನಿಜವಾಗಿ ನೋಡಿದರೆ ಈ ಫಲಿತಾಂಶಗಳು ರಾಷ್ಟ್ರೀಯವಾಗಿ ಬಿಜೆಪಿಯ ಮುನ್ನಡೆಯನ್ನೇನನ್ನೂ ಸೂಚಿಸುವುದಿಲ್ಲ. ಈ ರಾಜ್ಯಗಳಲ್ಲಿ ಒಟ್ಟು ೬೬೧ ವಿದಾನಸಭಾ ಸ್ಥಾನಗಳಿಗೆ ಸ್ಪರ್ಧಿಸಿದ್ದ ಅದು ಗೆದ್ದದ್ದು ೬೪ರಲ್ಲಿ ಮಾತ್ರ. ಹೀಗಿದ್ದೂ ಇದು ತನ್ನ ಜಯ ಎಂದು ಆ ಪಕ್ಷಕ್ಕೆ ಹೇಳಿಕೊಳ್ಳಲು ಇರುವ ಕಾರಣವೆಂದರೆ ಅದು ಅಸ್ಸಾಂನಲ್ಲಿ ಅಧಿಕಾರ ಗದ್ದುಗೆ ಏರಿರುವುದು. ಅದೂ ಪೂರ್ಣ ಸ್ವಂತ ಬಲದ ಮೇಲಲ್ಲ. ಅಸ್ಸಾಂ ಗಣ ಪರಿಷತ್ ಮತ್ತು ಬೋಡೋಗಳ ಒಕ್ಕೂಟದೊಡನೆ. ಇನ್ನೂ ಮುಖ್ಯವೆಂದರೆ, ಅಲ್ಲಿನ ಬಿಜೆಪಿ ಕೂಡ ನಿಜವಾದ ಅಂದರೆ ಸಂಘ ಪರಿವಾರ ಮೂಲವಾದ-ಬಿಜೆಪಿಯಲ್ಲ. ಅದರ ಇಬ್ಬರು ನಾಯಕರಾದ, ಈಗ ಮುಖ್ಯ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವ ಸರ್ಬಾನಂದ ಸೋನೋವಾಲ್ ಕೇವಲ ನಾಲ್ಕು ವರ್ಷಗಳ ಹಿಂದೆ ಅಸ್ಸಾಂ ಗಣ ಪರಿಷತ್ ಪಕ್ಷದಿಂದ ಹತಾಶರಾಗಿ ಮತ್ತು ಈ ಚುನಾವಣೆಗಳ ಉಸ್ತುವಾರಿ ವಹಿಸಿದ್ದ ಇನ್ನೋರ್ವ ನಾಯಕರಾದ ಹಿಮಂತ್ ಬಿಸ್ವಾಸ್ ಶರ್ಮ ನಾಲ್ಕು ತಿಂಗಳ ಹಿಂದಷ್ಟೇ ಕಾಂಗ್ರಸ್‌ನಿಂದ ಹತಾಶರಾಗಿ ಬಿಜೆಪಿಗೆ ಬಂದವರು. ಇವರ ಬೆಂಬಲಿಗರೇ ಈಗ ಈ ಪಕ್ಷದಲ್ಲಿ ಕಿಕ್ಕಿರಿದಿದ್ದು ಅವರು ಆರೆಸ್ಸೆಸ್ ಮೂಲದ ಕಾರ್ಯಕರ್ತರೊಂದಿಗೆ ಹೇಗೆ ಏಗುವರೋ ಕಾದು ನೋಡಬೇಕಿದೆ!

ಇನ್ನು ಕಾಂಗ್ರೆಸ್ ಪುದುಚೇರಿಯಂತಹ ಪುಟ್ಟ ನಗರ ರಾಜ್ಯದಲ್ಲಿ ಗೆದ್ದಿರುವುದರ ಹೊರತಾಗಿ ದೇಶಾದ್ಯಂತ ನೆಲ ಕಚ್ಚಿದೆ. ಆತ್ಮಾವಲೋಕನದ ಸಾಮರ್ಥ್ಯವನ್ನೇ ಕಳೆದುಕೊಂಡಿರುವ ಈ ಪಕ್ಷ ಕೇರಳದಲ್ಲಿ ಅಧಿಕಾರ ಕಳೆದುಕೊಂಡಿದ್ದು ತಾನೂ ಸೇರಿದಂತೆ ತನ್ನ ಮೈತ್ರಿಕೂಟದ ಅಂಗಪಕ್ಷಗಳ ಹಲವು ಭ್ರಷ್ಟಾಚಾರದ ಹಗರಣಗಳಿಂದಾಗಿ ಮತ್ತು ಅಸ್ಸಾಂನಲ್ಲಿ ಅಧಿಕಾರ ಕಳೆದುಕೊಂಡದ್ದು ಅಲ್ಲಿ ಹೆಚ್ಚುತ್ತಾ ಹೋದ ಕುಟುಂಬ ರಾಜಕಾರಣದ ಒತ್ತಡಗಳಿಗೆ ಸಿಕ್ಕಿ ಪಕ್ಷ ದಿಕ್ಕು ಕಳೆದುಕೊಂಡಿದ್ದರಿಂದಾಗಿ ಎಂಬ ಸತ್ಯಗಳಿಗೆ ಎರವಾಗಿದೆ. ಈ ಸೋಲುಗಳ ಹೊಣೆಯಿಂದ ತನ್ನ ರಾಷ್ಟ್ರೀಯ ನಾಯಕರನ್ನು ಅಂದರೆ ಸೋನಿಯಾ ಮತ್ತು ರಾಹುಲರನ್ನು-ರಕ್ಷಿಸಲು ಇದರ ವಕ್ತಾರರು ಮಾಡುವ ಮಾತುಗಾರಿಕೆಯ ಕಸರತ್ತುಗಳು ಜನತೆಯ ಕಣ್ಣಲ್ಲಿ ಅವರು ಒಮ್ಮೆ ವಿದೂಷಕರಂತೆ, ಮತ್ತೊಮ್ಮೆ ಪಕ್ಕಾ ಕೇಡಿಗಳಂತೆ ಕಾಣುವಂತೆ ಮಾತ್ರ ಮಾಡಿವೆ. ಇದೆಲ್ಲವೂ ಕಾಂಗ್ರೆಸ್ ಒಂದು ಬೌದ್ಧಿಕ ದಾರಿದ್ರ್ಯದ ಪಕ್ಷವಾಗಿ ತಳವಿಲ್ಲದ ಬಾವಿಗೆ ಬೀಳುತ್ತಿರುವ ಪಕ್ಷವಾಗಿ ಕಂಡು ಆತಂಕವಾಗುತ್ತಿದೆ.

ಇನ್ನು ಪ.ಬಂಗಾಳದಲ್ಲಿ ಮಮತಾ ವಿಜಯ ನಮ್ಮ ಕಮ್ಯೂನಿಸ್ಟ್ ಪಕ್ಷಗಳು ಅಲ್ಲಿ ತಮ್ಮ ೩೫ ವರ್ಷಗಳ ಆಡಳಿತದಲ್ಲಿ ಮಾಡಿಹೋಗಿರುವ ಪಾಪದ ಹೊರೆ ಇನ್ನೂ ಕರಗಿಲ್ಲ ಎಂಬುಧನ್ನು ಸೂಚಿಸಿದರೆ, ತಮಿಳ್ನಾಡಿನಲ್ಲಿ ಜಯಲಲಿತಾ ಗೆಲುವಿಗೆ ಸ್ವತಃ ಅವರೇ ಕಾರಣ ನೀಡಿದ್ದಾರೆ: ಡಿಎಂಕೆ ಪಕ್ಷದ ನಿರ್ಲಜ್ಜ ಕೌಟುಂಬಿಕ ಮತ್ತು ಭ್ರಷ್ಟ ರಾಜಕಾರಣವನ್ನು ರಾಜ್ಯದ ಜನತೆ ಮರೆತಿಲ್ಲ. ಈ ಚುನಾವಣೆಗಳ ಒಂದು ಸಂತೋಷದ ಫಲಿತಾಂಶವೆಂದರೆ ಕೇರಳದಲ್ಲಿ ಎಡ ರಂಗ ಮತ್ತೆ ಅಧಿಕಾರಕ್ಕೆ ಬಂದಿರುವುದು. ನಿಷ್ಠುರ ನಾಯಕನೆಂದೇ ಹೆಸರಾದ ಪಿಣರಾಯಿ ವಿಜಯನ್ ನೇತೃತ್ವದ ಈ ಹೊಸ ಸರ್ಕಾರ ಈ ಹಿಂದಿನ ಅಧಿಕಾರಾವಧಿಯಲ್ಲಿ ಮಾಡಿದ ತಪ್ಪುಗಳನ್ನು ಮಾಡದೆ ಎಚ್ಚರಿಕೆ ವಹಿಸಲಿ ಎಂಬುದೇ ನಮ್ಮೆಲ್ಲರ ಆಶಯ

ಈ ಸಂದರ್ಭದ ದೊಡ್ಡ ತಮಾಷೆ ಎಂದರೆ 'ಕಾಂಗ್ರೆಸ್ ಮುಕ್ತ ಭಾರತ'ದ ಮಾತಾಡುತ್ತಿರುವ ಬಿಜೆಪಿಯೇ ಸ್ವತಃ ಇನ್ನೊಂದು ಕಾಂಗ್ರೆಸ್ ಆಗುತ್ತಿರುವುದು. ಮೋದಿಯವರು ಎರಡು ವರ್ಷ ಕಳೆದರೂ ಒಂದು ತಿಂಗಳಲ್ಲಿ ತರುವುದಾಗಿ ಹೇಳಿದ್ದ ಕಪ್ಪು ಹಣವನ್ನು ತರಲಿಲ್ಲ. ದಾವೂದ್ ಇಬ್ರಾಹಿಂನನ್ನೂ ಅವನ ಅಡಗುದಾಣದಿಂದ ಎಳೆದು ತರಲಾಗಿಲ್ಲ. ಕಾಶ್ಮೀರದ ೩೭೦ನೇ ವಿಧಿಯನ್ನೂ ರದ್ದು ಮಾಡಲಾಗಿಲ್ಲ. ಬದಲಿಗೆ, ಈ ವಿಧಿಯ ಸುತ್ತಲೇ ತನ್ನ ಪ್ರಣಾಳಿಕೆ ಮಾಡಿಕೊಂಡಿರುವ ಪಿಡಿಪಿ ಪಕ್ಷದೊಂದಿಗೇ ಮೈತ್ರಿ ಸರ್ಕಾರ ರಚಿಸಿಕೊಂಡಿದೆ! ಇನ್ನು ಬೆಲೆಗಳು ಏರುತ್ತಿವೆ; ಅಭಿವೃದ್ಧಿ ಸೂಚ್ಯಂಕಗಳು ಇಳಿಮುಖವಾಗಿವೆ. ಉದ್ಯೋಗ ನಿರ್ಮಾಣ ಶೂನ್ಯವಾಗಿದೆ. ಮೋದಿಯವರ ಬಹುಚರ್ಚಿತ 'ಕ್ರಾಂತಿಕಾರಿ' ವಿದೇಶ ನೀತಿ ಎರಡೇ ವರ್ಷಗಳಲ್ಲಿ ಟೊಳ್ಳಾಗಿ ಕಾಣತೊಡಗಿದ್ದು, ಪಾಕಿಸ್ತಾನವನ್ನು ಅಪ್ಪಿಕೊಂಡಾಗಲೆಲ್ಲ ಮೋದಿಯವರ ಎದೆಗೆ ಮುಳ್ಳು ಚುಚ್ಚತೊಡಗಿವೆ. ನೆರೆಯಲ್ಲಿ ಚೀನಾದ ನಿರ್ಮಾಣ ಚಟುವಟಿಕೆಗಳು ಹೆಚ್ಚುತ್ತಿದ್ದು ಅದು ಪಾಕಿಸ್ತಾನದ ಪರಮಾಣು ಕಾರ್ಯಕ್ರಮಕ್ಕೆ ಬೆಂಬಲವಾಗಿ ನಿಂತು ಭಾರತದ ಪರಮಾಣು ಕಾರ್ಯಕ್ರಮಕ್ಕೆ ಅಡ್ಡಗಾಲು ಹಾಕುತ್ತಿದೆ. ನೇಪಾಳ ಭಾರತೀಯ ರಾಯಭಾರಿಯನ್ನು ವಾಪಸ್ ಕಳಿಸುವ ಎಚ್ಚರಿಕೆ ನೀಡಿದೆ. ಇನ್ನು ಅರುಣಾಚಾಲ ಮತ್ತು ಉತ್ತರಾಖಂಡಗಳಲ್ಲಿ ಕಾಂಗ್ರೆಸ್ ಸರ್ಕಾರಗಳನ್ನು ಬೀಳಿಸಲು ಹೋಗಿ ಉತ್ತರಾಖಂಡದಲ್ಲಿ ಕೈ ಸುಟ್ಟುಕೊಂಡಿದೆ. ಇದನ್ನೆಲ್ಲ ನೋಡಿ ಬಿಜೆಪಿ ಮಾಜಿ ನಾಯಕ ಅರುಣ್ ಶೌರಿ ಬಿಜೆಪಿ ಎಂದರೆ ಕಾಂಗ್ರೆಸ್ + ಗೋವು ಎಂದು ಕಿಚಾಯಿಸಿದ್ದಾರೆ. ಇವೆಲ್ಲ ಸಮಸ್ಯೆಗಳಿಗೆ ಪರಿಹಾರವೆಂಬಂತೆ ಮೋದಿ ಸುಬ್ರಮಣ್ಯಸ್ವಾಮಿ ಎಂಬ ಬೊಗಳೆ ಬಾಂಬ್‌ನ್ನು ರಾಜ್ಯಸಭೆಯಲ್ಲಿ ತಂದು ನೆಟ್ಟಿದ್ದಾರೆ. ಈ ಹುಚ್ಚು ಬಾಂಬ್ ಮೋದಿಯವರ ಬುಡದಲ್ಲೇ ಸ್ಫೋಟಿಸಿದರೆ ಆಶ್ಚರ್ಯವಿಲ್ಲ. ಮೋದಿಯವರಿಗೆ ಶುಭವಾಗಲಿ!

ಇನ್ನು ತಮ್ಮ ಅಧಿಕಾರಾವಧಿಯ ಅರ್ಧಕ್ಕೂ ಹೆಚ್ಚು ಅವಧಿಯನ್ನು ಪೂರೈಸಿರುವ ನಮ್ಮ ಮುಖ್ಯ ಮಂತ್ರಿ ಸಿದ್ಧರಾಮಯ್ಯನವರು ತಮ್ಮ ಹಳೇ 'ಭಾಗ್ಯ'ಗಳ ದಾನ-ಧರ್ಮಗಳ ಕಾರ್ಯಕ್ರಮಗಳ ಕಹಳೆಯನ್ನೇ ಈಗಲೂ ಮೊಳಗಿಸುತ್ತಿದ್ದಾರೆ. ಸಮುದಾಯಗಳ ಮಧ್ಯೆ ದೀರ್ಘಕಾಲಿಕ ಪರಿಣಾಮಗಳನ್ನೇನೂ ಉಂಟು ಮಾಡದ ಈ 'ಭಾಗ್ಯ'ಗಳ ಕೀರ್ತಿ ಅವರು ಲೋಕಾಯುಕ್ತ ಮತ್ತು ಕರ್ನಾಟಕ ಲೋಕಸೇವಾ ಆಯೋಗಗಳನ್ನು ನಾಶ ಮಾಡಿದ ಹಾಗೂ ರಾಜ್ಯದ ಇಡೀ ನೌಕರಶಾಹಿಯನ್ನು ಜಾತಿವಾರು ಒಡೆದು ಕೂರಿಸಿರುವ ಕಳಂಕವನ್ನು ತೊಳೆಯಲಾರದು. ಅವರು ತಮ್ಮ ಸರ್ಕಾರ ಭ್ರಷ್ಟಾಚಾರದ ಯಾವ ಹಗರಣಗಳಲ್ಲು ಸಿಕ್ಕಿಹಾಕಿಕೊಂಡಿಲ್ಲ ಎಂದು ಹೇಳುತ್ತಿರುವಾಗಲೇ ದಿನಕ್ಕೊಂದು ಇಲಾಖೆಯಲ್ಲಿನ ಹಗರಣಗಳು ಬಯಲಾಗುತ್ತಿವೆ. ಸರ್ಕಾರಿ ಕಛೇರಿಗಳು

ಭ್ರಷ್ಟಾಚಾರದ ಗೂಡುಗಳಾಗಿ ಮುಂದುವರೆದು ಎಲ್ಲ ಕಡೆಯಿಂದಲೂ ನಿರ್ದಿಷ್ಟ ದರದಲ್ಲಿ ಕಮಾಯಿ ವಿವಿಧೆಡೆಗೆ ವಿತರಣೆಗಾಗಿ ವಸೂಲಾಗುತ್ತಿದೆ. ತಮ್ಮ ಕುಪ್ರಸಿದ್ಧ ಸಚಿವ ಸಂಪುಟವನ್ನು ಪುನಾರಚಿಸಲು ಇನ್ನೂ ಸಾಧ್ಯವಾಗದಿರುವುದೇ ಇವರ ನಾಯಕತ್ವದ ಬಗ್ಗೆ ಎಲ್ಲವನ್ನೂ ಹೇಳುತ್ತದೆ. ಕೆಪಿಎಸ್ಸಿಯನ್ನು ತಾನು ಅಧ್ಯಕ್ಷನಾಗಿದ್ದಾಗ ಪರಮ ಭ್ರಷ್ಟಾಚಾರದಿಂದ ಹಾಳು ಮಾಡಿ ಈಗ ಜೈಲು ಕಂಬಿ ಎಣಿಸುವ ಆತಂಕದಲ್ಲಿರುವ ವ್ಯಕ್ತಿಯೊಬ್ಬನನ್ನು ಈ ಸಂಪುಟದ ಸದಸ್ಯನೊಬ್ಬ ಆತ ತನ್ನ ಸಮುದಾಯಕ್ಕೆ ಸೇರಿದವನೆಂದು ಆತನ ರಕ್ಷಣೆಗೆ ಬದ್ಧವಿರುವುದಾಗಿ ಬಹಿರಂಗವಾಗಿ ಹೇಳುತ್ತಾನೆ ಎಂದರೆ ಈ ಸಂಪುಟ ಮತ್ತು ಅದರ ನಾಯಕತ್ವದ ಬಗ್ಗೆ ಇನ್ನೇನು ಹೇಳುವುದು?

ಸಿದ್ಧರಾಮಯ್ಯ ಬದಲಾಗಬೇಕು;ಬದಲಾಗಬಲ್ಲರು ಎಂದು ಅವರ ಕೆಲ ಹಿತೈಷಿಗಳ ಹಾರೈಸುತ್ತಿದ್ದಾರೆ. ಆದರೆ ಅವರು ತಮ್ಮ ಅಧಿಕಾರಾವಧಿಯ ನಾಲ್ಕನೇ ವರ್ಷಕ್ಕೆ ಕಾಲಿಡುತ್ತಿರುವುದು ಶ್ಯಾಮಭಟ್ ಎಂಬ ಕುಖ್ಯಾತ ಅಧಿಕಾರಿಯನ್ನು ಲೋಕಸೇವಾ ಆಯೋಗದ ಅಧ್ಯಕ್ಷ ಸ್ಥಾನಕ್ಕೆ ನೇಮಿಸುವ ನಿರ್ಧಾರದೊಂದಿಗೆ ಎಂಬುದು ಈ ಮನುಷ್ಯ ಬದಲಾಗದಂತಹ ವ್ಯಕ್ತಿಯಾಗಿ ಹೋಗಿದ್ದಾರೆ ಎಂಬುದನ್ನು ಸಾಬೀತುಪಡಿಸುತ್ತಿದೆ. ಅಥವಾ ಈ ವ್ಯಕ್ತಿ ಇದ್ದುದೇ ಹಾಗೆ; ನಾವು ನಮ್ಮ ಭೋಳೆತನದಲ್ಲಿ ತಪ್ಪಾಗಿ ತಿಳಿದಿದ್ದೆವು ಎಂಬ ಅವರ ಆಪ್ತ ಗೆಳೆಯನೊಬ್ಬರ ಮಾತೇ ನಿಜವೋ? ಈ ಸಿದ್ಧರಾಮಯ್ಯನ ದೆಸೆಯಿಂದ ಇನ್ನೆರಡು ವರ್ಷಗಳಲ್ಲಿ ಕಂಟಕ ಕಾದಂತಿದೆ. ಪರಿಹಾರ ಹತ್ತಿರದಲ್ಲಿ ಕಾಣದಾಗಿದೆ.

ಈ ಎಲ್ಲ ಒಡ್ಡ ರಾಜಕಾರಣದಾಚೆಗೆ ಒಂದೆರಡು ಸಂತೋಷದ ಸಂಗತಿಗಳನ್ನೂ ನಮ್ಮ ಓದುಗರೊಂದಿಗೆ ಹಂಚಿಕೊಳ್ಳುವ ಸಂದರ್ಭವಿದು. ಈ ಬಾರಿಯ ಅಖಿಲ



ಭಾರತ ನಾಗರಿಕ ಸೇವಾ (ಐಎಎಸ್ ಇತ್ಯಾದಿ) ಪರೀಕ್ಷೆಗಳಲ್ಲಿ ದಲಿತ ಹುಡುಗಿಯೊಬ್ಬಳು ಪ್ರಥಮ ಸ್ಥಾನ ಗಳಿಸಿದ್ದಾಳೆ! ದೆಹಲಿಯ ಟೀನಾ ದಾಬಿ ಎಂಬ ಈ ಹುಡುಗಿ ಇದನ್ನು ಸಾಧಿಸಿರುವುದು ತನ್ನ ಮೊದಲ ಪ್ರಯತ್ನದಲ್ಲೇ! ಇದು ನಮ್ಮ ಸಾಮಾಜಿಕ ನ್ಯಾಯ ನೀತಿಗೆ ಸಂದಿರುವ ನಿರ್ಣಾಯಕ ಜಯವೇ ಆಗಿದೆ.

ಇಂತಹುದೇ ಇನ್ನೊಂದು ಸುದ್ದಿಯೆಂದರೆ ಲಂಡನ್ ನಗರ ಈ ಬಾರಿ ಮುಸ್ಲಿಂ ವ್ಯಕ್ತಿಯೊಬ್ಬರನ್ನು ತನ್ನ ಮೇಯರ್‌ರನ್ನಾಗಿ ಆಯ್ಕೆ ಮಾಡಿಕೊಂಡಿದೆ ಎಂಬುದು. ಇತ್ತೀಚಿನ ವರ್ಷಗಳಲ್ಲಿ ಮುಸ್ಲಿಂ ಉಗ್ರಗಾಮಿಗಳಿಂದ ಹಲವು ದಾಳಿಗಳನ್ನು ಎದುರಿಸಿ ತತ್ತರಿಸಿರುವ ಮತ್ತು ಶೇ. ೧೨ರಷ್ಟು ಮಾತ್ರ ಮುಸ್ಲಿಂ ಜನಸಂಖ್ಯೆ ಇರುವ ಈ ನಗರದ ಮತದಾರರು ನೇರ ಚುನಾವಣೆಯಲ್ಲಿ ಮುಸ್ಲಿಂನೊಬ್ಬನನ್ನು ತನ್ನ ರಕ್ಷಕನ್ನಾಗಿ ಆಯ್ಕೆ ಮಾಡಿಕೊಂಡಿರುವುದು ಅವರ ಪ್ರಬುದ್ಧತೆಯನ್ನು ತೋರಿಸುತ್ತದೆ ಎಂದೇ ಹೇಳಬೇಕು. ಜೊತೆಗೇ ಸ್ವತಃ ಸಾದತ್ ಖಾನ್‌ರ ಮತ್ತು ಅವರನ್ನು ತನ್ನ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದ ಲೇಬರ್ ಪಕ್ಷದ ಪ್ರಬುದ್ಧತೆಯೂ. ಕೋಮುವಾದಿ ರಾಜಕಾರಣ ತೀವ್ರವಾಗಿ ಹೆಚ್ಚುತ್ತಿರುವ ಭಾರತದ ಜನತೆಗೆ, ರಾಜಕೀಯ ಪಕ್ಷಗಳಿಗೆ ಮತ್ತು ವಿಶೇಷವಾಗಿ ಮುಸ್ಲಿಂ ನಾಯಕತ್ವಕ್ಕೆ ಇಲ್ಲೊಂದು ಗಾಂಧಿವಾದಿ ಎನ್ನಬಹುದಾದ ಪಾಠವಿದೆ. ಆದರೆ ಅದನ್ನು ಅರ್ಥ ಮಾಡಿಕೊಳ್ಳುವ ವ್ಯವಧಾನ ಈಗ ಯಾರಿಗಿದೆ?



-ಸಂಪಾದಕ

ಇನ್ನು ಚಂದಾ ಕಳಿಸುವುದು ಬೇಡ

ಪ್ರಿಯ ಓದುಗರೇ,

ಮುಂದಿನ ಸಂಚಿಕೆಯೊಂದಿಗೆ 'ಹೊಸ ಮನುಷ್ಯ' ತನ್ನ ಐದು ವರ್ಷಗಳ ಪ್ರಕಟಣೆಯನ್ನು ಪೂರೈಸುತ್ತಿದ್ದು, ನಂತರದ ಆಗಸ್ಟ್ ಸಂಚಿಕೆ ವಿಶೇಷ ಸಂಚಿಕೆಯಾಗಿ ಪ್ರಕಟವಾಗಲಿದ್ದು ಅದನ್ನು ನಿಮಗೆ ವಿದಾಯದ ಉಡುಗೊರೆಯಾಗಿ ನೀಡಲು ಉದ್ದೇಶಿಸಲಾಗಿದೆ.

ಪತ್ರಿಕೆಯನ್ನು ನಡೆಸುವುದು ಹಲವು ಕಾರಣಗಳಿಂದ ಕಷ್ಟವೆನಿಸುತ್ತಿದ್ದು, ಮೂರು ಮುಖ್ಯ ಕಾರಣಗಳನ್ನು ಇಲ್ಲಿ ನೀಡಬಲ್ಲೆ. ಒಂದು, ಪ್ರತಿ ತಿಂಗಳು ಪತ್ರಿಕೆಯನ್ನು ಸಂಪಾದಿಸಿ, ವಿನ್ಯಾಸ ಮಾಡಿ ವಿಲೇವಾರಿ ಮಾಡುವುದರ ಜೊತೆಗೆ ಸಾರ್ವಜನಿಕರಿಂದ ಮತ್ತು ಸರ್ಕಾರಿ ಗ್ರಂಥಾಲಯಗಳಿಂದ ಚಂದಾ ಬೇಡಿ, ಅದರ ಲೆಕ್ಕ ಇಡುವ ಹಾಗೂ ಗೆಳೆಯರನ್ನು ಪ್ರತಿ ತಿಂಗಳೂ ಬರಹಗಳಿಗಾಗಿ ಕಾಡಬೇಕಾಗಿ ಬರುವ ಅತಿ ಮುಜುಗರದ ಮತ್ತು ಆಯಾಸದ ಕೆಲಸ ನನ್ನ ಆರೋಗ್ಯದ ಮೇಲೆ ಪರಿಣಾಮವನ್ನುಂಟು ಮಾಡಲಾರಂಭಿಸಿದೆ. ಎರಡು, ಪತ್ರಿಕೆಯ ಕೆಲಸಗಳಿಂದಾಗಿ ನನ್ನ ಓದು-ಬರಹ ಇತ್ಯಾದಿ ಚಟುವಟಿಕೆಗಳಿಗೆ ತೊಂದರೆಯಾಗುತ್ತಿದೆ. ಮುಖ್ಯವಾಗಿ ಮೂರನೆಯದು : ಈ ಪತ್ರಿಕೆಗಾಗಿ ನಾನು ಮಾಡುತ್ತಿರುವ ಕಾಲ ಮತ್ತು ಶಕ್ತಿಯ ವ್ಯಯ ನಿಜವಾಗಿಯೂ ಸಾರ್ಥಕವಾಗುತ್ತಿದೆಯೇ? ಈ ಪತ್ರಿಕೆ ನಮ್ಮ ಕೆಲ ಗೆಳೆಯರಿಗಾದರೂ ನಿಜವಾಗಿಯೂ ಬೇಕಾಗಿದೆಯೆಯೇ? ಎಂಬ ಪ್ರಶ್ನೆಗಳು ನನ್ನನ್ನು ಇತ್ತೀಚೆಗೆ ಕಾಡಹತ್ತಿವೆ.

ಹಾಗಾಗಿ ಪತ್ರಿಕೆಯ ಮುಂದುವರೆಸುವುದು ಸದ್ಯಕ್ಕೆ ಅನಿಶ್ಚಯವಾಗಿದ್ದು, ಮುಂದಿನ ಸೂಚನೆವರೆಗೆ, ಓದುಗರು ದಯವಿಟ್ಟು ಚಂದಾ ಕಳಿಸಬಾರದಾಗಿ ಕೋರುವೆ-ಸಂ.

ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಮೇ ಸಂಚಿಕೆಯ ಪ್ರತಿ ಲೇಖನವೂ ಮನನೀಯವಾಗಿದೆ. ಎಂದಿನಂತೆ ನಿಮ್ಮ ಸಂಪಾದಕೀಯ ದಿಟ್ಟವೂ, ಸತ್ಯನಿಷ್ಠುರವೂ ಆಗಿದೆ. ಅದು ನನಗೆ ಗೋಲ್ಡ್‌ಸ್ಮಿತ್ ಕವಿಯ 'The Deserted Village' ಕವಿತೆಯ " wealth accumulates, and men decay." ಎಂಬ ಸಾಲನ್ನು ನೆನಪಿಗೆ ತಂದಿತು.

-ಡಾ. ಎಚ್.ಎಸ್. ಈಶ್ವರ, ಬೆಂಗಳೂರು

ಕಳೆದ ಸಂಚಿಕೆಯಲ್ಲಿನ ನಿಮ್ಮ ಸಂಪಾದಕೀಯ ಬರಹ ಅತ್ಯುತ್ತಮವಾಗಿದ್ದು, ಅದಕ್ಕಾಗಿ ನಿಮಗೆ ಅಭಿನಂದನೆಗಳು.

-ಸರ್ಜಾಶಂಕರ ಹರಳೀಮಠ, ಶಿವಮೊಗ್ಗ

ಹೆಚ್ಚಿನ ವೇತನ ಕೊಟ್ಟಿದ್ದರಿಂದ ಪದವಿ ಶಿಕ್ಷಣದ ಗುಣಮಟ್ಟ ಹಾಳಾಗಿದೆ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ 'ಕರಾರು' ಕೆಲಸಗಾರರಿಗೆ ಕಡಿಮೆ ವೇತನ ನೀಡುವುದರಿಂದ ದಕ್ಷತೆ ಕಡಿಮೆಯಾಗಿದೆ ಎನ್ನುವ ನಿಮ್ಮ ಮಾತುಗಳಲ್ಲಿ ವೈರುಧ್ಯವಿದೆ. ದಕ್ಷತೆಗೆ ಬೇಕಾದದ್ದು ಶ್ರದ್ಧೆ ಮತ್ತು ಯೋಗ್ಯತೆ. ಇವೆರಡೂ ಹೆಚ್ಚಿದ್ದರೆ ದಕ್ಷತೆ ಹೆಚ್ಚದು.

-ಎಂ.ಆರ್. ರಾಮಶೇಷ, ಮೈಸೂರು

ಮೊದಲಾಗಿ ಎಲ್ಲ ಕಾಲೇಜು ಮೇಷ್ಟ್ರುಗಳಿಗೆ ಈ ಯುಜಿಸಿ ವೇತನ ಕೊಟ್ಟಿದ್ದು ತಪ್ಪು. ಒಂದು ಕನಿಷ್ಠ ಮಾನದಂಡವನ್ನಾದರೂ ಅನುಸರಿಸಬೇಕಿತ್ತು. ಇದೆಲ್ಲದರ ಮಧ್ಯದ ತೀವ್ರ ವಿಷಾದದ ಸಂಗತಿಯೆಂದರೆ ತಮ್ಮನ್ನು ಪ್ರಗತಿಪರ ಚಿಂತಕರೆಂದು ಗುರುತಿಸಿಕೊಂಡು ಆರ್ಥಿಕ ಉದಾರೀಕರಣ ನೀತಿಯಲ್ಲಿ ಅಂತರ್ಗಥವಾಗಿದ್ದ ಅನ್ಯಾಯಗಳ ಬಗ್ಗೆ ಪುಟಗಟ್ಟಲೆ ಬರೆಯುತ್ತಿದ್ದ ಯಾವ ಪಂಡಿತ ಅಧ್ಯಾಪಕನೂ ಈ ವೇತನಶ್ರೇಣಿ ಅನ್ಯಾಯದ್ದು;ನನಗೆ ಬೇಡ ಎಂದು ಔಪಚಾರಿಕತೆಗಾದರೂ ಹೇಳಲಿಲ್ಲವೆಂಬುದು. ನಮ್ಮ ನವ ಮಧ್ಯಮ ವರ್ಗದ ಪ್ರಗತಿಪರತೆಗೆ ಆತ್ಮಸಾಕ್ಷಿ ಎಂಬುದೇ ಇಲ್ಲವಾಗಿದೆ.

-ಎಂ.ಜಿ. ನಾಗರಾಜು (ನಿವೃತ್ತ ಅಧ್ಯಾಪಕ), ಬೆಂಗಳೂರು


ಮೇ ತಿಂಗಳ ಸಂಚಿಕೆಯ ಎಲ್ಲ ಲೇಖನಗಳು ಪ್ರಬುದ್ಧವಾಗಿವೆ. ಸಂಘಟಿತ ವಲಯಗಳ ವೇತನ, ಗಳಿಕೆ ಕುರಿತು ತಮ್ಮ ಅಭಿಪ್ರಾಯದಲ್ಲಿ ಅತಿಶಯೋಕ್ತಿ ಏನಿಲ್ಲ. ಸರಕಾರವನ್ನು ಬ್ಲ್ಯಾಕಮೇಲ್ ಮಾಡುತ್ತ ಈ ವಲಯಗಳು ತಮಗೆ ಬೇಕಾದುದನ್ನು ಪಡೆಯುತ್ತ, ಅಸಂಘಟಿತ ವಲಯವನ್ನು ಅಂಚಿಗೆ ತಳ್ಳಿವೆ. ಸರಕಾರ ನಡೆಸುವ ಜನಪ್ರತಿನಿಧಿಗಳು ಈಗ ಇವರೊಂದಿಗೆ ಸೇರಿಕೊಂಡು, ತಮಗೆ ಬೇಕಾದಾಗ ಬೇಕಾದಷ್ಟು ದೋಚಲಾರಂಭಿಸಿದ್ದಾರೆ. ಕರಭಾರವು ಹೆಚ್ಚುತ್ತಲೇ ಇದೆ. ಇದು ಕಾಲಾಂತರದಲ್ಲಿ ಆರ್ಥಿಕ ಅರಾ ಜಕತೆ ಹಂತ ತಲುಪಬಹುದೇನೋ!

"ಸಹನೆ ಪ್ರೀತಿಯ ಸ್ಥಾನದಲ್ಲಿ ....." ಲೇಖನ ವಾಸ್ತವಿಕತೆಗೆ ಹಿಡಿದ ಕನ್ನಡಿ. . ಈ ಬೆಳವಣಿಗೆಗೆ ಎರಡೂ ಕೋಮುಗಳು ಕಾರಣ. ನಮ್ಮ ಮೇಲೆ ಇತಿಹಾಸದ ಭಾರ ಬಹಳ ಇದೆ. ಸ್ವಾತಂತ್ರ್ಯಾನಂತರದ ಸರಕಾರಗಳು, ಎಡ ಪಂಥೀಯ ಚಿಂತಕರು, ಬುದ್ಧಿಜೀವಿಗಳು ನಿಜವಾದ ಜಾತ್ಯಾತೀತತೆ ಎಂದರೆ ಏನು ಅನ್ನುವದನ್ನು ಜನರಿಗೆ ಹೇಳಿಕೊಡಲೇ ಇಲ್ಲ. ಮತರಾಜಕೀಯ ಪ್ರತಿಯೊಂದರಲ್ಲಿ ಇಣುಕಿ, ಬಲಪಂಥಿಯರನ್ನು, ಹಿಂದು ಕೋಮುವಾದವನ್ನು ಖಂಡಿಸುವ ಭರದಲ್ಲಿ ಇಸ್ಲಾಂನ ಕೋಮುವಾದ, ಮಹಿಳೆಯರ ಶೋಷಣೆ, ಉಗ್ರವಾದ ಇತ್ಯಾದಿ ವಿರುದ್ಧ ಇವರು ಚಕಾರವೆತ್ತದೆ ಎರಡು ಕೋಮುಗಳ ಮಧ್ಯ ಬಿರುಕು ಹೆಚ್ಚಾಗಲು ಕಾರಣರಾದರು. ಇದನ್ನೇ ಬಂಡವಾಳ ಮಾಡಿಕೊಂಡ ಹಿಂದುಪರ ಸಂಘಟನೆಗಳು ಇಲ್ಲದ ಹುಯಿಲೆಬ್ಬಿಸುತ್ತ ಅಧಿಕಾರದ ಗದ್ದುಗೆ ಹಿಡಿಯುವಲ್ಲಿ ಯಶಸ್ವಿಯಾದವು.

ಅತ್ತ ಮುಸ್ಲಿಂ ಬುದ್ಧಿಜೀವಿಗಳೂ ಸ್ವಧರ್ಮದಲ್ಲಿನ ಶೋಷಣೆ, ಅಜ್ಞಾನ, ಮತೀಯತೆಯನ್ನು ನೋಡಿಯೂ ನೋಡದವರಂತೆ ಆ ವರ್ಗದ ಉದ್ಧಾರವನ್ನು

(೧೩ನೇ ಪುಟಕ್ಕೆ

ನಮ್ಮ ಸಮಾಜವಾದಿಗಳು | ಅನುಪಮ ಸಾಹಸಿ, ಸಂಘಟನಾಕಾರ ಯೂಸುಫ್ ಮೆಹರಲಿ



ಇಪ್ಪತ್ತನೆಯ ಶತಮಾನದ ಆರಂಭದ ವರ್ಷಗಳು ಎಂದರೆ ತಿಲಕ್ ಶಕೆಯಿಂದ ಗಾಂಧೀ ಯುಗದತ್ತ ಪಯಣ. ಜಾತ್ಯಾತೀತ ರಾಷ್ಟ್ರೀಯತೆಯ ಜೊತೆಗೆ ಆಳವಾದ ಮಾನವೀಯತೆಯನ್ನು ಮೇಳವಿಸಿದ ದಿನಗಳವು. ಬಂಗಾಳ ವಿಭಜನೆ, ಮೊದಲ ವಿಶ್ವಯುದ್ಧ, ರಷ್ಯದ ಸಾಮ್ಯವಾದಿ ಕ್ರಾಂತಿ, ಜಲಿಯನ್‌ವಾಲಾ ಬಾಗ್‌ನ ಬರ್ಬರ ಹತ್ಯಾಕಾಂಡ, ಅದರ ರಾಷ್ಟ್ರವ್ಯಾಪಿ ಪರಿಣಾಮ, ಹುತಾತ್ಮ ಭಗತ್‌ಸಿಂಗ್ ಹಾಗೂ ಜತೆಗಾರರ ನೇಣು ಮತ್ತು ಅದರಿಂದ ಉಂಟಾದ ತೀವ್ರ ರಾಜಕೀಯ ಬೆಳವಣಿಗೆ. ಈ ಎಲ್ಲ ಘಟನಾವಳಿಗಳ ಪ್ರಭಾವದಲ್ಲಿ ಬೆಳೆದ ಅನೇಕ ಉಜ್ವಲ ಹೋರಾಟಗಾರರಲ್ಲಿ ಯೂಸುಫ್ ಮೆಹರಲಿಯವರೂ ಒಬ್ಬರು. ೧೯೦೩ ಸೆಪ್ಟೆಂಬರ್ ೨೩ರಂದು ಶ್ರೀಮಂತ ವಾಣಿಜ್ಯೋದ್ಯಮಿ ಕುಟುಂಬದಲ್ಲಿ ಜನಿಸಿದ ಯೂಸುಫ್ ಮೆಹರಲಿ ಅವರ ಮನೆತನ ಬ್ರಿಟಿಷರ ಪರವಾಗಿತ್ತು. ಅವರ ಮುತ್ತಜ್ಜ ಮುಂಬೈದಲ್ಲಿ ಭಾರತದ ಮೊಟ್ಟಮೊದಲ ಜವಳಿ ಗಿರಣಿ ಆರಂಭಿಸಿದ್ದಲ್ಲದೇ, ದೇಶದ ಉದ್ದಿಮೆಗೆ ತಳಪಾಯ ಹಾಕಿದವರು. ಮೆಹರಲಿ ಅವರ ತಂದೆ ಜಾಫರ್ ಮೆಹರಲಿ ಮಕ್ಕಳನ್ನು ಶ್ರೀಮಂತರ ಶೈಲಿಯಲ್ಲೇ ಬೆಳೆಸಿದವರು.

ಯೂಸುಫ್ ಅವರ ಬಾಲ್ಯದ ೯ ವರ್ಷ ಕಲ್ಕತ್ತೆಯಲ್ಲಿ ಕಳೆಯಿತು. ಆಗ ಕಲ್ಕತ್ತೆ ಬಂಗಾಳ ವಿಭಜನೆಯಿಂದ, ವಂದೇಮಾತರಂ ಗೀತೆಯಿಂದ ಮಾರ್ಮೊಳಗಿತ್ತು. ೧೦ನೆಯ ವಯಸ್ಸಿಗೆ ಮುಂಬೈಗೆ ಹಿಂತಿರುಗಿ ಸೇಂಟ್ ಗ್ಸೇವಿಯರ್ ಹೈಸ್ಕೂಲ್ ಸೇರಿದರು. ಆಗಲೇ ಬೇರೆಬೇರೆ ದೇಶಗಳ ಕ್ರಾಂತಿಕಾರಿ ಆಂದೋಳನಗಳ ಓದು, ಪರಿಚಯ. ಅವುಗಳಲ್ಲಿನ ಯುವಕರ ಪಾತ್ರ ಎಳೆಯನನ್ನು ಸೆಳೆಯಿತು. ಮಜನಿ, ಗ್ಯಾರಿಬಾಲ್ಡಿಗಳ ಬಗ್ಗೆ ಓದಿದರು, ರಷ್ಯಾ ಹಾಗೂ ಸನ್‌ಯಾತ್‌ಸೇನ್ ನೇತೃತ್ವದ ಚೀನಾ ಕ್ರಾಂತಿಗಳ ವಿದ್ಯಮಾನಗಳ ಮೇಲೆ ಅವರಿಗೆ ನಿಕಟಾಸಕ್ತಿ.

ಆ ಹೊತ್ತಿನಲ್ಲಿ ನಡೆದಿದ್ದ ಗಾಂಧೀಜಿ ಅವರ ಅಸಹಕಾರ ಆಂದೋಳನದಲ್ಲಿ ಈ ಎಲ್ಲ ಆಂದೋಳನಗಳ ಹೊಳಹು ಕಂಡಿತು ಎಳೆಯ ಯೂಸುಫ್‌ನಲ್ಲಿ. ಅದರ ಪರಿಣಾಮವಾಗಿಯೇ ಯುವ ಮೆಹರಲಿ ೧೯೨೮ರಲ್ಲಿ ಬಾಂಬೆ ಪ್ರಾಂತೀಯ ಯೂತ್‌ಲೀಗ್ ಹುಟ್ಟು ಹಾಕಲು ಭೂಮಿಕೆ ಒದಗಿತು. ಈ ಲೀಗ್ ಇದೇ ಮೊದಲ ಬಾರಿಗೆ ರಾಷ್ಟ್ರೀಯ ಆಂದೋಳನದಲ್ಲಿ ಯುವಕರ ಉತ್ಸಾಹಕ್ಕೆ ವೇದಿಕೆ ಒದಗಿಸಿತು. ಲೀಗ್‌ನ ಮೊದಲ ಸಮ್ಮೇಳನದ ತೀರ್ಮಾನವೇ 'ಸೈಮನ್ ಆಯೋಗ'ಕ್ಕೆ ಬೃಹತ್ ಬಹಿಷ್ಕಾರ ಆಯೋಜಿಸುವುದಾಗಿತ್ತು. ಕಾಂಗ್ರೆಸ್ ಅಲ್ಲದೆ, ಇತರೆ ರಾಜಕೀಯ ಗುಂಪುಗಳೂ ಈ ಬ್ರಿಟಿಷ್ ಆಯೋಗಕ್ಕೆ ವಿರೋಧಿ ನಿಲುವು ತಳೆದಿದ್ದವು. ಆ ಸಂದರ್ಭದಲ್ಲಿ, ಇಂದು ಸ್ವಾತಂತ್ರ್ಯ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲಾಗಿರುವ 'ಸೈಮನ್ ಗೋ ಬ್ಯಾಕ್' ಘೋಷಣೆ ಟಂಕಿಸಿದವರೇ ಯೂಸುಫ್ ಮೆಹರಲಿ! ಅವರೇ ಅಂದು ಮುಂಬೈ ಪ್ರತಿಭಟನೆಯ ಹೀರೋ. ಆಗಲೇ ಮೊದಲ ಬಂಧನ. ಮೆಹರಲಿ ಕೇವಲ ೨೪ರ ತರುಣ.

ಇದರ ಮಧ್ಯೆ ಮುಂಬೈನ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ೧೯೨೫ರಲ್ಲಿ ಪದವಿ ಪಡೆದು, ೧೯೨೯ರಲ್ಲಿ ವಕೀಲಿ ಪದವಿ ಗಳಿಸಿಕೊಂಡರು. ಕಾಲೇಜು ದಿನಗಳಲ್ಲಿ ಅವರ ಮೇಲೆ ಛಾಪು ಒತ್ತಿದ ಮತ್ತೊಂದು ಘಟನೆ ಮುಂಬೈದಲ್ಲಿ ಸುಭಾಷ್‌ಬೋಸರ ಭಾಷಣ. ಆಮೇಲೆ ಗಾಂಧೀಜಿ ಸ್ಫೂರ್ತಿ, ಸರ್ದಾರ್‌ಪಟೇಲ್ ನೇತೃತ್ವದ ಬಾರ್ದೋಲಿ ರೈತ ಸತ್ಯಾಗ್ರಹ ಯೂಸುಫ್ ಅವರನ್ನು ಬಹುವಾಗಿ ಆಕರ್ಷಿಸಿ, ಮುಂಬೈ ಯುವ ಪಡೆಗೆ ಜನಬೆಂಬಲ ರೂಢಿಸಲು ಮುಂದಾದರು ಮೆಹರಲಿ.

ಆದರೆ ವಕೀಲಿಗೇ ನಷ್ಟ, ರಾಜಕೀಯಕ್ಕೆ ಲಾಭವಾಗಿ ದೇಶದಲ್ಲಿ ಸಮಾಜವಾದೀ ಸಿದ್ಧಾಂತದ ಹುಟ್ಟು, ಬೆಳವಣಿಗೆಗೆ ಮೂಲ ದ್ರವ್ಯವಾಯಿತು. ಗಾಂಧೀಜಿ ಅವರು ೧೯೩೦ರಲ್ಲಿ ಕೈಗೊಂಡ ಸವಿನಯ ಕಾನೂನು ಭಂಗ ಚಳವಳಿಯಲ್ಲಿ ಭಾಗವಹಿಸಿದ ಮೆಹರಲಿ ನಾಲ್ಕು ತಿಂಗಳ ಸೆರೆವಾಸ ಕಂಡರು. ಪುನ: ೧೯೩೨ರಲ್ಲಿ ದೇಶವಿರೋಧಿ ಷಡ್ಯಂತ್ರದ ಆರೋಪ ಹೊತ್ತುಕೊಂಡು ಎರಡು ವರ್ಷಗಳ ಕಾರಾಗೃಹವಾಸ. ಆಗಲೇ ಆ ನಾಸಿಕ್ ಕಾರಾಗೃಹದಲ್ಲೇ ಯೂಸುಫ್‌ಗೆ ಸಮಾನ ಮನಸ್ಕ ಯುವಕರ ಜತೆ ಬೆರೆಯುವ ಅವಕಾಶ ಸಿಕ್ಕಿ ದೇಶದ ಇತಿಹಾಸದಲ್ಲಿ ಸಮಾಜವಾದದ ಚರಿತ್ರೆ ಆರಂಭಕ್ಕೆ ನಾಂದಿಯಾಗಿದ್ದು. ಈ ಕಾರಾಗೃಹದಲ್ಲಿ ಮೆಹರಲಿ ಮತ್ತು ಜಯಪ್ರಕಾಶ್ ನಾರಾಯಣ್, ಮಿನೂ ಮಸಾನಿ, ನಾನಾಸಾಹೇಬ್ ಗೋರೆ, ಅಶೋಕ ಮೆಹತಾ ಮುಂತಾದ ಸಮಾನ ಮನಸ್ಕ ಗೆಳೆಯರ ಚರ್ಚೆಗಳ ಮಧ್ಯೆಯೇ ಕಾಂಗ್ರೆಸ್‌ನೊಳಗೆ ಒಂದು ಸಮಾಜವಾದಿ ಪಕ್ಷ ರಚಿಸಿಕೊಂಡು ಕಾಂಗ್ರೆಸ್‌ಗೊಂದು ಕ್ರಾಂತಿಕಾರಿ ಶಕ್ತಿ ನೀಡಬೇಕೆಂಬ ಹೊಳಹು ಹುಟ್ಟಿದ್ದು ಮತ್ತು ಮುಂದೆ ೧೯೩೪ರಲ್ಲಿ ಪಟ್ನಾದಲ್ಲಿ ನರೇಂದ್ರದೇವ ಅವರ ಹಿರಿತನದಲ್ಲಿ ಇತರ ಸಮಾನಮನಸ್ಕರೊಂದಿಗೆ ಸೇರಿ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಸ್ಥಾಪನೆಯಾದದ್ದು. ಜೆಪಿ, ಮಸಾನಿ, ಅಚ್ಯುತ ಪಟವರ್ಧನ್, ಲೋಹಿಯಾ, ಮೆಹರಲಿ ಹಾಗೂ ಅಶೋಕ ಮೆಹ್ತಾರಂತಹ ಮಹಾ ದಿಟ್ಟ ಹೋರಾಟಗಾರರ ಮತ್ತು ಬೌದ್ಧಿಕ ದೈತ್ಯರುಗಳ ನಡುವೆ ಉಂಟಾದ ಸಮಾಜವಾದಿ ಸಿದ್ಧಾಂತದ ಬೆಸುಗೆಯಲ್ಲಿ ವೈಯಕ್ತಿಕ ಗೆಳೆತನದ ಹೊಳಪೂ ಕೂಡಿಕೊಂಡಿತ್ತು.

ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಸ್ಥಾಪನಾ ಸಮಯದಲ್ಲಿ ಯೂಸುಫ್ ಮೆಹರಲಿ ಪಾತ್ರ ಗಮನಾರ್ಹವಾಗಿತ್ತೆಂದು ಮತ್ತೊಬ್ಬ ಸಮಾಜವಾದಿ ಮಧು ದಂಡವತೆ ಅವರು ದಾಖಲಿಸಿದ್ದಾರೆ. ಕಾಂಗ್ರೆಸ್ ಸಮಾಜವಾದಿ ಪಾರ್ಟಿಗೆ ದೇಶಾದ್ಯಂತ ಯುವ ಜನರನ್ನು ಸೆಳೆದು ತಂದವರೇ ಮೆಹರಲಿ. 'ಶ್ರಮಜೀವಿ ವರ್ಗವು ಸ್ವಾತಂತ್ರ್ಯ ಹೋರಾಟದಲ್ಲಿ ರೈತರು ಹಾಗೂ ಮಧ್ಯಮವರ್ಗಗಳವರನ್ನು ಜತೆ ಮಾಡಿಕೊಂಡು ಹೊರಟಾಗ ಮಾತ್ರ ಯಶ ಕಾಣಲು ಸಾಧ್ಯ. ಅವರೆಲ್ಲ ಒಂದು ರಾಜಕೀಯ ವೇದಿಕೆಯಲ್ಲಿರಬೇಕು. ಆ ವೇದಿಕೆಯೇ ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿ' ಎಂದು ನಿರೂಪಿಸಿದವರು ಮೆಹರಲಿ. ದೇಶಾದ್ಯಂತ ಪ್ರವಾಸ ಕೈಗೊಂಡು ಯುವಕರನ್ನು ಸಂಘಟಿಸಿದರು. ತೀವ್ರ ರಾಜಕೀಯ ಶಿಕ್ಷಣದಿಂದ ಮಾತ್ರ ಸೋಷಲಿಸ್ಟ್ ಸಿದ್ಧಾಂತ ಹರಡಲು ಸಾಧ್ಯ ಎಂದು ನಂಬಿದ್ದ ಅವರು ಯುವಕರಿಗೆ ರಾಜಕೀಯ ಶಿಕ್ಷಣದ ಪಠ್ಯವನ್ನೇ ಸಿದ್ಧ ಪಡಿಸಿದರು. ಸೋಷಲಿಸ್ಟ್ ಕಾರ್ಯಕರ್ತ ಬೌದ್ಧಿಕವಾಗಿ ಬೆಳೆಯಬೇಕೆಂದರು. ಯುವಕರಿಗೆ ವಿವಿಧ ಚಳವಳಿಗಳ ಪರಿಚಯವಿರಬೇಕು ಎನ್ನುತ್ತಿದ್ದ ಅವರು ಕಾರ್ಯಕರ್ತರು ಓದಬೇಕಾದುದೇನು ಎಂಬ ಪಟ್ಟಿಯನ್ನೇ ತಯಾರಿಸಿದ್ದರು.

ಮುಂಬೈ ಮಹಾನಗರ ಸಭೆಯ ಸದಸ್ಯರಾಗಿದ್ದ ಮೆಹರಲಿ, ೧೯೪೨ರಲ್ಲಿ ಯರವಾಡಾ ಸೆರೆಮನೆಯಲ್ಲಿದ್ದಾಗಲೇ ಮುಂಬೈನ ಮೊಟ್ಟಮೊದಲ ಸೋಷಲಿಸ್ಟ್ ಮೇಯರ್ ಆಗಿ ಆಯ್ಕೆಯಾಗುವಷ್ಟು ಆ ಮಹಾನಗರದಲ್ಲಿ ಜನಪ್ರಿಯ ನಾಯಕರಾಗಿದ್ದರು. ೧೯೪೨ರ ಆಗಸ್ಟ್ ಕಾಂಗ್ರೆಸ್ ಅಧಿವೇಶನಕ್ಕೆ ಮಹಾತ್ಮಗಾಂಧಿ ಬಂದಾಗ ಅವರನ್ನು ಮೇಯರ್ ಆಗಿ ಸ್ವಾಗತಿಸಲು ನಾಟಕೀಯ ರೀತಿಯಲ್ಲಿ ಹಾಜರಾಗಿ ಎಲ್ಲರನ್ನೂ ಚಕಿತಗೊಳಿಸಿದವರು ಈ ಮೆಹರಲಿ. ಆ ಅಧಿವೇಶನದಲ್ಲೇ ಗಾಂಧಿ ಬ್ರಿಟಿಷರ ವಿರುದ್ಧ 'ಚಲೇಜಾವ್' ಚಳವಳಿಯ ಘೋಷಣೆ ಮೊಳಗಿಸಿದ್ದು. 'ಕ್ವಿಟ್ ಇಂಡಿಯಾ' ಎಂದೇ ಸುವಿಖ್ಯಾತವಾಗಿರುವ ಈ ಘೋಷಣೆಯನ್ನು ಟಂಕಿಸಿದವರು ಯೂಸೂಫ್ ಮೆಹರಲಿಯವರೇ ಎಂದು ಹೇಳಲಾಗುತ್ತದೆ.

ಗಾಂಧೀಜಿ 'ಚಲೇಜಾವ್' ಚಳವಳಿಗೆ ಕರೆ ನೀಡಲು ಸಿದ್ಧತೆ ನಡೆಸಿದ್ದಾಗ, ಗಾಂಧಿ ಹಾಗೂ ಇತರೆ ಹಿರಿಯ ನಾಯಕರ ಬಂಧನವಾಗುತ್ತದೆ ಎಂಬುದನ್ನು ಮುನ್ನೋಡಿದ್ದ ಮೆಹರಲಿ ಹಲವಾರು ಯುವ ಸೋಷಲಿಸ್ಟ್ ನಾಯಕರು, ಕಾರ್ಯಕರ್ತರು ಚಳವಳಿಯ ಕಾವನ್ನು ಕಾಯ್ದುಕೊಳ್ಳಲು, ಭೂಗತ ಹೋರಾಟಕ್ಕೆ ಸಿದ್ಧವಾಗಿರುವಂತೆ ಎಚ್ಚರಿಸಿ ಅವರನ್ನು ಅಣಿಗೊಳಿಸಿದರು. ಆದರೆ ಅವರಿಗೆ ಸ್ವತ: ಬಂಧನ ತಪ್ಪಿಸಿಕೊಳ್ಳಲಾಗಲಿಲ್ಲ. ಆಗ ಪೋಲೀಸರ ಹೊಡೆತದಿಂದ ಅವರ ಹೃದಯಕ್ಕಾದ ಪೆಟ್ಟು, ಅವರ ಆರೋಗ್ಯಕ್ಕೆ ಮಾತ್ರವಲ್ಲದೆ, ಮುಂದೆ ಸಮಾಜವಾದಿ ಆಂದೋಳನ ವ್ಯಕ್ತಿಗತ ಪ್ರತಿಷ್ಠೆಗಳಿಂದ ವಿಘಟನೆಯ ಹಾದಿ ಹಿಡಿದಾಗ ಅದನ್ನು ತಡೆಯಬಲ್ಲದಾಗಿದ್ದ ಶಕ್ತಿಗೂ ಆದ ಪೆಟ್ಟು ಎಂದೂ ಹೇಳಬಹುದು.

(೫ನೇ ಪುಟದಲ್ಲಿ ಮುಂದುವರೆದಿದೆ

ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆ-೪೪


-ಇಂದಿರಾ ಬಿ.ಕೃಷ್ಣಪ್ಪ

ಚುನಾವಣಾ ರಣರಂಗದಲ್ಲಿ...

ಭದ್ರಾವತಿಯ ಸರ್ ಎಂ.ವಿ. ಕಾಲೇಜಿನ ಪ್ರಾಂಶುಪಾಲರಾಗಿದ್ದ ಅವಧಿಯಲ್ಲಿ ಪ್ರೊ. ಕೃಷ್ಣಪ್ಪನವರು ೧೯೯೧ರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದು ಅವರ ಜೀವನದ ಮತ್ತು ದಸಂಸದ ಇತಿಹಾಸದಲ್ಲಿ ಮಹತ್ತರ ಬದಲಾವಣೆಯ ಕಾಲಘಟ್ಟವೆನ್ನಬಹುದು. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಚುನಾವಣಾ ಪದ್ಧತಿ, ಪಕ್ಷ ರಾಜಕಾರಣ, ಆಳುವ ಸರ್ಕಾರಗಳು - ಇವುಗಳಲ್ಲಿನ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ದುರಾಡಳಿತ, ಬಂಡವಾಳಶಾಹಿ - ಭೂಮಾಲೀಕ ವರ್ಗದ ಸಾಧನವಾದ ಚುನಾವಣಾ ವ್ಯವಸ್ಥೆ - ಇತ್ಯಾದಿಗಳನ್ನು ದಸಂಸ ಉಗಮವಾದಾಗಿನಿಂದಲೂ, ಗಮನಿಸುತ್ತಾ ಚರ್ಚಿಸುತ್ತಾ ಹಲವು ವಿಧದ ನಿರ್ಣಯಗಳನ್ನು ಆಯಾಯಾ ಕಾಲಘಟ್ಟದಲ್ಲಿ ತೆಗೆದುಕೊಂಡಿರುವುದನ್ನು ಕಾಣಬಹುದು.

ಪ್ರಥಮವಾಗಿ ಕಾಂಗ್ರೆಸ್‌ನ ಏಕಪಕ್ಷೀಯ ಆಡಳಿತದ ವಿರುದ್ಧ ಜೆಪಿ ಚಳುವಳಿಯ ಸಂದರ್ಭದಲ್ಲಿ, ಜನತಾ ಪಕ್ಷವನ್ನು ಬೆಂಬಲಿಸಿದ್ದು, ನಂತರದ ದಿನಮಾನದಲ್ಲಿ ಚುನಾವಣೆ ಒಂದು ವಂಚನೆ ಎಂದು ಚುನಾವಣೆಯನ್ನು ಬಹಿಷ್ಕರಿಸಿದ್ದು, (ಚಿಕ್ಕಮಗಳೂರು ಲೋಕಸಭಾ ಚುನಾವಣೆ ಸಂದರ್ಭ) ಮುಂದೆ ತಟಸ್ಥ ನೀತಿ, ಮುಂದಿನ ದಿನಗಳಲ್ಲಿ ಎಡಪಕ್ಷಗಳು ಹಾಗೂ ಸಮರ್ಥ ಅಭ್ಯರ್ಥಿ ಇರುವ ಕಡೆ ಬೆಂಬಲ ನೀಡುವುದು ಮತ್ತು ಚುನಾವಣೆಯಲ್ಲಿ ಸ್ಪರ್ಧಿಸದೆ ಇರುವುದು, ತದನಂತರದಲ್ಲಿ ಬಿಜೆಪಿ - ಕಾಂಗ್ರೆಸ್ ಪಕ್ಷಗಳಿಗೆ ಪರ್ಯಾಯವಾದ, ಮೂರನೆಯ ರಾಜಕೀಯ ಪಕ್ಷವಿಲ್ಲದ್ದರಿಂದ, ಜನತಾ-ಕಮ್ಯುನಿಸ್ಟ್ ಪಕ್ಷಗಳಿಗೆ ಬೆಂಬಲ, ೧೯೮೯ರ ವೇಳೆಗೆ ಎದ್ದ ದಸಂಸ ರಾಜಕೀಯಕ್ಕೆ ಇಳಿಯಬೇಕೆ ಎಂಬ ಪ್ರಶ್ನೆ,, ಜನತಾದಳದೊಂದಿಗೆ ಹೊಂದಾಣಿಕೆ ಪ್ರಯತ್ನಗಳ ವಿಫಲತೆ ಹಾಗೂ ಹಲವು ಕಡೆ ಸ್ವತಂತ್ರವಾಗಿ ಸ್ಪರ್ಧೆ ಹಾಗೂ ಸೋಲು, ೧೯೯೧ರ ಲೋಕಸಭಾ ಚುನಾವಣೆಯಲ್ಲಿ ಜನತಾದಳದೊಂದಿಗಿನ ಮೈತ್ರಿಯ ಸಫಲತೆ, ೧೯೯೪-೯೫ರ ವೇಳೆಗೆ 'ಬಿಎಸ್‌ಪಿ'ಯನ್ನು ರಾಜಕೀಯ ಪಕ್ಷವಾಗಿ ಅಂಗೀಕರಿಸಿದ್ದು ಇವುಗಳು ಪ್ರಜಾಪ್ರಭುತ್ವದಲ್ಲಿ ರಾಜಕೀಯ ಅಧಿಕಾರವಿಲ್ಲದೆ, ವ್ಯವಸ್ಥೆಯ ಬದಲಾವಣೆ ಸಾಧ್ಯವಿಲ್ಲವೆಂಬುದರ ಕಡೆಗೆ ದಸಂಸ ಪರಿಕ್ರಮಿಸಿದ್ದನ್ನು ಅವಲೋಕಿಸಬಹುದಾಗಿದೆ.

ಹತ್ತನೇ ಲೋಕಸಭೆಗಾಗಿ ಘೋಷಿತವಾದ ೧೯೯೧ರ ಚುನಾವಣೆಯಲ್ಲಿ ಸ್ಪರ್ಧಿಸುವ ನಿಲುವನ್ನು ತೆಗೆದುಕೊಂಡ ದಸಂಸ, ಆಗ ಪ್ರತಿಪಕ್ಷವಾಗಿದ್ದ ಜನತಾದಳದೊಂದಿಗೆ ಮೈತ್ರಿಯ ಹಸ್ತ ಚಾಚುತ್ತದೆ. ಕೇಳಿದಷ್ಟು ಸ್ಥಾನಗಳು ದೊರಕದಿದ್ದರೂ ಒಂದು ಸ್ಥಾನದ ಖಚಿತತೆಯಿಂದಾಗಿ, ದಸಂಸದ ಹಿರಿಯ ಮುಖಂಡರಾಗಿದ್ದ ಪ್ರೊ. ಬಿ. ಕೃಷ್ಣಪ್ಪ, ಜನತಾದಳದ ಚಿನ್ಹೆ(ಚಕ್ರ)ಯೊಂದಿಗೆ, ಮಿತ್ರ ಪಕ್ಷಗಳಾದ ಸಮಾಜವಾದಿ ಜನತಾದಳ, ಸಿಪಿಎಂ, ಸಿಪಿಐ ಬೆಂಬಲದೊಂದಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ತೀರ್ಮಾನಿಸಿತ್ತು. ಮಿತ್ರ ಪಕ್ಷಗಳೊಂದಿಗೆ ಚರ್ಚೆಗಳು, ಸ್ಪರ್ಧಿಸುವ ಕ್ಷೇತ್ರಗಳ ನಿಖರತೆ, ಬಿ-ಫಾರಂ ವಿತರಣೆಯ ಕಸರತ್ತುಗಳು, ಕೋಲಾರವೋ - ಚಿಕ್ಕೋಡಿಯೋ ಎಂಬ ಸಂದಿಗ್ಧತೆಯಲ್ಲಿದ್ದಾಗ ಮಿತ್ರರ ಸಲಹೆ ಮೇರೆಗೆ ಕೃಷ್ಣಪ್ಪ ಎರಡು ಕಡೆಯಲ್ಲಿ ಸದ್ಯಕ್ಕೆ ನಾಮಪತ್ರ ಸಲ್ಲಿಸುವ ನಿರ್ಣಯ ಕೈಗೊಂಡರು. ನಾಮಪತ್ರ ಸಲ್ಲಿಕೆಗೆ ಅಗತ್ಯವಿದ್ದ, ಮತಪತ್ರದ ಉದ್ಧೃತಭಾಗದ ಧೃಡೀಕೃತ ಪ್ರತಿಯನ್ನು ತಾಲ್ಲೂಕು ಕಚೇರಿಗೆ ನಾನೇ ಅರ್ಜಿ ಸಲ್ಲಿಸಿ, ಪಡೆದು ತಂದುಕೊಟ್ಟಿದ್ದೆ. ಎರಡು ಹಂತದಲ್ಲಿ ಅಂದರೆ ಮೇ ೨೩ ಮತ್ತು ಮೇ ೨೬ರಲ್ಲಿ ನಡೆಯುವ ಚುನಾವಣೆಯಲ್ಲಿ ಚಿಕ್ಕೋಡಿಗೆ ಮೇ ೨೩ರೊಳಗೆ ನಾಮಪತ್ರ ಸಲ್ಲಿಸಲೇಬೇಕಿತ್ತು. ಗೊಂದಲಗಳ ಇತ್ಯರ್ಥಕ್ಕಾಗಿ, ಬೆಂಗಳೂರಿನಲ್ಲೇ ವಾಸ್ತವ್ಯ ಹೂಡಿದ್ದ ಕೃಷ್ಣಪ್ಪ ರಾತ್ರೋರಾತ್ರಿ ಮನೆಗೆ ವಾಪಾಸಾಗಿ, ಪುನಃ ಸಿದ್ಧರಾಗಿ ಚಿಕ್ಕೋಡಿಗೆ ಪ್ರಯಾಣ ಬೆಳೆಸಿದರು. ನಿಗದಿತ ಸಮಯಕ್ಕೆ ಇವರು ಹೋಗಿ, ನಾಮಪತ್ರ ಸಲ್ಲಿಸಲು ಸಾಧ್ಯವಾಗಲಾರದೇನೋ ಎಂಬ ಶಂಕೆ ನನ್ನಲ್ಲಿತ್ತು. ಕಾಕತಾಳೀಯವೋ ಎಂಬಂತೆ, ಚಿಕ್ಕೋಡಿ ಕ್ಷೇತ್ರದ ಚುನಾವಣಾಧಿಕಾರಿಗಳಾಗಿ, ನಾನು ಕರ್ತವ್ಯ ನಿರ್ವಹಿಸುತ್ತಿದ್ದ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಯು.ಎಸ್. ನೆಜ್ಜೂರ್‌ರವರು ನಿಯುಕ್ತರಾಗಿದ್ದರು. ನಾನು ಧೈರ್ಯಮಾಡಿ, ಅವರಿಗೊಂದು ಫೋನ್ ಹಾಯಿಸಿ, "ಕೃಷ್ಣಪ್ಪನವರು ತಲುಪುವ ಸಮಯ ಸ್ವಲ್ಪ ವ್ಯತ್ಯಾಸವಾದಲ್ಲಿ ಸಹಕರಿಸಬೇಕಾಗಿ ಕೋರಿಕೊಂಡೆ. ಅತ್ಯುತ್ತಮ ತಹಸೀಲ್ದಾರ್



ಪತ್ನಿ ಮತ್ತು ಸೋದರರೊಂದಿಗೆ ವಿರಾಮದ ಕ್ಷಣಗಳಲ್ಲಿ ಬಿ.ಕೃಷ್ಣಪ್ಪ

ಜನಸಾಮಾನ್ಯರಿಗೆ ಸಕಾರಾತ್ಮವಾಗಿ ಸ್ಪಂದಿಸುವವರಾಗಿದ್ದ ನೆಜ್ಜೂರ್‌ರವರು "ಚಿಂತೆ ಬೇಡ" ಎಂದಷ್ಟೇ ಹೇಳಿದರು. ನಾಮಪತ್ರ ಸಲ್ಲಿಸುವ ಕಡೆಯ ಐದು ನಿಮಿಷದೊಳಗೆ, ನಾಮಪತ್ರ ಸಲ್ಲಿಸಿದರೆಂದು, ಸಂಜೆ ವೇಳೆಗೆ ಅವರೇ ನನಗೆ ತಿಳಿಸಿದರು.

ಚಿಕ್ಕೋಡಿಯಿಂದ ವಾಪಾಸಾದ ಕೃಷ್ಣಪ್ಪ ಕೋಲಾರಕ್ಕೆ ಪ್ರಯಾಣಿಸಿದ್ದರು. ಕೋಲಾರದಲ್ಲಿ, ದಸಂಸದ ಕಾರ್ಯಕರ್ತರು, ಪಕ್ಷದ ಮುಖಂಡರುಗಳಾದ ವಿ.ಆರ್. ಸುದರ್ಶನ್ (ಆಗ ವಿಧಾನ ಪರಿಷತ್ತಿನ ಸದಸ್ಯರು), ರಮೇಶ್ ಕುಮಾರ್ (ಆಗ ಮಾಜಿ ಶಾಸಕರು) ಮತ್ತು ದಸಂಸದ ಹಿರಿಯ ಮುಖಂಡರಾದ, ಚಂದ್ರ ಪ್ರಸಾದ್ ತ್ಯಾಗಿ, ಎನ್. ಶಿವಣ್ಣ, ಎನ್. ಮುನಿಸ್ವಾಮಿ, ಮುನಿಯಪ್ಪ ಮುಂತಾದವರೊಂದಿಗೆ ಕೃಷ್ಣಪ್ಪನವರು ದಿ. ೨೬.೪.೧೯೯೧ರಂದು ನಾಮಪತ್ರ ಸಲ್ಲಿಸಿದ್ದರು. ಆರಂಭದಲ್ಲಿ ಕೋಲಾರಕ್ಕೆ ಕೃಷ್ಣಪ್ಪ ಹೊರಗಿನ ಅಭ್ಯರ್ಥಿಯೆಂದೂ ನಮ್ಮ ವಿರುದ್ಧವೇ ಹೋರಾಟ ಕಟ್ಟಿದವರ ಪರ ಹೇಗೆ ಓಟು ಕೇಳುವುದು ಮತ್ತು ಚಳುವಳಿ ರಾಜಕೀಯ ಪಕ್ಷವಾಯಿತೇ ಎಂದು ಅಪಸ್ವರಗಳು ಎದ್ದಿದ್ದವು. ಅದರೊಂದಿಗೆ ದಸಂಸದಿಂದ ಪ್ರತ್ಯೇಕಗೊಂಡ ಬಣಗಳವರು, ಹಿಂದೆ ಜನತಾ ಪಕ್ಷವನ್ನು ಬೆಂಬಲಿಸಿದ ದೇವನೂರು ಮಹಾದೇವರನ್ನು ಪ್ರಶ್ನಿಸಿದ ಕೃಷ್ಣಪ್ಪನವರೇ ಇಂದು ಚುನಾವಣಾ ಕಣಕ್ಕಿಳಿದಿರುವುದನ್ನು ಟೀಕಿಸುತ್ತಾ ಚುನಾವಣೆಯನ್ನು ಬಹಿಷ್ಕರಿಸಲು ಕರೆ ನೀಡಿದ್ದರು.

ಕೋಲಾರ (ಮೀಸಲು) ಲೋಕಸಭಾ ಕ್ಷೇತ್ರದಲ್ಲಿ ಕೃಷ್ಣಪ್ಪನವರು ಸೇರಿದಂತೆ, ೧೬ ಅಭ್ಯರ್ಥಿಗಳು ಸ್ಪರ್ಧಿಸಿದರು. ಸಾಮಾಜಿಕ ನ್ಯಾಯದ ಮಂಡಲ್ ವರದಿಯ ವಿ.ಪಿ. ಸಿಂಗ್‌ರವರ ಪರವಾದ ಮತ್ತು ಬಾಬ್ರಿ ಮಸೀದಿ ಧ್ವಂಸ - ರಾಮಜನ್ಮ ಭೂಮಿ - ಕರಸೇವೆ - ಹಿಂದೂ ಮೂಲಭೂತವಾದದ ವಿರುದ್ಧದ ಅಲೆಯೇ ಅಲ್ಲಿ ಪ್ರಧಾನವಾಗಿತ್ತು. ಕೃಷ್ಣಪ್ಪನವರ ಪರವಾಗಿ ಚುನಾವಣಾ ಪ್ರಚಾರದಲ್ಲಿ ರಾಷ್ಟ್ರೀಯ ನಾಯಕರಾದ ರಾಮ್‌ವಿಲಾಸ್ ಪಾಸ್ವಾನ್, ರಾಜ್ಯ ನಾಯಕರುಗಳಾದ ಜೆ.ಹೆಚ್. ಪಟೇಲ್, ಎಂ.ಪಿ.ಪ್ರಕಾಶ್, ಡಿ.ಬಿ. ಚಂದ್ರೇಗೌಡ, ರಮೇಶ್‌ಕುಮಾರ್, ಕೃಷ್ಣಾರೆಡ್ಡಿ, ಸಿ. ಭೈರೇಗೌಡ, ಎಂ. ನಾರಾಯಣ ಸ್ವಾಮಿ, ಬಿ. ಮುನಿಯಪ್ಪ, ಅಶ್ವತ್ಥ ನಾರಾಯಣ (ಸಿ.ಪಿ.ಎಂ), ಸಿ.ಎಂ. ಆರ್ಮುಗಂ (ಆರ್‌ಪಿಐ) ದಸಂಸದ ಹಿರಿಯ ಮುಖಂಡರು ಪಾಲ್ಗೊಂಡಿದ್ದರು. ರಾಜ್ಯ ಮಟ್ಟದ ಪತ್ರಿಕೆಗಳಾದ 'ಪ್ರಜಾವಾಣಿ', 'ಕನ್ನಡ ಪ್ರಭ' ಮತ್ತು ಸ್ಥಳೀಯ .ದೈನಿಕಗಳಾದ 'ಕೋಲಾರ ಪತ್ರಿಕೆ', 'ಸುದ್ದಿಸಂಚಯ', 'ಹೊನ್ನುಡಿ' ಇತ್ಯಾದಿ ಪತ್ರಿಕೆಗಳು ಚುನಾವಣಾ ಅಲೆ ಜನತಾದಳದ ಪರವಾಗಿರುವುದನ್ನು ಬಿಂಬಿಸಿದ್ದವು.

ಆದರೇನು ಆ ಸಂದರ್ಭದಲ್ಲಿ ನಡೆದ ಯೋಜಿತ - ಭಯಾನಕ ರಾಜಕೀಯ ದುರಂತವೊಂದು ಚುನಾವಣಾಗತಿಯನ್ನು ಅನುಕಂಪದ ಅಲೆಯಾಗಿ ಪರಿವರ್ತಿಸಿದ್ದನ್ನು ಗಮನಿಸಬಹುದಾಗಿದೆ. ಶ್ರೀಲಂಕಾದಲ್ಲಿನ ಎಲ್.ಟಿ.ಟಿ.ಇ. ಹೋರಾಟಕ್ಕೆ ಬೆಂಬಲ ನೀಡಲು ಭಾರತದ ಸಹಕಾರವನ್ನು ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ರಾಜೀವ್ ಗಾಂಧಿಯವರು ನಿರಾಕರಿಸಿದ ವಿಚಾರ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಬಹು ಚರ್ಚಿತವಾದ ವಿಷಯವಾಗಿತ್ತು. ಅಂತಹ ಸಂದರ್ಭದಲ್ಲಿ ೨೧.೦೫.೧೯೯೧ರಂದು ಮದರಾಸಿನ ಬಳಿಯ

ಶ್ರೀಪೆರಂಬದೂರಿನಲ್ಲಿ ಚುನಾವಣಾ ರ್‍ಯಾಲಿಯಲ್ಲಿ ಭಾಗವಹಿಸಲು ಆಗಮಿಸಿದ್ದ ರಾಜೀವ್ ಗಾಂಧಿಯವರನ್ನು "ಧನು" ನಾಮಾಂಕಿತದ ಮಹಿಳೆ ಮಾನವ ಬಾಂಬ್ ಸ್ಫೋಟಿಸುವುದರ ಮೂಲಕ ದಾರುಣ ಹತ್ಯೆಗೈಯಲಾಯಿತು.

ರಾಜೀವ್ ಗಾಂಧಿಯವರ ಹತ್ಯೆಯ ಕಾರಣದಿಂದಾಗಿ ನಿಗದಿಯಾದ ಚುನಾವಣಾ ದಿನಾಂಕಗಳು, ಜೂನ್ ೧೨ ಮತ್ತು ೧೫ನೇ ದಿನಾಂಕಕ್ಕೆ ಮುಂದೂಡಲ್ಪಟ್ಟವು. ಅವರ ಹತ್ಯೆಯನ್ನು ಕಾಂಗ್ರೆಸ್ ಪಕ್ಷ ಚುನಾವಣಾ ರಾಜಕೀಯಕ್ಕೆ ಕರುಣೆಯ ಋಣ ತೀರಿಸುವ ಮತವಾಗಿ ಪ್ರಯೋಗಿಸಿದ್ದನ್ನು ಕಾಣಬಹುದು. ಕೋಲಾರ ಕ್ಷೇತ್ರದಲ್ಲಿ ನಡೆದ ಶ್ರದ್ಧಾಂಜಲಿಗಳು, ಪುಣ್ಯತಿಥಿಗಳು, ಚಿತಾಭಸ್ಮ ಮೆರವಣಿಗೆ, ವಿಶೇಷ ಪೂಜೆ, ಅನ್ನ ಸಂತರ್ಪಣೆಗಳು, ಜನರ ಭಾವಾವೇಶವನ್ನು ಓಟ್‌ಬ್ಯಾಂಕ್ ರಾಜಕಾರಣಕ್ಕೆ ಸಜ್ಜುಗೊಳಿಸಿದಂತಿತ್ತು.

ಈ ಎಲ್ಲಾ ರಾಜಕೀಯ ವಿಪ್ಲವಗಳೊಂದಿಗೆ, ಹಣಕಾಸಿನ ತೀವ್ರ ಮುಗ್ಗಟ್ಟು, ಸೌಲಭ್ಯಗಳ ಕೊರತೆ, ಪಕ್ಷಗಳ ಆಂತರಿಕ ಬಿಕ್ಕಟ್ಟುಗಳು, ದಸಂಸದ ಸಂಪೂರ್ಣ ಸಹಭಾಗಿತ್ವವಿಲ್ಲದ ನಡೆಗಳು, ಜನರು ಮುಂದೊಡ್ಡುತ್ತಿದ್ದ ಸವಾಲುಗಳು, ಕೃಷ್ಣಪ್ಪನವರನ್ನು ಬೆಂದು – ಬಸವಳಿಯುವಂತೆ ಮಾಡಿದ್ದವು. ಚುನಾವಣಾ ರಾಜಕೀಯ ಓಡಾಟದಲ್ಲಿ ಕೃಷ್ಣಪ್ಪ ೪–೫ ತಿಂಗಳಿಂದ ಮನೆಗೆ ಬಂದು ನೆಮ್ಮದಿಯ ದಿನಗಳನ್ನು ಕಳೆದದ್ದೇ ಇಲ್ಲ. ಏಪ್ರಿಲ್ ನಂತರ ಮನೆಗೆ ಫೋನಾಯಿಸುವುದೂ ನಿಂತುಹೋಯಿತು. ಕೋಲಾರಕ್ಕೆ ಹೋಗಿ ಬಂದ ಗೆಳೆಯರು, ದಸಂಸದ ಒಡನಾಡಿಗಳಿಂದ ಅವರ ನಿತ್ಯದ ತಿರುಗಾಟದ ವಿಚಾರಗಳು ನನಗೆ ತಿಳಿಯುತ್ತಿತ್ತು. ಇನ್ನು ನಾನಿಲ್ಲಿರುವುದು ಸರಿಯಲ್ಲವೆಂದು, ದಸಂಸದ ಶಿವಲಿಂಗಪ್ಪ, ನರಸಿಂಹಮೂರ್ತಿ, ರಾಜಣ್ಣ ಮುಂತಾದವರೊಂದಿಗೆ ಕೋಲಾರಕ್ಕೆ ಹೊರಟ ನಾನು, ಕೋಲಾರದಲ್ಲಿ ಆಗ 'ಪ್ರಜಾವಾಣಿ' ವರದಿಗಾರರಾಗಿದ್ದ ಪ್ರಸನ್ನರವರ ಮನೆಯಲ್ಲಿ ತಂಗಿದ್ದೆ. ಪ್ರಸನ್ನರವರು, ಶಿವಮೊಗ್ಗ ಜಿಲ್ಲೆಯಲ್ಲಿ ಹಿಂದೆ ಚಂದ್ರಗುತ್ತಿ ಬೆತ್ತಲೆ ಸೇವೆ ವಿರುದ್ಧದ ಹೋರಾಟದ ಸಂದರ್ಭದಲ್ಲಿ ಪ್ರಮುಖ ವರದಿಗಾರರಾಗಿದ್ದು, ನನಗೆ ಪರಿಚಯವಾಗಿದ್ದರು.

ಕೋಲಾರದಲ್ಲಿ ಮತ್ತು ದಸಂಸದ ಕಾರ್ಯಕರ್ತರೊಂದಿಗೆ ದಿನನಿತ್ಯ, ಕೋಲಾರ, ಮಾಲೂರು, ವೇಮಗಲ್, ಕೆಜಿಎಫ್, ತಾಲ್ಲೂಕುಗಳ ಅನೇಕ ಹಳ್ಳಿಗಳಲ್ಲಿ ಪ್ರಚಾರ ಮಾಡಿದ್ದೆವು ಮತ್ತು ಜನರ ಒಲವು ಯಾವ ಕಡೆಗೆ ಎಂಬುದನ್ನು ಗಮನಿಸಿದ್ದೆವು. ನಾನು ಕೋಲಾರಕ್ಕೆ ಬಂದ ವಿಷಯ ಪ್ರಸನ್ನರ ಮೂಲಕ ತಿಳಿದುಕೊಂಡ ಕೃಷ್ಣಪ್ಪ ಒಂದು ದಿನ ಬೆಳಿಗ್ಗೆಯೇ ಮನೆಯ ಬಳಿ ಬಂದಿದ್ದರು. ಬಾಗಿಲಾಚೆ ಅವರು ಮತ್ತವರ ಪ್ರಚಾರದ ಸಂಗಾತಿಗಳು ಬಾಗಿಲೀಚೆ ನಾನು ನಿಂತಿದ್ದೆ. ಒಳಗೆ ಬನ್ನಿ ಎಂದೆ, ಅವರು ಬರಲಿಲ್ಲ. ಮಕ್ಕಳು, ಮೈತ್ರಾ, ತಿಪ್ಪೇಶರ ಬಗ್ಗೆ ವಿಚಾರಿಸಿದರು, ಅಷ್ಟೆ. 'ಬರ್‍ಲಾ ?'ಎಂದರು. ನನಗೆ ಮಾತೇ ಹೊರಡಲಿಲ್ಲ. ಒಳಗಡೆ ಬಂದು ನನ್ನೊಡನೆ ನಾಲ್ಕು ಮಾತು ಆಡಬೇಕೆಂದು ಇವರಿಗೇಕೆ ಅನ್ನಿಸುತ್ತಿಲ್ಲ? ನನ್ನೊಡಲಲ್ಲಿರುವ ಮಾತುಗಳನ್ನು ಎಲ್ಲರ ಮುಂದೆ ಹೇಗೆ ಹೇಳಲಿ? ಕಣ್ಣಾಲಿಗಳಲ್ಲಿ ನೀರು ತುಂಬಿದ್ದವು. ಗಂಟಲು ಕಟ್ಟಿ, ಮೌನ ಮುಂದಾಯಿತು. ಕೈ ಎತ್ತಿ ಬೈ ಹೇಳಿದೆ. ಬಂದವರೊಡನೆ ಅವರು ಹೊರಟರು. ನಂತರ 'ಛೇ, ನಾನ್ಯಾಕೆ ಹೀಗೆ ಭಾವುಕಳಾಗಬೇಕು; ಇದು ಸರಿಯಲ್ಲ' ಎಂದು ಕಣ್ಣೊರೆಸಿಕೊಂಡು ಹೊರಡುವ ಸಿದ್ಧತೆಗೆ ತೊಡಗಿದೆ. ಧುಮ್ಮಿಕ್ಕುವ ಜಲಪಾತದ ರಭಸಕ್ಕೆ ಬಂಡೆಗಲ್ಲು ತಡೆಯಾಗಿ, ಅಲ್ಲೇ ಮಡುಗಟ್ಟಿ, ಪಳೆಯುಳಿಕೆಯಾದ ತೆರದಲ್ಲಿ ಆ ಘಳಿಗೆ ನನ್ನ ಮನದಲ್ಲೀಗಲೂ ಹಸಿರಾಗಿದೆ.

ಚುನಾವಣೆಯ ದಿನಾಂಕ ೧೫.೦೬.೯೧ಕ್ಕೆ ಒಂದೆರಡು ದಿನಗಳು ಬಾಕಿ ಇದ್ದಂತೆ, ಪಕ್ಷದ ಕಾರ್ಯಕರ್ತರೊಂದಿಗೆ, ಮನೆಮನೆಗೆ ಪ್ರಚಾರದಲ್ಲಿ ಕೈಮುಗಿಯುತ್ತಾ ಓಟು ಕೇಳುವ ಕೃಷ್ಣಪ್ಪನವರನ್ನು ಹಲವಾರು ಕಡೆ ನಾವು ದೂರದಿಂದಲೇ ನೋಡಿದ್ದೆವು. ಸ್ವಾಭಿಮಾನ ಶೂನ್ಯರಾಗಿ, ಓಟಿಗಾಗಿ ಕೈಮುಗಿದು ನಿಲ್ಲುವ ಪರಿಸ್ಥಿತಿ ಬಂದುದಕ್ಕೆ ಕೃಷ್ಣಪ್ಪ ಮನದಲ್ಲೆಷ್ಟು ಪರಿತಪಿಸುತ್ತಿರಬಹುದೆಂದು ಅಂದಾಜಿಸಲಾರಂಭಿಸಿದ್ದೆವು. ಚುನಾವಣೆಯ ದಿನವೂ, ಎಲ್ಲೆಲ್ಲಿ ಹೇಗೆ ಓಟು ನಡೆಯುತ್ತಿದೆ ಎಂದು ನೋಡಿ ಬಂದಿದ್ದೆ. ಕೆಲಸಕ್ಕೆ ಸೇರಿದಾಗಿನಿಂದಲೂ, ಚುನಾವಣೆ ನಡೆಸುವ ಸರ್ಕಾರದ ಭಾಗವಾಗಿಯೇ ಕೆಲಸ ಮಾಡುತ್ತಿದ್ದ ನನಗೆ, ಅಭ್ಯರ್ಥಿಯ ದೃಷ್ಟಿಯಿಂದ, ಜನರ ಕಣ್ಣಿನಿಂದ ಮತ್ತು ಪಕ್ಷದ ನೋಟದಿಂದ ಚುನಾವಣೆಯನ್ನು ಎದುರಿಸುವ ಬಹುದೊಡ್ಡ ಪರಿಕ್ರಮದ ಅರಿವು, ಈ ಚುನಾವಣೆಯಲ್ಲಿ ಓಡಾಡಿದ್ದರಿಂದ ದೊರಕಿತ್ತು. ಚುನಾವಣೆಯ ಬಿರುಸಿನ ಭರಾಟೆ ಮುಗಿದು, ಜನರ ಮತಗಳು ಡಬ್ಬಾ ಸೇರಿದ್ದವು. ಮರುದಿನವೇ ಮತ ಎಣಿಕೆ. ಮತ ಎಣಿಕೆ ಕೇಂದ್ರದ ಲೌಡ್‌ಸ್ಪೀಕರಿನಲ್ಲಿನ ಮತ್ತು ಟಿ.ವಿ.ಯಲ್ಲಿ ಮತ ಎಣಿಕೆ ಪ್ರಗತಿಯನ್ನು ಆಲಿಸುತ್ತಾ, ನೋಡುತ್ತಾ ಮಲಗಿದ್ದ ನನಗೆ ಮಧ್ಯರಾತ್ರಿ ವೇಳೆಗೆ ಬಾಗಿಲು ಬಡಿದ ಶಬ್ದ ನನ್ನನ್ನು ಎಚ್ಚರಿಸಿತ್ತು. ಬಾಗಿಲಲ್ಲಿ ಕೃಷ್ಣಪ್ಪ ನಿಂತಿದ್ದರು. ಯುದ್ಧದಲ್ಲಿ ಸೋತು–ಬಳಲಿ, ಅನ್ನ ನೀರು ಕಾಣದ ಅಬ್ಬೇಪಾರಿಯಂತಿದ್ದ ಕೃಷ್ಣಪ್ಪನವರಲ್ಲಿ ಏನನ್ನೂ ಕೇಳದೆ, ನೀರು, ಹಣ್ಣು ಮತ್ತು ಹಾಲನ್ನು ಕೊಟ್ಟು ವಿಶ್ರಮಿಸಿಕೊಳ್ಳಲು ಅನುವು ಮಾಡಿದ್ದೆ. ಹೊರಗಡೆ ಸೋಲುಗೆಲುವಿನ ಏರಿಳಿತಗಳ ಆರ್ಭಟ ಕೇಳುತ್ತಿದ್ದರೆ, ಇಲ್ಲಿ ಹಾಸಿಗೆ ಮೇಲೆ ಕೃಷ್ಣಪ್ಪ ನಿರುಮ್ಮಳವಾಗಿ, ನಿದ್ದೆಗೆ ಜಾರಿದ್ದರು. ಅಲ್ಲಿರಬೇಕಾದ ಇವರು ಹೀಗೆ ಬಂದರಲ್ಲಾ? ಸೋಲು ಖಚಿತವೆಂದಾಗ ವಾಪಾಸಾದರೇನೋ ಎಂದೆಣಿಸಿ, ನಾನು ಮಲಗಿದ್ದೆ. ಬೆಳಗಿನ ಪತ್ರಿಕೆಗಳಲ್ಲಿ, ಟಿ.ವಿ.ಗಳಲ್ಲಿ ಅಂಕಿ ಅಂಶಗಳೊಂದಿಗೆ ಸೋಲಿನ ಚಿತ್ರಣಗಳು ಬಿತ್ತರಗೊಂಡವು. ಅನುಕಂಪದ ಅಲೆ ಇಡೀ ದೇಶದ ನಿರೀಕ್ಷಿತ ಚುನಾವಣಾ ಫಲಿತಾಂಶವನ್ನು ಬುಡ ಮೇಲು ಮಾಡಿತ್ತು. ಮೈತ್ರಿಪಕ್ಷಗಳ ನಾಯಕರುಗಳು, ಭಾರಿ ಸೋಲನ್ನು ಕಂಡಿದ್ದಾರೆಂಬ ಅಂಶವನ್ನೇ ಮುಂದಿಟ್ಟುಕೊಂಡು ಸಮಾಧಾನ ತಾಳುವುದೊಂದೇ ಮಾರ್ಗವಾಗಿತ್ತು. ಚುನಾವಣೆಯಲ್ಲಿ ಒಂದು ಲಕ್ಷ ಐವತ್ತೆರಡು ಸಾವಿರ ಓಟುಗಳನ್ನು ಗಳಿಸಿಯೂ ಪರಾಭವಗೊಂಡಿದ್ದೂ ಅಲ್ಲದೆ, ಕುವೆಂಪು ವಿಶ್ವವಿದ್ಯಾಲಯ ಮತ್ತು ಕಾಲೇಜು ಆಡಳಿತ ಮಂಡಳಿಯ ಕಾನೂನು ಕ್ರಮ ಎದುರಿಸಲು ಕೃಷ್ಣಪ್ಪ, ನಾನು ಭದ್ರಾವತಿಗೆ ಮರಳಿ ಹೊರಟಿದ್ದೆವು.

ಕೋಲಾರದಲ್ಲಿ ರಮೇಶ್ ಕುಮಾರ್‌ರವರ ಮನೆಗೆ ತೆರಳಿ, ಕೃತಜ್ಞತೆ ಹೇಳುವಾಗ, ಅವರು 'ಅಮ್ಮಾ, ನಾವು ಪ್ರೊಫೆಸರ್‌ನ್ನು ಇಲ್ಲಿ ಕರೆದುಕೊಂಡು ಬಂದು ಸೋಲಿಸಿಬಿಟ್ಟೆವಲ್ಲಾ, ನಂಗೆ ಭಾಳ ದುಃಖವಾಗಿದೆಯಮ್ಮ' ಎಂದಿದ್ದರು. ಅವರ ಮನೆಯವರು ಅರಿಶಿಣ, ಕುಂಕುಮ ಬಾಗಿನದೊಂದಿಗೆ ನಮ್ಮನ್ನು ಬೀಳ್ಕೊಟ್ಟರು. ನಂತರ ಬೆಂಗಳೂರಿನಲ್ಲಿ ಪಕ್ಷದ ನಾಯಕರಾಗಿದ್ದ ದೇವೇಗೌಡರನ್ನು ಅವರ ಮನೆಯಲ್ಲಿ ಭೇಟಿಯಾದೆವು. ಅವರೂ ಸಹ ದೇಶಾದ್ಯಂತ ಅಪಜಯದ ಮೌಲ್ಯಾಂಕ ಮಾಡುತ್ತಾ, ವಿಷಾದ ವ್ಯಕ್ತಪಡಿಸಿದ್ದರು. ನಾವು ಭದ್ರಾವತಿಗೆ ಬಂದದ್ದಾಯಿತು. ಅಲ್ಲಿ ಕೊಂಡಿಮಂಚಣ್ಣಗಳು ಕಾದಿದ್ದರು.

ಕಾಲೇಜು ಆಡಳಿತ ಮಂಡಳಿ ಶಿಸ್ತುಕ್ರಮಕ್ಕೆ ಮುಂದಾಯಿತು. ಕುವೆಂಪು ವಿಶ್ವವಿದ್ಯಾಲಯದವರು ಕೃಷ್ಣಪ್ಪನವರ ಮೇಲೆ ತೆಗೆದುಕೊಳ್ಳತೊಡಗಿದ್ದ ಕ್ರಮದ ವಿರುದ್ಧ ಕೋರ್ಟಿನಲ್ಲಿ ಕೃಷ್ಣಪ್ಪ ದಾಖಲಿಸಿದ್ದ, ಪ್ರೊ. ರವಿವರ್ಮಕುಮಾರ್ ವಕಾಲತ್ತು ವಹಿಸಿದ್ದ ರಿಟ್ ಅರ್ಜಿ ನಂ: ೧೫೭೫೦/೯೪ರ ಅಂತಿಮ ತೀರ್ಮಾನದ ಧೃಡೀಕೃತ ಪ್ರತಿಗಾಗಿ ನಾನು ಪ್ರಯತ್ನಿಸಿದ್ದೇನೆ. ಅದನ್ನು ಪಡೆದು ಈ ವಿಷಯವನ್ನು ಮುಂದುವರಿಸುವೆನು. **(ಮುಂದುವರೆಯುವುದು)**

೩ನೇ ಪುಟದಿಂದ)

ಮಾರ್ಚ್ ೩೧, ೧೯೪೯ರಿಂದ ೧೯೫೦ರ ಜುಲೈ ೨ರಂದು ನಿಧನರಾಗುವವರೆಗೆ ಬಾಂಬೆ ಶಾಸನಸಭೆಯ ಸದಸ್ಯರಾಗಿ ಕ್ರಿಯಾಶೀಲ ಸಂಸದೀಯ ಪಟುವಾಗಿ ಕಾರ್ಯ ನಿರ್ವಹಿಸಿದ ಮೆಹರಲಿ, ಸದನದಲ್ಲಿ ಪ್ರಸ್ತಾಪವಾದ ಎಲ್ಲ ವಿಷಯಗಳಿಗೂ ತಮ್ಮ ಛಾಪು ಮೂಡಿಸುತ್ತಿದ್ದರು. ಏಪ್ರಿಲ್ ೪, ೧೯೪೯ರಂದು ಕರ್ನಾಟಕ ವಿಶ್ವವಿದ್ಯಾನಿಲಯ ಸ್ಥಾಪನೆ ಮಸೂದೆಗೆ ತಮ್ಮ ಹೃತ್ಪೂರ್ವಕ ಬೆಂಬಲ ನೀಡುತ್ತಾ ವಿಜಯನಗರ, ಹಳೇಬೀಡು–ಬೇಲೂರುಗಳ ಶಿಲ್ಪಕಲಾವೈಭವ ಮತ್ತು ಕರ್ನಾಟಕ ಸಂಗೀತದ ವೈಶಿಷ್ಟ್ಯ–ಮಹತ್ವಗಳನ್ನು ಕೊಂಡಾಡುತ್ತಾ ಕವಿಯೇ ಆಗುತ್ತಾರೆ ಮೆಹರಲಿ. ಸಾಹಿತ್ಯ, ಕಲೆ, ಭಾರತೀಯ ಶಾಸ್ತ್ರ, ಮುಂತಾದ ಪ್ರಕಾರಗಳಲ್ಲೂ ಅತುಳಾಸಕ್ತಿ ಹೊಂದಿದ್ದ ಅವರು ಸರ್ವರ ಸಮಾನತೆಯ ಆದರ್ಶಕ್ಕೆ ಬದ್ಧರಾಗಿದ್ದ ಅತ್ಯಂತ ಸೃಜನಶೀಲ ಮನಸ್ಸಿನವರೂ ಆಗಿದ್ದರು.

೧೯೫೦ರ ಜುಲೈ ೨ರಂದು ಮುಂಜಾನೆ ಸೂರ್ಯೋದಯಕ್ಕೆ ಮುನ್ನ ಕೇವಲ ೪೭ ವರ್ಷಗಳ ಮೆಹರಲಿ ಕಣ್ಮುಚ್ಚಿದರು. ಗೆಳೆಯನಿಗೆ ಅಂತಿಮ ವಿದಾಯ ಹೇಳಲು ಅಲ್ಲಿದ್ದವರು "ಜೆ.ಪಿ., ಗಾಂಧೀಜಿ ಅವರ ತ್ಯಾಗಮಯ ಜೀವನದ ನಂತರ ನಮ್ಮ ಮನದಲ್ಲಿ ಅಚ್ಚೊತ್ತಿ ಉಳಿಯುವುದು ಯುಸುಫ್ ಮೆಹರಲಿಯವರ ತ್ಯಾಗ ಜೀವನ ಮಾತ್ರ" ಎಂದು ಕಂಬನಿ ಮಿಡಿದರು.

–ಖಾದ್ರಿ ಎಸ್. ಅಚ್ಯುತನ್

ಕಳೆದ ಸಂಚಿಕೆಯಲ್ಲಿ 'ನಮ್ಮ ಸಮಾಜವಾದಿಗಳು' ಅಂಕಣದಲ್ಲಿ ನಾನಾ ಸಾಹೇಬ ಗೋರೆಯವರನ್ನು ಕುರಿತು ಲೇಖನ ಬರೆದವರು ಪ್ರೊ. ಹನುಮಂತ ಅವರು. ಕಣ್ತಪ್ಪಿನಿಂದಾಗಿ ಅವರ ಹೆಸರು ಬಿಟ್ಟುಹೋದದ್ದಕ್ಕಾಗಿ ವಿಷಾದಿಸುತ್ತೇವೆ–ಸಂ.

ಬಸ್ತರ್‌ನಲ್ಲಿ ಬೀಸುತ್ತಿರುವ ವಿಷಗಾಳಿ

'ಅಭಿವೃದ್ಧಿ' ಎಂಬ ದಳ್ಳುರಿಯಲ್ಲಿ ಬೇಯುತ್ತಿರುವ ಆದಿವಾಸಿಗಳ ಬದುಕು...

-ಹರ್ಷ ಮಂದರ್



ದಕ್ಷಿಣ ಛತ್ತಿಸ್‌ಗಡದ ಸುತ್ತ ಬೀಸುತ್ತಿರುವ ವಿಷ ಗಾಳಿಯು ಬುಡಕಟ್ಟು ಸಮುದಾಯಗಳು ವಾಸಿಸುತ್ತಿರುವ ದಟ್ಟ ಕಾಡನ್ನು ಸುಡುತ್ತಿವೆ. ಭಯ-ಭೀತಿ ಮತ್ತು ಹಿಂಸೆ ಈ ಪ್ರದೇಶದ ಜನರನ್ನು ಕಾಡುತ್ತಿದೆ.

ಈ ಭಾಗದಲ್ಲಿ ಅಭಿವೃದ್ಧಿ ಎಂಬುದೇ ಸಂಪೂರ್ಣ ನೆಲಕಚ್ಚಿದೆ. ಶಾಲೆಗಳು, ಆರೋಗ್ಯ ಕೇಂದ್ರಗಳು, ಪಡಿತರ ಅಂಗಡಿಗಳು, ಅಂಗನವಾಡಿ ಕೇಂದ್ರಗಳು ಯಾವುದೂ ಕೆಲಸ ಮಾಡುತ್ತಿಲ್ಲ. ಆದರೆ ಪ್ರಭುತ್ವ ಮಾತ್ರ ಇವುಗಳತ್ತ ಗಮನ ಹರಿಸುವುದು ಬಿಟ್ಟು ತನ್ನದೇ ಪ್ರಜೆಗಳ ವಿರುದ್ಧ ಯುದ್ಧ ಸಾರಿದಂತೆ ತೋರುತ್ತಿದೆ. ಆಳುವ ಸರ್ಕಾರ, ದಶಕಗಳ ಕಾಲದ ಮಾವೋವಾದಿ ಹೋರಾಟವನ್ನು ಹೇಗಾದರೂ ಮಾಡಿ ಹತ್ತಿಕ್ಕುವತ್ತ ಮಾತ್ರ ಗಮನ ಹರಿಸಿದೆ. ಈ ಭಾಗದ ಕಾಡು ಮತ್ತು ಜನರು ವಾಸಿಸುವ ಭೂಭಾಗಗಳು ಲಕ್ಷಗಟ್ಟಲೆ ಪೊಲೀಸ್ ಮತ್ತು ಮಿಲಿಟರಿ ಪಡೆಗಳಿಂದ ತುಂಬಿ ತುಳುಕುತ್ತಿದೆ.

ಇತ್ತೀಚಿನ ದಿನಗಳಲ್ಲಿ ಮಾವೋವಾದಿಗಳ ಅಸಂವಿಧಾನಿಕ ಹತ್ಯೆ ಮತ್ತು 'ಶರಣಾಗತಿ' ತೀರಾ ದೊಡ್ಡ ಪ್ರಮಾಣದಲ್ಲಿ ದಾಖಲಾಗಿದೆ. 'ಪೊಲೀಸರು ಮತ್ತು ಸಿಆರ್‌ಪಿಎಫ್ ಪಡೆಗಳು ಹಳ್ಳಿಗಳ ಮೇಲೆ ದಾಳಿ ಮಾಡಿ ಗಂಡಸರನ್ನು ಹುಂಡಾಗುತ್ತಿಗೆಯಂತೆ ಎತ್ತಿಕೊಂಡು ಹೋಗುತ್ತಿವೆ. ಇವರನ್ನು ಪೊಲೀಸ್ ಠಾಣೆ ಅಥವಾ ಸಿ.ಆರ್.ಪಿ.ಎಫ್ ಕ್ಯಾಂಪ್‌ಗಳಲ್ಲಿ ಅಕ್ರಮವಾಗಿ ಬಂಧಿಸಿ ಇಡಲಾಗುತ್ತಿದೆ. ನಂತರ ಕೆಲವರನ್ನು ಬಂಧಿಸಿದಂತೆ ತೋರಿಸಿದರೆ, ಇನ್ನು ಕೆಲವರನ್ನು 'ಶರಣಾಗತಿ' ಆದವರಂತೆ ಬಿಂಬಿಸಲಾಗುತ್ತಿದೆ. ಪೊಲೀಸರ ಪ್ರಕಾರ 'ಇವರೆಲ್ಲಾ ಮಾವೋವಾದಿಗಳ ವಿರುದ್ಧವಾಗಿ ಮತ್ತು ಪೊಲೀಸರ ಪರವಾಗಿ ಸ್ವಯಂ ಸ್ಫೂರ್ತಿಯಿಂದ ಬಂದ ಜನರು!'. *ಇಂಡಿಯನ್ ಎಕ್ಸ್‌ಪ್ರೆಸ್* ಪತ್ರಿಕೆ ವರದಿ ಮಾಡಿದಂತೆ ಜೂನ್. ೨೦೧೪ರಿಂದ ನವೆಂಬರ್, ೨೦೧೪ರವರೆಗೆ ಶರಣಾಗತಿ ಆದ ೩೭೭ ಮಾವೋವಾದಿಗಳಲ್ಲಿ ಕನಿಷ್ಠ ಪಕ್ಷ ೨೭೦ ಜನರು ಸಾಮಾನ್ಯ ಹಳ್ಳಿಗರು.

ಈ ಪೊಲೀಸ್ ವರದಿಗಳನ್ನು ಪ್ರಶ್ನಿಸುವ ಪತ್ರಕರ್ತರನ್ನು ದೇಶದ್ರೋಹಿಗಳೆಂದು ಬಿಂಬಿಸಿ ಅವರಿಗೆ ಇನ್ನಿಲ್ಲದ ಕಿರುಕುಳ ನೀಡಲಾಗುತ್ತಿದೆ. ಭಾರತೀಯ ಸಂಪಾದಕರ ಸತ್ಯಶೋಧನಾ ಸಮಿತಿ ಇದು ಅಪಾಯಕಾರಿ ಎಂದು ಅಭಿಪ್ರಾಯ ಪಟ್ಟಿದೆ. ಪೊಲೀಸರು ನಾನಾ ಬಗೆಯ ಕ್ರಿಮಿನಲ್ ಕೇಸುಗಳಲ್ಲಿ ಸಂತೋಷ್ ಯಾದವ್, ಸೋಮರು ನಾಗ್, ಪ್ರಭಾತ್ ಸಿಂಗ್ ಮತ್ತು ದೀಪಕ್ ಜೈಸ್ವಾಲ್ ಎಂಬ ನಾಲ್ವರು ಪತ್ರಕರ್ತರನ್ನು ಬಂಧಿಸಿದೆ ಹಾಗೂ ಪೊಲೀಸರ ವರದಿಗಳನ್ನು ಪ್ರಶ್ನಿಸಿದ್ದರಿಂದ ಇವರೆಲ್ಲರನ್ನು ಮಾವೋವಾದಿಗಳ ಸಮರ್ಥಕರೆಂದು ಬಿಂಬಿಸಿದೆ.

ಪತ್ರಕರ್ತರಿಗೆ ನಾನಾ ಬಗೆಯ ಕಿರುಕುಳ ನೀಡುವಂತೆ ಹಳ್ಳಿಗರನ್ನು ಪ್ರೋತ್ಸಾಹಿಸಲಾಗುತ್ತಿದೆ. ಪತ್ರಕರ್ತೆ ಮಾಲಿನಿ ಸುಬ್ರಹ್ಮಣ್ಯಂ ಮತ್ತು ಮಾನವ ಹಕ್ಕುಗಳ ಹೋರಾಟಗಾರ್ತಿಯರಾದ ಶಾಲಿನಿ ಗೆರಾ ಮತ್ತು ಇಶಾ ಖಂಡೇವಾಲರನ್ನು ಜಗದಾಲ್‌ಪುರ ಬಿಟ್ಟು ತೆರಳುವಂತೆ ಕಿರುಕುಳ ನೀಡಲಾಗಿದೆ. ಸಮಾಜಶಾಸ್ತ್ರಜ್ಞೆ ಮತ್ತು ಹೋರಾಟಗಾರ್ತಿ ಭೇಲಾ ಭಾಟಿಯಾಗೂ ಇದೇ ಬಗೆಯ ಹಿಂಸೆ ನೀಡಲಾಗಿದ್ದರೂ ಆಕೆ 'ತಾನು ಬಸ್ತರ್‌ನ್ನು ಬಿಡುವುದಿಲ್ಲ' ಎಂದು ಧೈರ್ಯದಿಂದ ಘೋಷಿಸಿದ್ದಾಳೆ. ಈಕೆಗೆ ನೀಡಲಾದ ಪೊಲೀಸ್ ರಕ್ಷಣೆಯನ್ನು ಆಕೆ ನಿರಾಕರಿಸಿ 'ರಕ್ಷಣೆ ಬೇಕಾಗಿರುವುದು ಸಾಮಾನ್ಯ ಜನರಿಗೆ' ಎಂದು ತಿಳಿಸಿದ್ದಾಳೆ.

ಈ ಭೂಭಾಗವು ಮೊದಲಿಂದಲೂ ಹೊರಗಿಂದ ಬಂದು ಇಲ್ಲಿ ನೆಲೆಸಿದವರು ನಡೆಸಿದ ಭೂಮಿ ಮತ್ತು ಅರಣ್ಯಗಳ ಲೂಟಿಗಳಿಂದ ಮತ್ತು ಅವರು ಬೀಸಿರುವ ಸಾಲಗಳ ವಿಷವ್ಯೂಹದಲ್ಲಿ ಸಿಲುಕಿಕೊಂಡಿರುವ ಸ್ಥಳೀಯ ಬುಡಕಟ್ಟುಗಳ ಜನ ತುಂಬಿರುವ ಪ್ರದೇಶ. ಈ ಲೂಟಿ ಈಗ 'ಅಭಿವೃದ್ಧಿವಾದಿ ಪ್ರಭುತ್ವ'ದಿಂದ ರಸ್ತೆ ನಿರ್ಮಾಣದ ಹೆಸರಿನಲ್ಲಿ, ಫ್ಯಾಕ್ಟರಿಗಳಿಗಾಗಿ ಅಥವಾ 'ಕಾಡುಗಳ ವೈಜ್ಞಾನಿಕ ನಿರ್ವಹಣೆ'ಯ ಹೆಸರಿನಲ್ಲಿ ನಡೆಯುತ್ತಿದೆ. ನೈಸರ್ಗಿಕ ಕಾಡುಗಳ ಜಾಗದಲ್ಲಿ ಏಕಪ್ರಕಾರದ ನೆಡುತೋಪುಗಳನ್ನು ನಿರ್ಮಿಸಲಾಗುತ್ತಿದೆ. ಇದು ಸ್ಥಳೀಯ ಬುಡಕಟ್ಟು ಜನರ ಬದುಕಿನ ಆಧಾರಗಳನ್ನೇ ಕಸಿದಂತಾಗಿದೆ.

ಈ ಬಗೆಯ ಭೂಮಿಯ ಮೇಲಿನ ಆಕ್ರಮಣ ನವ ಉದಾರೀಕರಣವನ್ನು ಸಮರ್ಥಿಸುವ ಪ್ರಭುತ್ವ ಅಧಿಕಾರಕ್ಕೆ ಬಂದ ಮೇಲೆ ಇನ್ನೂ ಹೆಚ್ಚಾಗಿದೆ. ಲಾಭಕೋರ ಕಂಪನಿಗಳು ಸ್ಥಳೀಯ ಬುಡಕಟ್ಟು ಜನರ ಹಕ್ಕುಗಳನ್ನು ಕುರಿತಾಗಲಿ ಅಥವಾ ನೈಸರ್ಗಿಕ ಸಮತೋಲನದ ಕುರಿತಾಗಲೀ ಎಳ್ಳಷ್ಟೂ ಕಾಳಜಿ ತೋರದೆ ಈ ನೈಸರ್ಗಿಕ ಸಂಪತ್ತಿನ ಭೂಮಿಯನ್ನು ನಿರಂತರ ಶೋಷಿಸುತ್ತಿದೆ.

ಈ ಬಗೆಯ ಆಕ್ರಮಣಕಾರಿ ಬಹುವಿಧಗಳ ದಮನ ಮತ್ತು ಭೂ ಕಸಿಯುವಿಕೆಯಿಂದಾಗಿ ಬುಡಕಟ್ಟು ಜನರು ತಮಗೆ ರಕ್ಷಣೆ ನೀಡುತ್ತೇವೆಂದು ಹೇಳುವ ಮಾವೋವಾದಿ ಗುಂಪುಗಳನ್ನು ಸೇರುವಂತೆ ಮಾಡಿವೆ. ಪ್ರಭುತ್ವವು ಈ ಸಮಸ್ಯೆಯನ್ನು ಅನ್ಯಾಯ ಅಥವಾ ಶೋಷಣೆಯ ಸಮಸ್ಯೆ ಎಂದು ಪರಿಭಾವಿಸದೇ ರಾಷ್ಟ್ರದ ಐಕ್ಯತೆ ಮತ್ತು ರಕ್ಷಣೆಗೆ ಬಂದಿರುವ ಧಕ್ಕೆ ಎಂದು ಸಾರ್ವಜನಿಕ ಸಂಕಥನಗಳನ್ನು ಕಟ್ಟಿ ಪ್ರಸರಿಸತೊಡಗಿದೆ.

ಸರ್ಕಾರವು ನಾನಾ ಬಗೆಯ ಯುದ್ಧೋಪಕರಣ ಮತ್ತು ಮದ್ದು ಗುಂಡುಗಳನ್ನು ಬಳಸಿ ತನ್ನದೇ ಸರ್ಕಾರದ ನಾನಾ ಅಂಗಗಳ ಮೂಲಕ ಪ್ರಜೆಗಳ ವಿರುದ್ಧ ಆಂತರಿಕ ಯುದ್ಧವನ್ನೇ ಸಾರಿದೆ. ಸ್ಥಳೀಯ ಹಳ್ಳಿಗರ ಮೇಲಿನ ದಾಳಿ, ಅಸಂವಿಧಾನಿಕ ಹತ್ಯೆ, ಮಾವೋವಾದಿಗಳ ಬೆಂಬಲಿಗರೆಂದು ಬಿಂಬಿಸಿ ಅವರನ್ನು ಬಂಧಿಸುವುದು ಸರ್ವೇ ಸಾಧಾರಣ ಸಂಗತಿಯಾಗಿದೆ. ೨೦೦೫ರಿಂದ ೨೦೦೮ರವರೆಗೆ ಅಸ್ತಿತ್ವದಲ್ಲಿದ್ದ ಸರ್ಕಾರಿ ಪ್ರಾಯೋಜಿತ ನಕ್ಸಲ್‌ವಿರೋಧಿ ಸಾರ್ವಜನಿಕ ಸಂಘಟನೆ *ಸಲ್ವಾ ಜುಡುಂ* ಹಳ್ಳಿ ಹಳ್ಳಿಗಳನ್ನೇ ಸುಟ್ಟು ಜನರು ನಿರಾಶ್ರಿತರ ಕ್ಯಾಂಪ್ ಸೇರುವಂತೆ ಮಾಡಿತ್ತು. ಈ *ಸಲ್ವಾ ಜುಡುಂ* ಅತ್ಯಾಚಾರ, ಹಿಂಸೆ ಹಾಗೂ ಮಾನವ ಹತ್ಯೆಗಳಲ್ಲಿ ನಿರಂತರವಾಗಿ ತನ್ನನ್ನು ತೊಡಗಿಸಿಕೊಂಡಿತ್ತು. ಸುಪ್ರಿಂ ಕೋರ್ಟ್ ಈ *ಸಲ್ವಾ ಜುಡುಂ*ನ್ನು ನಿಷೇಧಿಸಿದ್ದರೂ, ಬೇರೆ ಬೇರೆ ಗುಂಪುಗಳು ಹೊಸ ಹೊಸ ರೂಪ ಮತ್ತು ವೇಷಗಳಲ್ಲಿ ಹಿಂಸೆ ಮತ್ತು ಶೋಷಣೆ ನಿರಂತರವಾಗಿ ನಡೆಯುವಂತೆ ನೋಡಿಕೊಳ್ಳುತ್ತಿದೆ. ಪೊಲೀಸ್ ವ್ಯವಸ್ಥೆ ಇದನ್ನು ಪ್ರೋತ್ಸಾಹಿಸುತ್ತಿದೆ.

ಮಾವೋವಾದಿಗಳು ಸಹ ಹತ್ತಾರು ಗುಂಪುಗಳಾಗಿ ಒಡೆದುಹೋಗಿ ಭ್ರಷ್ಟಾಚಾರ ಹಾಗೂ ಆಂತರಿಕ ಕಚ್ಚಾಟದಲ್ಲಿ ತೊಡಗಿಕೊಂಡಿವೆ. ಆದರೂ ಸ್ಥಳೀಯ ಜನರ, ಅದರಲ್ಲೂ ಯುವಜನರ ಒಲವು ಈ ಮಾವೋವಾದಿ ಗುಂಪುಗಳ ಕಡೆಗಿದೆ. ಅನೇಕ ಬಾರಿ ಮಾವೋವಾದಿಗಳು 'ಪೊಲೀಸ್ ದೂತ'ರೆಂದು ಮುಗ್ಧ ಜನರನ್ನು ಹತ್ಯೆ ಮಾಡಿದ್ದಾರೆ. ಈ ಗುಂಪುಗಳು ನಡೆಸುವ ಕ್ರೂರ ಹತ್ಯೆ, ಹಾಗೂ ರಕ್ಷಣಾ ಪಡೆಗಳ ಮೇಲಿನ ದಾಳಿಗಳು ಪೊಲೀಸ್ ಮತ್ತು ರಕ್ಷಣಾ ಪಡೆಯಲ್ಲಿನ ಯುವಜನರು ಪ್ರಾಣ ಕಳೆದುಕೊಳ್ಳುವಂತೆ ಮಾಡಿವೆ.

ಈ ಮಧ್ಯೆ ಬಲಪಂಥೀಯ ಹಿಂದೂ ರಾಷ್ಟ್ರೀಯವಾದಿಗಳ ಪ್ರವೇಶ ಹಾಗೂ ಅವರಿಂದ ನಡೆದಿರುವ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡವರ ಮೇಲಿನ ದಾಳಿ ಪರಿಸ್ಥಿತಿಯನ್ನು ಇನ್ನಷ್ಟು ಸಂಕೀರ್ಣಗೊಳಿಸಿದೆ. 'ಸ್ವಾತಂತ್ರ್ಯ ರಕ್ಷಣಾ ಕೂಟ' ಹೇಳುವಂತೆ ೨೦೧೪ರಲ್ಲಿ ೧೪೭ ಕ್ರಿಶ್ಚಿಯನ್ನರ ಮೇಲಿನ ದಾಳಿ ಪ್ರಕರಣಗಳು ದಾಖಲಾಗಿವೆ. ಈ ದಾಳಿಗಳು ಛತ್ತೀಸ್‌ಗಡದಲ್ಲಿ ಅದರಲ್ಲೂ ಬಸ್ತರ್ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಅತಿ ಹೆಚ್ಚು ದಾಖಲಾಗಿವೆ. ೨೦೧೪ರ ಮೇ ತಿಂಗಳಿನಲ್ಲಿ ಸಿರಿಸ್‌ಗುಡ ಹಳ್ಳಿಯ ಕ್ರಿಶ್ಚಿಯನ್ ಕುಟುಂಬಗಳಿಗೆ ಅವುಗಳು

ವಿಶ್ವಹಿಂದೂ ಪರಿಷತ್ ವತಿಯಿಂದ ನಡೆಸುವ ಹಿಂದೂ ಹಬ್ಬಗಳಿಗೆ ತಲಾ ೨೦೦ ರೂ. ಕೊಡದೇ ಇರುವ ಕಾರಣಕ್ಕೆ ಪಡಿತರ ಮತ್ತು ಪಡಿತರ ಚೀಟಿಗಳನ್ನು ನಿರಾಕರಿಸಲಾಯಿತು. ಕ್ರಿಶ್ಚಿಯನ್ನರು ಇದನ್ನು ಜಿಲ್ಲಾಡಳಿತದ ಗಮನಕ್ಕೆ ತಂದಾಗ ವಿಹೆಚ್‌ಪಿ ಮತ್ತು ಭಜರಂಗದಳದ ಕಾರ್ಯಕರ್ತರು ಇವರ ಮೇಲೆ ಹಲ್ಲೆ ನಡೆಸಿದರು. ಸಿರಿಸ್‌ಗುಡಾದ ಗ್ರಾಮಸಭೆಯು ಹಿಂದೂಗಳಲ್ಲದವರನ್ನು ಗ್ರಾಮದಿಂದ ಬಹಿಷ್ಕರಿಸುವ ಠರಾವು ಅನುಮೋದಿಸಿತು. ಇದಕ್ಕಾಗಿ ಪಂಚಾಯತ್ ರಾಜ್ ಕಾಯಿದೆಯ ೧೨೯ ಜಿ ಪರಿಚ್ಛೇದವನ್ನು ಉಪಯೋಗಿಸಿಕೊಳ್ಳಲಾಯಿತು. ಇದರ ನಂತರ ಸರಿಸುಮಾರು ೬೦ ಗ್ರಾಮಗಳು ಇದೇ ಬಗೆಯ ಬಹಿಷ್ಕಾರದ ಠರಾವನ್ನು ಅನುಮೋದಿಸಿವೆ. ಕ್ರಿಶ್ಚಿಯನ್ನರ ಮೇಲೆ ದಾಳಿಗಳು ನಡೆದೇ ಇವೆ.

ಹೀಗೆ ಬಸ್ತರ್‌ನ ಸ್ಥಳೀಯ ಜನ ಹಾಗೂ ಅದರ ಸುತ್ತ ಮುತ್ತಲಿನ ಏಳು ಜಿಲ್ಲೆಗಳ ಸಮುದಾಯಗಳಿಗೆ ರಕ್ಷಣಾ ಪಡೆಯಿಂದ, ಪೋಲೀಸರಿಂದ, ಉಗ್ರಗಾಮಿ ಎಡಪಂಥೀಯರಿಂದ, ಸರ್ಕಾರಿ ಕೃಪಾಪೋಷಿತ ಸಶಸ್ತ್ರ ಗುಂಪುಗಳಿಂದ, ಬಲಪಂಥೀಯ ಗುಂಪುಗಳ ಹಿಂಸೆಯಿಂದ ಬಿಡುಗಡೆಯೇ ಕಾಣುತ್ತಿಲ್ಲ.

(ಕನ್ನಡಕ್ಕೆ: **ಅವಿನಾಶ್, ಟಿ**
ಕೃಪೆ: ***ಜನತಾ***, ೨೪, ಏಪ್ರಿಲ್, ೨೦೧೬)

ಅಂಬೇಡ್ಕರ್: ಸಂಘ ಪರಿವಾರದ ಕಣ್ಣಲ್ಲಿ ಅಂದು ಮತ್ತು ಇಂದು...

–ರಾಮಚಂದ್ರ ಗುಹಾ




ಸಂಘ ಪರಿವಾರ ಇತ್ತೀಚಿನ ದಿನಗಳಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್‌ರನ್ನು ತಮ್ಮವರನ್ನಾಗಿ ಮಾಡಿಕೊಳ್ಳಲು ಇನ್ನಿಲ್ಲದಂತೆ ಪ್ರಯತ್ನಿಸುತ್ತಿದೆ. ಆರೆಸ್ಸೆಸ್‌ನ ಮುಖವಾಣಿಯಾದ 'ಆರ್ಗನೈಸರ್' ಪತ್ರಿಕೆ ತನ್ನ ೨೦೧೬, ಏಪ್ರಿಲ್ ೧೬ರ ಸಂಚಿಕೆಯುನ್ನು ಅಂಬೇಡ್ಕರ್‌ರ ಭಾವಚಿತ್ರದ ಮುಖಪುಟದೊಂದಿಗೆ ಪ್ರಕಟಿಸುತ್ತಾ ಒಳಗಿನ ಪುಟಗಳಲ್ಲಿ ಅವರನ್ನು 'ಆತ್ಯಂತಿಕ ಐಕ್ಯತಾ ಶಕ್ತಿ', 'ರಾಷ್ಟ್ರನಿರ್ಮಾಣದ ಸ್ಫೂರ್ತಿ ಶಕ್ತಿ, 'ಬ್ರಾಹ್ಮೋ, ಪ್ರಾರ್ಥನಾ, ಆರ್ಯ ಸಮಾಜಗಳಂತಹ ಹಿಂದೂ ಸುಧಾರಣಾ ಸಂಸ್ಥೆಗಳಂತೆ ಕೆಲಸ ಮಾಡಿದ ವ್ಯಕ್ತಿ, ಕಾರ್ಮಿಕರ ಕಲ್ಯಾಣಕ್ಕೆ ದುಡಿದ ನಾಯಕ, ಬ್ರಾಹ್ಮಣ ವ್ಯವಸ್ಥೆಯ ವಿರೋಧಿಯೇ ಹೊರತು ಬ್ರಾಹ್ಮಣ ವಿರೋಧಿಯಲ್ಲ ಎಂದೆಲ್ಲ ಅವರನ್ನು ವರ್ಣಿಸಿ ಹೊಗಳುವ ಹಲವು ಲೇಖನಗಳನ್ನು ಪ್ರಕಟಿಸಿದೆ.

ಇದನ್ನೆಲ್ಲ ನೋಡಿದಾಗ, ಇದೇ ಆರೆಸ್ಸೆಸ್ ಮತ್ತು ಇದೇ 'ಆರ್ಗನೈಸರ್' ಅಂಬೇಡ್ಕರ್ ಜೀವಂತವಿದ್ದು, ಮತ್ತು ಸಂವಿಧಾನ ರಚನೆಯಲ್ಲಿ ತೊಡಗಿದ್ದಾಗ ಮತ್ತು ರಾಷ್ಟ್ರದ ಕಾನೂನು ಮಂತ್ರಿಯಾಗಿ ಹಿಂದೂ ಸಮಾಜದ ಸುಧಾರಣೆಗಾಗಿ ಹಿಂದೂ ಕೋಡ್ ಬಿಲ್‌ನ್ನು ರೂಪಿಸಿದಾಗ ಅವರ ಬಗ್ಗೆ ಹೇಗೆ ವರ್ತಿಸಿದ್ದವು ಮತ್ತು ಏನು ಬರೆದಿದ್ದವು ಎಂಬುದನ್ನು ಗಮನಿಸುವ ಕುತೂಹಲ ಉಂಟಾಯಿತು. ಹಾಗೆ ಗಮನಿಸಿದಾಗ ಗೊತ್ತಾದ್ದೇನೆಂದರೆ, ಈ ಸಂಘ ಪರಿವಾರ ಅಂಬೇಡ್ಕರ್‌ರ ಈ ಎಲ್ಲ ಕೆಲಸಗಳನ್ನು ವಿರೋಧಿಸಿತ್ತಲ್ಲದೆ ಅವರನ್ನು ಇದಕ್ಕಾಗಿ ಕಟಕಿ–ವ್ಯಂಗ್ಯಗಳೊಂದಿಗೆ ಹೀಗಳೆಯುವ ಒಂದು ದೊಡ್ಡ ಪ್ರಚಾರಾಂದೋಲನವನ್ನೇ ನಡೆಸಿತ್ತು ಎಂಬುದು.

ಸಂವಿಧಾನದ ಅಂತಿಮ ಕರಡನ್ನು ಅಂಬೇಡ್ಕರ್ ಅವರು ಸಂವಿಧಾನ ಸಭೆಯಲ್ಲಿ ಮಂಡಿಸುತ್ತಿದ್ದಂತೆಯೇ ೧೯೪೯ರ ನವೆಂಬರ್ ೩೦ರ 'ಆರ್ಗನೈಸರ್' ತನ್ನ ಸಂಪಾದಕೀಯದಲ್ಲಿ ಹೀಗೆ ಬರೆಯಿತು: 'ಈ ಸಂವಿಧಾನದಲ್ಲಿ ಭಾರತೀಯ ಎನ್ನುವುದೇನೂ ಇಲ್ಲದೆ ಬರಡಾಗಿದೆ... ಇಡೀ ಜಗತ್ತಿನ ಗಮನ ಸೆಳೆದು ಮೆಚ್ಚುಗೆ ಗಳಿಸಿರುವ ಮತ್ತು ಭಾರತೀಯರೆಲ್ಲರ ಸ್ವಯಂಸ್ಫೂರ್ತಿ ಸಮ್ಮತಿ ಮತ್ತು ಅನುಸರಣೆಗೆ ಪಾತ್ರವಾಗಿರುವ ಮನುಸ್ಮೃತಿ ಈ ಕಾನೂನು ಪಂಡಿತರಿಗೆ ಏನೇನೂ ಅಲ್ಲವಾಗಿದೆ'

ಅಂಬೇಡ್ಕರ್ ಹಿಂದೂ ವೈಯಕ್ತಿಕ ಕಾನೂನನ್ನು ರೂಪಿಸಿದಾಗಲಂತೂ ಸಂಘ ಉರಿದೆದ್ದಿತು. ಅದರ ಸರಸಂಘಚಾಲಕ ಗೋಲ್ವಾಲ್ಕರ್ ಅವರು ೧೯೪೯ರ ಆಗಸ್ಟ್‌ನಲ್ಲಿ ತಮ್ಮದೊಂದು ಭಾಷಣದಲ್ಲಿ ಹೀಗೆ ಘೋಷಿಸಿದರು: 'ಮದುವೆ ಮತ್ತು ವಿಚ್ಛೇದನಗಳನ್ನು ಇಲ್ಲಿ ಅಮೆರಿಕಾ ಅಥವಾ ಬ್ರಿಟಿಷ್ ಮಾದರಿಯಲ್ಲಿ ನಿರ್ವಹಿಸಲಾಗದು. ಹಿಂದೂ ಸಂಸ್ಕೃತಿ ಮತ್ತು ಕಾನೂನು ಪ್ರಕಾರ ಮದುವೆ ಎಂಬುದು ಒಂದು ಸಂಸ್ಕಾರವಾಗಿದ್ದು, ಅದನ್ನು ಸಾವಿನ ನಂತರವೂ ಬದಲಾಯಿಸಲಾಗುವುದಿಲ್ಲ. ಅದು ಬೇಕೆಂದಾಗ ಮುರಿಯಲು ಸಾಧ್ಯವಿರುವ ಕರಾರಲ್ಲ. ನಿಜ, ಹಿಂದೂಗಳ ಕೆಳ ಜಾತಿಗಳಲ್ಲಿ ವಿಚ್ಛೇದನಗಳ ಸಂಪ್ರದಾಯವಿದೆ. ಆದರೆ ಅದು ಎಲ್ಲರೂ ಪಾಲಿಸಬೇಕಾದ ಆದರ್ಶವಾಗಲಾರದು.' (ನೋಡಿ: 'ಆರ್ಗನೈಸರ್', ಸೆಪ್ಟ. ೬, ೧೯೪೯)

ಮಹಿಳೆಯರ ಆಸ್ತಿ ಮತ್ತು ವಿಚ್ಛೇದನ ಹಕ್ಕುಗಳನ್ನು ಒಳಗೊಂಡ ಹಿಂದೂ ಕೋಡ್ ಬಿಲ್ ಬಗ್ಗೆ 'ಇದು ಹಿಂದೂ ಮತಾನುಯಾಯಿಗಳ ಮೇಲೆ ನಡೆಸಲಾಗಿರುವ ನೇರ ದಾಳಿ' ಎಂದು ೧೯೪೯ರ ನವೆಂ. ೨ರ ಸಂಚಿಕೆಯ ತನ್ನದೊಂದು ಲೇಖನದಲ್ಲಿ ಬರೆದ ಇದೇ ಪತ್ರಿಕೆ, ೧೯೪೯ರ ಡಿಸೆಂ. ೭ರ ತನ್ನ ಸಂಪಾದಕೀಯದಲ್ಲಿ ಹೀಗೆ ಘೋಷಿಸಿತು: 'ವಿದೇಶಿ ಮತ್ತು ಅನೈತಿಕ ತತ್ವಗಳನ್ನಾಧರಿಸಿದ್ಧ ಮತ್ತು ಕೆಲ ವಿಧವೆಯರು, ವಿಧುರರು, ಮಕ್ಕಳಿಲ್ಲದ ಮಹಿಳೆಯರು ಮತ್ತು ಮುದಿ ಗಂಡುಗಳು ಸೇರಿಕೊಂಡು ತಮ್ಮ ಸ್ವಾರ್ಥಕ್ಕಾಗಿ ನಮ್ಮ ಪುರಾತನ ಕಾನೂನುಗಳನ್ನು ಸಡಿಲಿಸುವ ಪ್ರಯತ್ನವಾಗಿರುವ ಈ ಹಿಂದೂ ಕೋಡ್ ಬಿಲ್ ಹಿಂದೂ ಕಾನೂನು, ಸಂಸ್ಕೃತಿ, ಧರ್ಮಗಳಿಗೆ ಮಾಡುತ್ತಿರುವ ಅವಮಾನವಾಗಿದ್ದು ಇದನ್ನು ನಾವು ವಿರೋಧಿಸುತ್ತೇವೆ.'



ಈ ಸಂಪಾದಕೀಯ ಇಷ್ಟಕ್ಕೇ ನಿಲ್ಲದೆ ಈ ಮಸೂದೆಯ ಹಿಂದಿದ್ದವರನ್ನು 'ಋಷಿ ಅಂಬೇಡ್ಕರ್' ಮತ್ತು 'ಮಹರ್ಷಿ ನೆಹ್ರೂ' ಎಂದು ವ್ಯಂಗ್ಯವಾಗಿ ಗುರುತಿಸುತ್ತಾ ಇವರ ಈ ಸುಧಾರಣೆ ಸಮಾಜವನ್ನು ಒಡೆದು ಚೂರು ಮಾಡಿ ಅನೇಕ ಹಗರಣಗಳು, ಅನುಮಾನ ಮತ್ತು ದುಷ್ಟ ಪ್ರವೃತ್ತಿಗಳನ್ನು ಉದ್ದೀಪಿಸುತ್ತದೆ ಎಂದು ಅಭಿಪ್ರಾಯಪಟ್ಟಿತು.

ಮಹಿಳೆಯರಿಗೆ ತಮ್ಮ ಸಂಗಾತಿಗಳನ್ನು ಆಯ್ಕೆ ಮಾಡಿಕೊಳ್ಳುವ ಮತ್ತು ದುಷ್ಟ ಗಂಡರನ್ನು ದೂರಮಾಡಿಕೊಂಡು ಬದುಕುವ ಸ್ವಾತಂತ್ರ್ಯಗಳನ್ನೂ, ವಂಶದ ಆಸ್ತಿಯಲ್ಲಿ ಪಾಲು ಪಡೆಯುವ ಹಕ್ಕನ್ನೂ ನೀಡುವ ಈ ಮಸೂದೆಯನ್ನು ಆರೆಸ್ಸೆಸ್ ಕುಟುಂಬಗಳನ್ನು ಒಡೆಯುವ ಪ್ರಯತ್ನವೆಂದು ವ್ಯಾಖ್ಯಾನಿಸಿದ್ದು ಅದರ ಪಿತೃಪ್ರಧಾನ ವ್ಯವಸ್ಥೆಯಲ್ಲಿನ ನಂಬಿಕೆಗೆ ತಕ್ಕುನಾಗೇ ಇತ್ತು. ಅದು ಈ ಮಸೂದೆಯನ್ನು ತಡೆಯಲು ದೇಶದ ಮೂಲೆ ಮೂಲೆಗಳಿಂದ ಸಾಧು–ಸಂತರನ್ನು ಕರೆಸಿ ನೂರಾರು ಮೆರವಣಿಗೆ, ಧರಣಿ ಮತ್ತು ಹರತಾಳಗಳನ್ನು ಸಂಘಟಿಸಿತು. ಇಂತಹ ಸಭೆಯೊಂದರಲ್ಲಿ ಮಾತನಾಡಿದ ಸಾಧುವೊಬ್ಬರು, 'ಹಿಂದೂ ಧರ್ಮದ ನಿಯಮಗಳಿಗೆ ವಿರುದ್ಧವಾಗಿ (ಅಂತರ್ಜಾತಿ) ವಿವಾಹವಾಗಿರುವ ಅಂಬೇಡ್ಕರ್‌ಗೆ ಹಿಂದೂ ಕಾನೂನು ಬದಲಿಸುವ ಅಧಿಕಾರವಿಲ್ಲ' ಎಂದು ಘೋಷಿಸಿದರು. ಇನ್ನು 'ಆರ್ಗನೈಸರ್'ನ ೧೯೫೦ರ ಜನವರಿ ೧೧ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಕೆ.ಡಿ. ಶಾಸ್ತ್ರಿ ಎಂಬುವವರ ಪತ್ರವೊಂದು ಅಂಬೇಡ್ಕರ್‌ರನ್ನು 'ಆಧುನಿಕ ಮನು' ಎಂದು ಕರೆಯುವುದನ್ನು ಖಂಡಿಸುತ್ತಾ "ಹಿಂದೂ ಧರ್ಮಕ್ಕೆ ಅಪಚಾರಗೈದಿರುವ ವ್ಯಕ್ತಿಯನ್ನು ದೈವ ಸ್ವರೂಪಿಯಾದ ಮನುವಿನ ಸ್ಥಾನಕ್ಕೇರಿಸುವುದು 'ಕುಬ್ಜ'ರನ್ನು 'ದೈತ್ಯ'ರೆಂದು ಕರೆಯುವಷ್ಟೇ ಹಾಸ್ಯಾಸ್ಪದ" ಎನ್ನುತ್ತದೆ.

ಯಾವುದೇ ವ್ಯಕ್ತಿಯಂತೆ ಯಾವುದೇ ಸಂಘಟನೆ ಕೂಡ ಕಾಲಾಂತರದಲ್ಲಿ ಯಾವುದೇ ವಿಷಯ ಅಥವಾ ವ್ಯಕ್ತಿ ಕುರಿತು ತನ್ನ ನಿಲುವು–ಅಭಿಪ್ರಾಯಗಳನ್ನು ಬದಲಾಯಿಸಿಕೊಳ್ಳುವ ಹಕ್ಕು ಹೊಂದಿದೆ. ಆದರೆ ಅದಕ್ಕೊಂದು ಬಿಚ್ಚುಮನಸ್ಸಿನ ವಿವರಣೆ ನೀಡುವುದು ಅದರ ಕರ್ತವ್ಯವಾಗಿರುತ್ತದೆ. ಆದರೆ ಇಂತಹ ಯಾವ ವಿವರಣೆಯನ್ನೂ ನೀಡದ ಸಂಘ ಪರಿವಾರ ತನ್ನ ಇತಿಹಾಸವನ್ನು ಮರೆಮಾಚಿಕೊಂಡು, ಬದುಕಿದ್ದಾಗ ಯಾರನ್ನು ಮತ್ತು ಯಾರ ಕೆಲಸಗಳನ್ನು ವಿಧವಿಧವಾಗಿ ಟೀಕಿಸಿ ಲೇವಡಿ ಮಾಡಿತ್ತೋ ಆ ಅಂಬೇಡ್ಕರ್‌ರನ್ನು ಈಗ ತನ್ನ ನಾಯಕ, ಗುರು, ರಾಷ್ಟ್ರ ನಿರ್ಮಾತೃ ಎಂದೆಲ್ಲ ಹೊಗಳುತ್ತಿರುವುದನ್ನು ಆತ್ಮದ್ರೋಹದ ಅವಕಾಶವಾದಿ ರಾಜಕಾರಣವೆಂದೇ ಕರೆಯಬೇಕಾಗುತ್ತದೆ.

(ಸಂಗ್ರಹಾನುವಾದ: **ಡಿಎಸ್ಸೆನ್**
ಕೃಪೆ: ***ಜನತಾ***, ಮೇ ೧, ೨೦೧೬)

ಪೌನಾರ್ ಆಶ್ರಮದ ಗೌತಮ್‌ಭಾಯಿ ಬಜಾಜ್ ಅವರೊಂದಿಗೆ ಒಂದು ಮಾತುಕತೆ

ಭೂದಾನ ಚಳುವಳಿಯ ನೇತಾರ ವಿನೋಬಾ ಭಾವೆಯವರು ಮಹಾರಾಷ್ಟ್ರದ ಪೌನಾರ್‌ನಲ್ಲಿ ಸ್ಥಾಪಿಸಿದ ಆಶ್ರಮದ ಮುಖ್ಯ ಕಾರ್ಯಕರ್ತ ಗೌತಮ್ ಭಾಯಿ ಬಜಾಜ್ ಇತ್ತೀಚೆಗೆ ಕರ್ನಾಟಕ ಪ್ರವಾಸ ಕೈಗೊಂಡಿದ್ದರು. ಅವರೊಂದಿಗೆ ಅದೇ ಆಶ್ರಮದ ಬ್ರಹ್ಮ ವಿದ್ಯಾಮಂದಿರದ ಉಷಾ ಬೇನ್ ಮತ್ತು ಅವರ ಸಂಗಾತಿ ಗಂಗಾಲಕ್ಷ್ಮಿಯವರೂ ಬಂದಿದ್ದು, ಗಂಗಾಲಕ್ಷ್ಮಿಯವರ ಊರಾದ ಸೊರಬದ ಬಳಿಯ ಹಳ್ಳಿಯೊಂದಕ್ಕೆ ಹೋಗುವ ಮಾರ್ಗವಾಗಿ ಅವರೆಲ್ಲ ಶಿವಮೊಗ್ಗಕ್ಕೂ ಬಂದಿದ್ದರು. ಶಿವಮೊಗ್ಗದ ಕರ್ನಾಟಕ ಸಂಘ ಈ ಮೂವರನ್ನೂ ಆಹ್ವಾನಿಸಿ ಏಪ್ರಿಲ್ ೨೬ರಂದು ಒಂದು ಕಾರ್ಯಕ್ರಮ ಏರ್ಪಡಿಸಿತ್ತು. ಬೆಂಗಳೂರಿನ ಗಾಂಧಿ ಭವನದ ಗೆಳೆಯ ಜಿ.ಬಿ. ಶಿವರಾಜ್ ಅವರ ಸಲಹೆಯ ಮೇರೆಗೆ ನಾನು ಈ ಕಾರ್ಯಕ್ರಮದ ನಂತರ ಗೌತಮ್‌ಜಿ ಅವರನ್ನು ಭೇಟಿ ಮಾಡಿ ಇಪ್ಪತ್ತು ನಿಮಿಷಗಳ ಕಾಲ ಲೋಹಿಯಾ–ಗಾಂಧಿ–ವಿನೋಬಾ ಕುರಿತು ಮಾತನಾಡಿದೆ. ಇದಕ್ಕೆ ಅನುವು ಮಾಡಿಕೊಟ್ಟವರು ಗೌತಮ್‌ಜಿ ಅವರ ಪ್ರಯಾಣದ ಉಸ್ತುವಾರಿ ವಹಿಸಿದ್ದ ಅಬೀದಾ ಬೇಗಂ ಅವರು.–ಸಂ.



ಆರಡಿ ಎತ್ತರದ ೭೮ ವರ್ಷ ವಯಸ್ಸಿನ ಗೌತಮ್‌ಜಿಯವರು ಗಾಂಧಿ–ವಿನೋಬಾರ ಅನುಯಾಯಿ. ಉದ್ಯಮಿಯಾಗಿದ್ದ ಜಮನ್‌ಲಾಲ್ ಬಜಾಜ್ ಕುಟುಂಬಕ್ಕೆ ಸೇರಿದವರು. ಬಾಲ್ಯದಲ್ಲೇ ಗಾಂಧಿ ಪ್ರಭಾವಕ್ಕೆ ಒಳಗಾಗಿ ಆಗರ್ಭ ಶ್ರೀಮಂತಿಕೆಯ ಸಕಲ ಸೌಲಭ್ಯಗಳನ್ನೂ ತೊರೆದು ಸರಳ ಜೀವನವನ್ನು ಆರಿಸಿಕೊಂಡವರು. ಗಾಂಧಿ ಸಾವಿನ ನಂತರ ತಮ್ಮ ೧೩ನೇ ವಯಸ್ಸಿನಲ್ಲಿ ವಿನೋಬಾ ಹಿಂದೆ ಭೂದಾನ ಯಾತ್ರೆ ಹೊರಟವರು. ಅವರೊಂದಿಗೆ ೪೫೦೦ ದಿನಗಳ ಕಾಲ ದೇಶದ ಉದ್ದಗಲಕ್ಕೂ ೭೫೦೦ ಕಿಮೀ ನಡೆದು ೪೦ ಲಕ್ಷ ಎಕರೆ ಭೂಮಿಯನ್ನು ದಾನವಾಗಿ ಪಡೆದ ವಿನೋಬಾರ ವಿರಾಟ್ ಕಾರ್ಯಕ್ರಮದ ಯಶಸ್ಸಿನಲ್ಲಿ ಎಳವೆಯಲ್ಲೇ ಪಾಲ್ಗೊಂಡವರು. ವಿನೋಬಾರ ಸಮಗ್ರ ಸಾಹಿತ್ಯವನ್ನು ತಲಾ ೭೦೦ ಪುಟಗಳ ೨೧ ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿರುವ ಗೌತಮ್‌ಭಾಯಿ ವಿನೋಬಾರ ನಿಧನದ ನಂತರ ಪೌನಾರ್ ಆಶ್ರಮದ ಉಸ್ತುವಾರಿ ವಹಿಸಿಕೊಂಡು ಯುವಜನರಿಗೆ ಅಧ್ಯಾತ್ಮಿಕತೆಯ ಪಾಠಗಳೊಂದಿಗೆ ಮಾನವ ಶ್ರಮದ ಮೌಲ್ಯಗಳ ತರಬೇತಿ ನೀಡುವ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ.

ನಾನು ಸಮಾಜವಾದಿ ಹಿನ್ನೆಲೆಯವನು, ಲೋಹಿಯಾ ವಿಚಾರಗಳ ಅಭಿಮಾನಿ ಎಂದು ತಿಳಿದುಕೊಂಡ ಅವರು 'ನಿಮ್ಮ ನಾಯಕ ಲೋಹಿಯಾರನ್ನು ಬಾಲ್ಯದಿಂದಲೂ ಬಲ್ಲೆ. ಅವರು ಬಜಾಜ್‌ರ ಮನೆಗೆ ಬರುತ್ತಿದ್ದರು' ಎಂದು ಮಾತು ಆರಂಭಿಸಿದರು. ಮುಂದಿನ ನಮ್ಮ ಮಾತುಕತೆ ಸರಾಗವಾಗಿ ಮುಂದುವರೆದದ್ದು ಹೀಗೆ:

'ನಿಮ್ಮ ಪ್ರಕಾರ ಈ ಲೋಹಿಯಾ ಎಂತಹ ಮನುಷ್ಯ?

'ಆತ ಒಬ್ಬ ಉಜ್ವಲ ಪ್ರತಿಭೆಯ ಮನುಷ್ಯ. ಆದರೆ ಅತಿವಾದಿ ಮತ್ತು ತಿಕ್ಕಲ.

'ಅತಿವಾದಿ, ತಿಕ್ಕಲ ಎಂದು ನಿಮಗನಿಸಲು ಕಾರಣವೇನು ಗೌತಮ್‌ಜಿ?'

'ಒಂದು ಕಾಲದಲ್ಲಿ ನೆಹ್ರೂ ಅವರ ಪಿ.ಎ. ಆಗಿದ್ದ ಮನುಷ್ಯ ಅವರ ವಿರುದ್ಧ ಹಾಗೆ ತಿರುಗಿಬಿದ್ದರೆ ಇನ್ನೇನೆಂದು ಹೇಳುವುದು?'

'ಇದಕ್ಕೆ ನೆಹ್ರೂ ಅವರೂ ಕಾರಣರಲ್ಲವೆ? ಪ್ರಧಾನಿಯಾಗುವ ಆತುರದಲ್ಲಿ ಕಾಂಗ್ರೆಸ್‌ನಲ್ಲಿನ ಸಮಾಜವಾದಿಗಳ ಹಿತ ಕಾಯದೇ ಹೋದ ಅವರು ಪ್ರಧಾನಿಯಾದ ನಂತರ ಗಾಂಧಿಯನ್ನೇ ಮರೆತು ದೊಡ್ಡ ತಪ್ಪು ಮಾಡಲಿಲ್ಲವೆ? ನೀವು ಸ್ವಲ್ಪ ನೆಹ್ರೂ ಅಭಿಮಾನಿಯಾಗಿರುವಂತೆ ಕಾಣುತ್ತದೆ...'

'ಇಲ್ಲ, ಇಲ್ಲ, ನನಗೂ ರಾಜಕಾರಣಕ್ಕೂ ಸಂಬಂಧವಿಲ್ಲ. ನಾವು ರಾಜನೀತಿಯ ಮಿತಿಗಳನ್ನು ಅರಿತು ಲೋಕನೀತಿಯಲ್ಲಿ ನಂಬಿಕೆ ಇಟ್ಟವರು. ನಾವು ಯಾರ ಪರವೂ ಅಲ್ಲ, ವಿರೋಧವೂ ಅಲ್ಲ'

'ಗಾಂಧಿಗೆ ತಮ್ಮ ಕೊನೆಯ ದಿನಗಳಲ್ಲಿ ನೆಹ್ರೂ ಸೇರಿದಂತೆ ಕಾಂಗ್ರೆಸ್ಸಿನ ಹಿರಿಯ ನಾಯಕರ ಬಗ್ಗೆ ಭ್ರಮನಿರಸನವಾಗಿತ್ತಲ್ಲವೇ? ಹಾಗೇ ಆಗ ಅವರಿಗೆ ಲೋಹಿಯಾ ಬಹು ಪ್ರಿಯರಾಗಿದ್ದರಲ್ಲವೆ?'

ನಾನು ರಾಜಕೀಯ ಪ್ರಶ್ನೆಗಳಿಗೆ ಉತ್ತರಿಸುವುದಿಲ್ಲ. ಆದರೆ ಒಂದು ಮಾತು. ಕೇವಲ ಲೋಹಿಯಾ ಮಾತ್ರವಲ್ಲ, ತಮ್ಮ ಹತ್ತಿರ ಬಂದ ಪ್ರತಿಯೊಬ್ಬರೂ ಗಾಂಧಿಗೆ ಪ್ರಿಯರಾಗಿದ್ದರು. ಅವರೆಲ್ಲರ ಯೋಗಕ್ಷೇಮದ ಬಗ್ಗೆ ನಿರಂತರ ಗಮನ ಇಟ್ಟಿರುತ್ತಿದ್ದರು ಮತ್ತು ಅವರಿಂದ ದೇಶಕ್ಕೆ ಏನು ಸೇವೆ ಪಡೆಯಬಹುದೆಂದು ಯೋಚಿಸುತ್ತಿದ್ದರು.

'ಗಾಂಧೀಜಿಗೆ ಅಂಬೇಡ್ಕರ್‌ರೂ ಪ್ರಿಯ ವ್ಯಕ್ತಿಯಾಗಿದ್ದರೆ?'

ಖಂಡಿತ. ಆದರೆ ಅಂಬೇಡ್ಕರ್‌ಗೆ ಗಾಂಧಿ ಪ್ರಿಯವಾಗದಿರಬಹುದು ಅಷ್ಟೆ. ಆದರೂ ಗಾಂಧಿ, ಅವರಿಂದ ರಾಷ್ಟ್ರಕ್ಕೆ ಪಡೆಯಬಹುದಾದ ಸೇವೆಯನ್ನು ಪಡೆದೇ ತೀರಿದರಲ್ಲ? ಗಾಂಧಿ ಬಳಿ ಎಂತೆಂತಹ ಜನ ಬರುತ್ತಿದ್ದರು! ಸಾಮಾನ್ಯ ಜನರಲ್ಲದೆ ರೋಗಿಗಳು, ಹುಚ್ಚರು, ಕೂಗಾಡಿ ಹಿಂಸಾತ್ಮಕವೂ ಆಗುತ್ತಿದ್ದ ವಿರೋಧಿಗಳು ಹೀಗೆ ಎಲ್ಲ ತರದ ಜನ ಬರುತ್ತಿದ್ದರು. ನೋಡಿದವರಿಗೆ ಗಾಬರಿಯಾಗುತ್ತಿತ್ತು! ಇದನ್ನು ಆಗ ಪತ್ರಕರ್ತರು 'ಗಾಂಧಿ ಸರ್ಕಸ್' ಎಂದು ಕರೆಯುತ್ತಿದ್ದರು.

'ಗಾಂಧಿ ಇವರನ್ನೆಲ್ಲ ಹೇಗೆ ಸಂಭಾಳಿಸುತ್ತಿದ್ದರು?'

'ಗಾಂಧಿ ಎಲ್ಲರೊಂದಿಗೂ ಮಾತಾಡಿ ಸಮಾಧಾನಪಡಿಸುತ್ತಿದ್ದರು. Oh! He was a man of God! ಈ ಮಾತು ಎಲ್ಲರಿಗೂ ಅರ್ಥವಾಗುವುದು ಕಷ್ಟ'

'ಇನ್ನು ವಿನೋಬಾ ಅವರ ವಿಷಯಕ್ಕೆ ಬಂದರೆ, ಅವರನ್ನು ಗಾಂಧಿ ತಮ್ಮ ಅಧ್ಯಾತ್ಮಿಕ ಉತ್ತರಾಧಿಕಾರಿ ಎಂದು ಕರೆದರು ಎನ್ನುತ್ತಾರೆ. ಆದರೆ ವಿನೋಬಾ ಸಾಬರ್ಮತಿ ಆಶ್ರಮದ ಕಾರ್ಯಕರ್ತರಾಗಿದ್ದರು ಮತ್ತು ಗಾಂಧೀಜಿ ೧೯೪೦ರ ವೈಯುಕ್ತಿಕ ಸತ್ಯಾಗ್ರಹಕ್ಕೆ ಅವರನ್ನು ಆಯ್ಕೆ ಮಾಡಿದರು ಎಂಬುದರ ಹೊರತಾಗಿ ಯಾವ ಗಾಂಧಿ ಕಥನದಲ್ಲೂ ಗಾಂಧಿ–ವಿನೋಬಾ ಸಂವಾದದ ಸುಳಿವಿಲ್ಲ ಏಕೆ?'

'ವಿನೋಬಾ ಪೂರ್ತಿ ಅಧ್ಯಾತ್ಮಿಕ ಮನುಷ್ಯ. ವೇದಶಾಸ್ತ್ರಗಳ ಪರಿಣತರು. ಬ್ರಹ್ಮವಿದ್ಯೆ ಅವರ ಆಸಕ್ತಿ. ಆ ಸಂಬಂಧ ಏನಾದರೂ ಸಂದೇಹ ಬಂದರೆ ಗಾಂಧಿ ವಿನೋಬಾರೊಂದಿಗೆ ಸಮಾಲೋಚಿಸುತ್ತಿದ್ದರಷ್ಟೆ.'

'ಹಾಗಿದ್ದಲ್ಲಿ ವಿನೋಬಾ ಭೂದಾನ ಚಳುವಳಿಯಂತಹ ಲೌಕಿಕ ಚಟುವಟಿಕೆಗೆ ಏಕೆ ಇಳಿದರು? ಅದು ತೆಲಂಗಾಣದಲ್ಲಿನ ಕಮ್ಯೂನಿಸ್ಟ್ ಬಂಡಾಯದಿಂದ ನೆಹ್ರೂರನ್ನು ರಕ್ಷಿಸಲು ಎಂಬ ಟೀಕೆಯೂ ಇದೆ!'

'ಇಲ್ಲ! ಅದನ್ನು ಹಾಗೆ ನೋಡಬಾರದು. ರಾಜನೀತಿ ವಿಫಲವಾದಾಗ ಲೋಕನೀತಿಯ ಪ್ರಯೋಗವದು. ಜನ ಬಿಟ್ಟು ಬ್ರಹ್ಮವಿದ್ಯೆಯೂ ಇಲ್ಲ; ಅಧ್ಯಾತ್ಮವೂ ಇಲ್ಲ!'

'ವಿನೋಬಾ ಮತ್ತು ನಿಮ್ಮ ಕೆಲಸಗಳ ಬಗ್ಗೆ ನನಗೆ ಅಪಾರ ಗೌರವವಿದೆ. ಆದರೂ, ಏಕೋ ನಿಮ್ಮ ರಾಜನೀತಿ–ಲೋಕನೀತಿ ಮಾತುಗಳಲ್ಲಿ ಒಂದು ಒಡಕು ಕಾಣುತ್ತಿದೆ... ಜೆಪಿ ಚಳುವಳಿಯ ಸೋಲೂ ಇದೇ ದ್ವಂದ್ವದಿಂದ ಆದದ್ದೇನೋ!'

'ತೀರ್ಮಾನಗಳು ಸುಲಭ. ಕೆಲಸ ಮಾಡುವುದು ಕಷ್ಟ!'

'ಹೌದು, ನಿಮ್ಮ ಮಾತು ನಿಜ. ಆದರೆ ಮಾಡಿದ ಕೆಲಸ ಸಾರ್ಥಕವೂ ಆಗಬೇಕಲ್ಲವೆ? ಅಂದಹಾಗೆ, ದೇಶಾದ್ಯಂತ ಗಾಂಧಿ ಅನುಯಾಯಿಗಳು ಅಲ್ಲಲ್ಲಿಯಾದರೂ ಕಾಣುತ್ತಾರೆ. ಆದರೆ ವಿನೋಬಾ ಅನುಯಾಯಿಗಳು ಕಾಣುವುದೇ ಇಲ್ಲವಲ್ಲ ಏಕೆ? '

ಗೌತಮ್‌ಜಿ ನಗುತ್ತಾ ಎದ್ದು ನನ್ನನ್ನು ಆಲಂಗಿಸಿಕೊಂಡು 'ಹಾಗಿದ್ದರೆ ನೀವೇ ಏಕೆ ವಿನೋಬಾ ಅನುಯಾಯಿಯಾಗಬಾರದು? ಒಮ್ಮೆ ಪೌನಾರ್‌ಗೆ ಬನ್ನಿ' ಎಂದು ಆಹ್ವಾನಿಸುತ್ತಾ ಮಾತು ಮುಗಿಸುವ ಸೂಚನೆ ನೀಡಿದರು.


ಹೌದು ಆಗಲೇ ರಾತ್ರಿ ಹೊತ್ತಾಗಿತ್ತು. ಅವರಿನ್ನೂ ಕಾಡಿನಲ್ಲಿ ನೂರು ಕಿ.ಮಿ.ಗೂ ಹೆಚ್ಚು ದೂರ ಪ್ರಯಾಣ ಮಾಡಬೇಕಿತ್ತು. ನಾನು ಅವರಿಗೆಲ್ಲ ನಮಸ್ಕರಿಸಿ ಬೀಳ್ಕೊಟ್ಟೆ.

–ಡಿ.ಎಸ್. ನಾಗಭೂಷಣ

ಯುವ ಸಮಾಜವಾದಿ ಚಿಂತನ ವೇದಿಕೆ

ಬಾಳ ಪಯಣದಲ್ಲಿ ಕಂಡುಕೊಂಡ ಸತ್ಯಗಳು...

–ಎನ್.ಎಂ. ಕುಲಕರ್ಣಿ



‘ಲೋಕದ ಚಿಂತಿ ಮಾಡ್ತೀನಂತಿ, ಮಾಡಪ್ಪ ನೀ, ಯಾರ ಬ್ಯಾಡಂತಾರ’ ಎಂಬ ಷರೀಫನ ಮಾತಿನಲ್ಲಿ ಜನರನ್ನು ಲೌಕಿಕದಿಂದ ಅಲೌಕಿಕದೆಡೆಗೆ ಸೆಳೆವ ಆಧ್ಯಾತ್ಮದ ಆಶಯವಿದ್ದರೂ ಮೇಲ್ನೋಟದಲ್ಲಿ ಎಷ್ಟು ಚಿಂತಿಸಿದರೂ ಅದು ಅಷ್ಟೆ ಎಂಬರ್ಥವೂ ಇದೆ. ಆದರೆ ‘ನಾನು ಯೋಚಿಸುತ್ತೇನೆ ಆದ್ದರಿಂದ ನಾನು ಇದ್ದೇನೆ’ ಎಂಬ ಆಧುನಿಕ ಚಿಂತನೆಯಲ್ಲಿ ವೈಚಾರಿಕತೆ ಎನ್ನುವುದು ಆಯಾ ವ್ಯಕ್ತಿಯ ಅಸ್ತಿತ್ವದ ಕುರುಹೂ ಹೌದು. ಪ್ರತಿಯೊಬ್ಬ ವ್ಯಕ್ತಿಯೂ ಜೀವಮಾನದಲ್ಲೊಮ್ಮೆ ಏನಾದರೂ ಕ್ರಾಂತಿ ಮಾಡುವ ಅಥವಾ ಯಾವುದಾದರೂ ಚಳುವಳಿಯಲ್ಲಿ ಭಾಗಿಯಾಗಬೇಕೆಂಬ ಹವಣಿಕೆಯಲ್ಲಿರುತ್ತಾನೆ. ಅದರಲ್ಲೂ 20 ರಿಂದ 30ರ ವಯೋಮಾನದವರಲ್ಲಿ ಈ ತುಡಿತ ಅಧಿಕವಾಗಿರುತ್ತದೆ. ಇವತ್ತಿನ ಯುವ ಪೀಳಿಗೆ ಚಳುವಳಿಗಳಿಂದ ವಂಚಿತವಾಗಿದೆ. ಮೂಲಭೂತವಾದದೆಡೆಗೆ ಯುವಕರು ಹೆಚ್ಚು ಆಕರ್ಷಿತರಾಗುತ್ತಿರುವುದಕ್ಕೆ ಚಳುವಳಿಗಳ ಕೊರತೆಯೂ ಒಂದು ಕಾರಣವಿರಬಹುದು.


ನಾನೂ ಕೂಡಾ ಇಂತಹ ಒಂದು ತುಡಿತದಿಂದಲೇ ಹೆಗ್ಗೋಡಿಗೆ ಬಂದೆ. ವಿಜಾಪುರ ಜಿಲ್ಲೆಯಲ್ಲಿ ಹುಟ್ಟಿ ರಾಯಚೂರು, ಗುಲಬರ್ಗಾ ಜಿಲ್ಲೆಗಳಲ್ಲಿ ವಿದ್ಯಾಭ್ಯಾಸ ’ಮಾಡಿ ಮೈಸೂರಿನಲ್ಲಿ ಮುದ್ರಣ ಪತ್ರಿಕೋದ್ಯಮಗಳಲ್ಲಿ ಕೈಯಾಡಿಸಿ, ಕೊನೆಗೆ ಹೆಗ್ಗೋಡಿಗೆ ಬಂದು ನೆಲೆಸಿದ್ದರ ಹಿನ್ನೆಲೆಯನ್ನೊಮ್ಮೆ ಅವಲೋಕಿಸಿದರೆ ‘ನಾನಾರೆಂಬುದು ನಾನಲ್ಲ’ ಎಂಬಂತೆ ಭಾಸವಾಗುತ್ತದೆ. ಕವಲು ದಾರಿಗಳಲ್ಲಿ ಯಾವುದಾದರೊಂದನ್ನು ಆರಿಸಿಕೊಳ್ಳುವ ಸಂದರ್ಭ ಎಲ್ಲರ ಬದುಕಿನಲ್ಲೂ ಒಮ್ಮೆ ಬರುತ್ತದೆ. ಮೈಸೂರಿನಲ್ಲಿ ಅಮೂಲ್ಯವಾದ ಆರು ವರ್ಷಗಳನ್ನು ಅಲೆಮಾರಿಯಂತೆ ಕಳೆದಿದ್ದ ನನಗೆ ಜೀವನ ವ್ಯರ್ಥವಾಗುತ್ತಿದೆ ಎನ್ನಿಸತೊಡಗಿತ್ತು. ಆಗಷ್ಟೆ ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ ಪದವಿ ಪಡೆದಿದ್ದು, ಪತ್ರಕರ್ತನಾಗಬೇಕೋ ಅಥವಾ ಹಳ್ಳಿಗೆ ಹೋಗಿ ಗ್ರಾಮೀಣಾಭಿವೃದ್ಧಿಯ ಚಟುವಟಿಕೆಗಳಲ್ಲಿ ತೊಡಗಬೇಕೋ ಎಂಬೆರಡು ದಾರಿಗಳಲ್ಲಿ ಕೊನೆಯದನ್ನೇ ಆಯ್ದುಕೊಂಡೆ. ‘ಯಾವಾಗಲೂ ಕಷ್ಟದ ದಾರಿಯನ್ನೇ ಆಯ್ದುಕೊ’ ಎನ್ನುತ್ತದೆ ಬೈಬಲ್. ನನ್ನ ಪಾಲಿಗೆ ‘ಅದೇ ಹೃದಯವಂತಿಕೆಯ ದಾರಿ’ಯಾಗಿ ಪರಿಣಮಿಸಿತು.

ಹೆಗ್ಗೋಡಿನಲ್ಲಿ ಪ್ರಸನ್ನ ‘ಚರಕ’ವನ್ನು ಒಂದು ಚಳುವಳಿಯ ರೂಪದಲ್ಲಿ ಕಟ್ಟತೊಡಗಿದ್ದರು. ‘ಹಳ್ಳಿಯ ಯುವಕರು ನಗರಗಳಿಗೆ ಹೋಗಬೇಕು, ನಗರದ ವಿದ್ಯಾಭ್ಯಾಸ ಮತ್ತು ಅನುಭವಗಳೊಂದಿಗೆ ಹಳ್ಳಿಗೆ ಹಿಂದಿರುಗಬೇಕು’ ಎಂದು ಹೇಳುತ್ತಿದ್ದ ಅವರ ಮಾತುಗಳಿಗೆ ಉದಾಹರಣೆಯೆಂಬಂತೆ ನಾನು ಹೆಗ್ಗೋಡಿಗೆ ಆಗಮಿಸಿದ್ದೆ. ‘ಚರಕ’ದ ಜೊತೆಗಿನ ನನ್ನ 15 ವರ್ಷದ ಅನುಭವ ಅಮೂಲ್ಯವಾದದ್ದು. ಒಂದು ಘನ ಉದ್ದೇಶಕ್ಕಾಗಿ ಬದುಕಿನ ಬಹು ಮುಖ್ಯವಾದ ಘಟ್ಟವನ್ನು ಸಮರ್ಪಿಸಿದ ಸಾರ್ಥಕತೆ ನನಗಿದೆ. ಇದು ಯಾವ ಚಳುವಳಿಯಲ್ಲಿ ಭಾಗವಹಿಸಿದುದಕ್ಕಿಂತಲೂ ಕಡಿಮೆಯೇನಲ್ಲ. ಬಹುತೇಕ ಬಡ ಕೃಷಿ ಪರಿವಾರದ ಅಥವಾ ಕೂಲಿ ಕಾರ್ಮಿಕರ ಹೆಣ್ಣುಮಕ್ಕಳಿಗೆ ಕೈಮಗ್ಗ, ಹೊಲಿಗೆ, ಬಣ್ಣಗಾರಿಕೆ, ಬಟ್ಟೆ ಮುದ್ರಣದಂತಹ ಕರಕುಶಲ ತರಬೇತಿಯಲ್ಲಿ ನೆರವಾಗುವುದು, ಅವರು ಉತ್ಪಾದಿಸುವ ಉತ್ಪನ್ನಗಳನ್ನು ನಗರ ಪ್ರದೇಶಗಳಿಗೆ ಹೊತ್ತೊಯ್ದು ಮಾರಾಟ ಮಾಡುವುದು, ಆಗಾಗ ನಾಟಕ, ಸಂಗೀತ, ಸಾಹಿತ್ಯ ಸಂಬಂಧಿ ಕಾರ್ಯಕ್ರಮಗಳ ಮೂಲಕ ಅವರ ಅರಿವನ್ನು ಹಿಗ್ಗಿಸುವ ಕೆಲಸಗಳು ನನಗೆ ಮಾತ್ರವಲ್ಲ ನನ್ನಂತೆ ಭಾಗವಹಿಸಿದ ಇನ್ನೂ ಅನೇಕ ಸ್ನೇಹಿತರಿಗೂ ಕೂಡ ಧನ್ಯತೆಯ ಭಾವವನ್ನು ಸ್ಫುರಿಸುವಂತಿದ್ದವು.

ವ್ಯಕ್ತಿ ಸ್ವಾತಂತ್ರ್ಯಕ್ಕಿಂತ ಮಿಗಿಲಾದದ್ದು ಮತ್ತೊಂದಿಲ್ಲ. ‘ಯಾವೊಬ್ಬ ನಾಯಕ ಅಥವಾ ಸಂಸ್ಥೆಯನ್ನು ಅನುಸರಿಸಿ ಸತ್ಯವನ್ನು ಕಾಣಲು ಸಾಧ್ಯವಿಲ್ಲ. ಅಲ್ಲಿ ಕಾಣುವುದು ಆ ನಾಯಕ ಅಥವಾ ಸಂಸ್ಥೆ ತೋರುವ ಸತ್ಯವೇ ಹೊರತು ಅದೇ ಸಂಪೂರ್ಣ ಸತ್ಯವಲ್ಲ’ ಎಂಬ ಜಿಡ್ಡು ಕೃಷ್ಣಮೂರ್ತಿಯವರ ಮಾತುಗಳು ನನಗೆ ಕ್ರಮೇಣ ಅರ್ಥಪೂರ್ಣವೆನಿಸತೊಡಗಿತು. ‘ಚರಕ’ದಲ್ಲಿ ಅಲ್ಪಾವಧಿ ಕೆಲಸ ಮಾಡುತ್ತಲೇ ‘ಅಂಬರ ಚಿತ್ತಾರ’ ಎಂಬ ಬಟ್ಟೆ ಮುದ್ರಣ, ಹೊಲಿಗೆ, ಕೈ ಕಸೂತಿಯನ್ನೊಳಗೊಂಡ ಗ್ರಾಮೀಣ ಕರಕುಶಲ ಉದ್ಯಮವೊಂದನ್ನು ಸಣ್ಣ ಪ್ರಮಾಣದಲ್ಲಿ ನಡೆಸಿಕೊಂಡು ಬರುತ್ತಿದ್ದೆ. ಆರಂಭದಲ್ಲಿ ನಾನೊಬ್ಬನೇ ಕೆಲಸಗಾರನಾಗಿದ್ದು, ಮದುವೆಯಾದ ಮೇಲೆ ನನ್ನ ಹೆಂಡತಿಯೂ ಸೇರಿ ಈಗ 20 ಜನ ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ 17 ಜನ ಮಹಿಳೆಯರು. ಇವರ‍್ಯಾರಿಗೂ ತಾನು ಇನ್ನೊಬ್ಬರ ಅಧೀನದಲ್ಲಿ ಕೆಲಸ ಮಾಡುತ್ತಿದ್ದೇನೆ ಎಂಬ ಭಾವನೆ ಬರದಂತೆ ಮುಕ್ತ ಮತ್ತು ನಿರ್ಭೀತ ವಾತಾವರಣ ಇಲ್ಲಿದೆ.

ಭಾರತದ ಹಿಂದುಳಿಯುವಿಕೆಗೆ ಕಾರಣಗಳಲ್ಲಿ ದೈಹಿಕ ಶ್ರಮದ ಕಡೆಗಣಿಸುವಿಕೆಯೂ ಒಂದೆಂಬುದಾಗಿ ಲೋಹಿಯಾ ಗುರುತಿಸುತ್ತಾರೆ. ನನ್ನ ಬಟ್ಟೆ ಮುದ್ರಣದ ಕೆಲಸವನ್ನು ನೋಡಿ ಸಾಗರದಲ್ಲಿ ವಕೀಲ ವೃತ್ತಿಯಲ್ಲಿರುವ ನನ್ನ ಸ್ನೇಹಿತನೊಬ್ಬ ತಮಾಷೆ ಮಾಡುತ್ತಾ ‘ವೃತ್ತಿಯ ಆಧಾರದ ಮೇಲೆ ಹೇಳುವುದಾದರೆ ಈಗ ನಾನೇ ಬ್ರಾಹ್ಮಣ ನೀನೇ ಶೂದ್ರ’ ಎಂದ. ಜಾತಿಯನ್ನು ಮೀರುವ ಸಾಧ್ಯತೆಗಳಲ್ಲಿ ಇದೂ ಒಂದು ಎಂದು ನನಗೆ ಅರಿವಾಗಿ ಸಂತೋಷವಾಯಿತು. ಹಾಗೆ ನೋಡಿದರೆ ಈಗ್ಗೆ 25 ವರ್ಷಗಳ ಹಿಂದೆಯೇ ದೇವರು ಇಲ್ಲವೆಂದು ನಿರ್ಧಾರಕ್ಕೆ ಬಂದು ನನ್ನ ಜನಿವಾರವನ್ನು ತೆಗೆದು ಹಾಕಿದೆ. ಅಂದಿನಿಂದ ಇಂದಿನವರೆಗೂ ದೇವರು ಇರಬಹುದಾದ ಸುಳಿವು ನನಗಂತೂ ಸಿಕ್ಕಿಲ್ಲ. ಆದರೆ ಸೃಷ್ಟಿಸೌಂದರ್ಯದಲ್ಲಿ, ಮನುಷ್ಯನ ಜೀವನಶ್ರದ್ಧೆಯಲ್ಲಿ, ನೈತಿಕ ದುಡಿಮೆಯಲ್ಲಿ, ಮುಗ್ಧತೆ ಮತ್ತು ಸರಳತೆಯಲ್ಲಿ ಹೀಗೆ ಹಲವು ಸಂಗತಿಗಳಲ್ಲಿ ದೇವರ ಅನುಭೂತಿಯನ್ನು ಕಂಡಿದ್ದೇನೆ. ಅನ್ವೇಷಕ ಪ್ರವೃತ್ತಿಯಿಂದಾಗಿ ಆಸ್ತಿಕರಿಗಿಂತ ನಾಸ್ತಿಕರೇ ದೇವರನ್ನು ಹೆಚ್ಚು ಧ್ಯಾನಿಸುತ್ತಾರೆಂದು ನನಗೆ ಅನುಮಾನ!

ದೇವರು ಸಾಯುವವರೆಗೂ ಜಾತಿ ಸಾಯುವುದಿಲ್ಲ ಎಂದು ಈಚೆಗೆ ಚಂಪಾ ಅವರ ಹೇಳಿಕೆ ಬಂತು. ಸತ್ಯ. ದೇವರಿಗೂ ಜಾತಿಗೂ ಅಭೇದ್ಯ ಸಂಬಂಧವಿದೆ. ಆದರೆ ದೇವರು ಮತ್ತು ಜಾತಿಯನ್ನು ಮುಗ್ಧವಾಗಿ ನಂಬಿರುವ ಅಸಂಖ್ಯಾತ ಜನಗಳ ಬಗೆಗೆ ಸಹಾನುಭೂತಿ ಬೇಕೆನಿಸುತ್ತದೆ. ಜಾತಿರಹಿತ ಸಮಾಜ ನಿರ್ಮಾಣದ ಬಗ್ಗೆ ಭಾಷಣಗಳಿಗಿಂತ ಹಳ್ಳಿಗಳಲ್ಲಿ ಇನ್ನೂ ಜೀವಂತವಾಗಿರುವ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಕ್ರಿಯಾತ್ಮಕವಾಗಿ ಏನನ್ನಾದರೂ ಮಾಡಬೇಕಾಗಿದೆ. ನಮ್ಮ ಮನೆಗೆ ಆಗಾಗ್ಗೆ ಕೆಲಸಕ್ಕೆ ಬರುವ ದಲಿತ ಮಹಿಳೆಯರು ಅಡುಗೆ ಮನೆಯಲ್ಲಿ ನನ್ನ ತಾಯಿ ಮತ್ತು ಹೆಂಡತಿಯೊಂದಿಗೆ ಒಟ್ಟಿಗೆ ಊಟ ಮಾಡುತ್ತಾರೆ. ಅಕ್ಕ-ಪಕ್ಕದವರು ಅಪಸ್ವರ ಎತ್ತಿದರೂ ನಾವ್ಯಾರೂ ಸೊಪ್ಪು ಹಾಕಿಲ್ಲ. ಇದು ಕಾಲದೇಶಗಳ ಪಲ್ಲಟದಿಂದ ಸಾಧ್ಯವಾಗಿರುವ ಕ್ರಿಯೆ. ವಿಜಾಪುರ ಜಿಲ್ಲೆಯ ನಮ್ಮ ಮೂಲ ಮನೆಯಲ್ಲಿ ಇದು ಈಗಲೂ ಸಾಧ್ಯವಿಲ್ಲ. ಜಾತಿ ಇದ್ದೂ ಇಲ್ಲದಂತಾಗುವ ಸಾಮರಸ್ಯದ ಸಮಾಜ ನಿರ್ಮಾಣವಾದರೂ ನಮ್ಮ ಗುರಿಯಾಗಬೇಕು. ಆರ್ಥಿಕ ಅಸಮಾನತೆ ಕಡಿಮೆಯಾದಂತೆ ಮತ್ತು ಶೈಕ್ಷಣಿಕ, ಔದ್ಯೋಗಿಕ ಅವಕಾಶಗಳು ಹೆಚ್ಚಿದಂತೆ ಸಾಮಾಜಿಕ ವಿಷಮತೆಯು ತನ್ನಿಂದ ತಾನೇ ದೂರವಾಗುತ್ತದೆ. ಆ ದಿನಗಳು ಹೆಚ್ಚು ದೂರವಿಲ್ಲವೆಂಬ ಆಶಾವಾದ ನನ್ನದು.



(ಸಾಹಿತ್ಯ-ನಾಟಕ-ಚಿತ್ರಕಲೆಗಳಲ್ಲೂ ಆಸಕ್ತಿ ಇರುವ ಹೆಗ್ಗೋಡಿನ ಎನ್.ಎಂ. ಕುಲಕರ್ಣಿ ನಮ್ಮ ನಡುವೆ ಇರುವ ಕ್ರಿಯಾಶೀಲ ಗ್ರಾಮೀಣ ಚೇತನಗಳಲ್ಲೊಬ್ಬರು).

ಸಮಕಾಲೀನ

ಬರ ಬಂದಿದೆ ದೇಶಕ್ಕೆ!: ಆದರೆ ಎಂಥ ಬರ?



ಭೂಮಿಯ ಮೇಲಿನ ವಾತಾವರಣ ಕಲಷಿತಗೊಳ್ಳುತ್ತಿದೆ. ಭೂಮಿಯ ತಾಪಮಾನ ತ್ವರಿತ ಗತಿಯಲ್ಲಿ ಏರುತ್ತಾ ಇದ್ದು, ನಿರ್ಣಾಯಕ ಹವಾಮಾನ ವೈಪರೀತ್ಯಗಳು ಕಾಣತೊಡಗಿವೆ. ಭೂಮಿಯ ಮೇಲಿನ ಜೀವಜಗತ್ತಿಗೆ ಇದು ಮಾರಕವಾಗಿ ಪರಿಣಮಿಸುತ್ತಿದೆ ಎಂಬ ಮಾತುಗಳೆಲ್ಲ ಈಗ ಸವಕಲು ಮಾತುಗಳಾಗಿ ಹೋಗಿಬಿಟ್ಟಿವೆ. ಆದರೆ ಕಳೆದ ಏಪ್ರಿಲ್ ತಿಂಗಳ ಬಿಸಿಲು ಈ ಮಾತುಗಳಿಗೆ ಒಂದಿಷ್ಟಾದರೂ ಜೀವ ನೀಡಿ ಜನ ಯೋಚಿಸುವಂತೆ ಮಾಡಿರಬಹುದು.. ಜಗತ್ತಿನ ಹಲವೆಡೆ ೪೦ ಡಿಗ್ರಿಗೂ-ಕೆಲವೆಡೆ ೫೦ಕ್ಕೂ- ಹೆಚ್ಚು ತಾಪಮಾನವನ್ನು ದಾಖಲಿಸಿ ಶತಮಾನದ ಅತ್ಯಂತ ಹೆಚ್ಚಿನ ಬಿಸಿಲಿನ ತಿಂಗಳು ಎನ್ನಿಸಿಕೊಂಡ ಈ ಏಪ್ರಿಲ್‌ನಲ್ಲಿ ಜಗತ್ತಿನಾದ್ಯಂತ ಸಾವಿರಾರು ಜನ ಈ ಬಿಸಿಲಿನ ಝಳ ತಾಳಲಾರದೆ ಪ್ರಾಣ ಕಳೆದುಕೊಂಡಿದ್ದಾರೆ.. ಎಂದೂ ಬಿಸಿಲಿನಿಂದ ಸತ್ತ ಸುದ್ದಿಯಿಲ್ಲದ ಕರ್ನಾಟದಲ್ಲೂ ಇಂತಹ ಸಾವಿನ ಪ್ರಕರಣಗಳು ದಾಖಲಾದವು.

ಈ ಎಲ್ಲ ಮಾಹಿತಿ-ಸುದ್ದಿಗಳಾದರೂ ನಮ್ಮನ್ನು ನಮ್ಮ ಸುತ್ತ ಏನಾಗುತ್ತಿದೆ, ಅದಕ್ಕೆ ನಾವೆಷ್ಟು ಕಾರಣ ಎಂದು ಯೋಚಿಸಲು ಪ್ರೇರೇಪಿಸಬೇಕು. ನಮ್ಮ ದೇಶವನ್ನು ಸತತವಾಗಿ ಎರಡನೇ ವರ್ಷ ಬರ ಕಾಡುತ್ತಿದೆ. ಸದಾ ಬರಕ್ಕೆ ತುತ್ತಾಗುವ ದೇಶವೆಂದು ಹೆಸರಾದ ಭಾರತ ಈ ಬಾರಿ ಕಳೆದ ನಲವತ್ತೈದು ವರ್ಷಗಳಿಂದ ಕಾಣದಂತಹ ಭೀಕರ ಬರಕ್ಕೆ ತುತ್ತಾಗಿದೆ ಎಂದು ಹೇಳಲಾಗುತ್ತಿದೆ. ಜಮ್ಮು ಮತ್ತು ಕಾಶ್ಮೀರದಂತಹ ಸದಾ ತೇವವಿರುವ ರಾಜ್ಯದಲ್ಲಿ ಈಗ ಕುಡಿಯುವ ನೀರಿನ ಅಭಾವ ಉಂಟಾಗಿದೆ ಎಂದರೆ ಪರಿಸ್ಥಿತಿ ಸಾಕಷ್ಟು ಭೀಕರವಾಗಿದೆ ಎಂದೇ ಅರ್ಥ. ಸರ್ಕಾರ ೧೧೦೦೦ ಹಳ್ಳಿ ಪಟ್ಟಣಗಳಿಗೆ ಟ್ಯಾಂಕರ್‌ಗಳು ಮತ್ತು ರೈಲುಗಳ ಮೂಲಕ ಕುಡಿಯುವ ನೀರನ್ನು ಪೂರೈಸಬೇಕಾಗಿದೆ. ಇದು ಕೂಡ ಕನಿಷ್ಠ ಅಗತ್ಯಗಳಿಗೆ ಮಾತ್ರ. ಹಲವೆಡೆ ಹೆಚ್ಚುವರಿ ನೀರಿಗೆ ದುಬಾರಿ ಹಣಕೊಟ್ಟು ಕೊಳ್ಳಬೇಕಿದೆ.

ಕೊಳವೆ ಬಾವಿಗಳಲ್ಲಿ ಬಹುಪಾಲು ನೀರು ಬತ್ತಿ ಹೋಗಿದೆ. ೧೫೦೦-೨೦೦೦ ಅಡಿ ಕೊರೆದರೂ ನೀರಿನ ಪಸೆ ಕಾಣದಾಗಿದೆ. ಅತಿಯಾದ ಹಿಂಗಾರು ಮಳೆಯ (ಚೆನ್ನೈ ಪ್ರವಾಹ ನೆನಪಿಸಿಕೊಳ್ಳಿ) ಲಾಭ ಪಡೆದ ಮತ್ತು ಮಲೆನಾಡ ನದಿ ತೀರದ ಕೆಲ ಪ್ರದೇಶಗಳ ಹೊರತಾಗಿ ನಮ್ಮ ಕೆರೆ-ಕಟ್ಟೆಗಳು ಬರಿದಾಗಿವೆ. ಆಧುನಿಕ ಜಲಾಶಯಗಳಲ್ಲಿ ನೀರಿನ ಸಂಗ್ರಹ ದಾಖಲೆಯ ಮಟ್ಟಕ್ಕೆ ಕುಸಿದಿದ್ದು ರೈತರು ಕಂಗಾಲಾಗಿದ್ದಾರೆ. ಬೆಳೆ ಬೆಳೆಯಲಾಗದ ಮತ್ತು ಬೆಳೆ ನಾಶದ ಕಾರಣಗಳಿಂದಾಗಿ ರೈತರು ನೂರಾರು ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಾವಿರಾರು ಸಂಖ್ಯೆಯಲ್ಲಿ ಸಣ್ಣ ಪುಟ್ಟ ರೈತರು ಮತ್ತು ಕೃಷಿ ಕೂಲಿಕಾರರು ಗುಳೆ ಎದ್ದು ಹೊರಟಿದ್ದಾರೆ. ಅವರ ಕುಟುಂಬಗಳು ನೆಲೆ ಕಳೆದುಕೊಂಡು ಅನಾಥ ಸ್ಥಿತಿಗೆ ತಲುಪಿವೆ.

ಅಧಿಕೃತ ಮಾಹಿತಿಯ ಪ್ರಕಾರ ರಾಷ್ಟ್ರದ ೧೧ ರಾಜ್ಯಗಳ ಸುಮಾರು ೨೭೫ ಜಿಲ್ಲೆಗಳಲ್ಲಿ ಈಗ ಬರ ಕಾಣಿಸಿಕೊಂಡಿದೆ. ಇದರಿಂದಾಗಿ ಸುಮಾರು ೩೫ ಕೋಟಿ ಜನರ ಬದುಕು ದುಸ್ತರವಾಗಿದೆ. ಕರ್ನಾಟಕದ ಬಗ್ಗೆ ಹೇಳುವುದಾದರೆ ರಾಜ್ಯದ ೧೭೫ ತಾಲ್ಲೂಕುಗಳ ಪೈಕಿ ೧೩೬ರಲ್ಲಿ-ವಿಶೇಷವಾಗಿ ಉತ್ತರ ಕರ್ನಾಟಕದ ತಾಲ್ಲೂಕುಗಳಲ್ಲಿ-ಬರ ಕಾಣಿಸಿಕೊಂಡಿದೆ. ಇದರಿಂದಾಗಿ ಆಗಿರುವ ಬೆಳೆನಷ್ಟದ ಮೌಲ್ಯ ೧೩೦೦ ಕೋಟಿ ರೂಪಾಯಿಗಳೆಂದು ಅಂದಾಜಿಸಲಾಗಿದೆ.

ಇಲ್ಲಿನ ವಿಷಾದದ ಸಂಗತಿ ಎಂದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಂತಹ ಭೀಕರ ಬರದ ಬಗ್ಗೆ ನಿಜವಾಗಿ ಎಚ್ಚೆತ್ತುಕೊಂಡದ್ದು ನಮ್ಮ ಸರ್ವೋಚ್ಚ ನ್ಯಾಯಾಲಯ ಸರ್ಕಾರಗಳ ಕಡು ನಿಷ್ಕ್ರಿಯತೆಯ ಬಗ್ಗೆ ಚಾಟಿ ಬೀಸಿ, ಬರವನ್ನು ರಾಷ್ಟ್ರೀಯ ವಿಪತ್ತೆಂದು ಪರಿಗಣಿಸಿ ಪರಿಹಾರ ಕಾರ್ಯಕ್ರಮಗಳಿಗಾಗಿ ತುರ್ತಾಗಿ ಹಣ ಬಿಡುಗಡೆ ಮಾಡಲು ಸೂಚಿಸಿದಾಗಲೇ. ನಂತರ ಸರ್ಕಾರಗಳೇನೋ ಉದ್ಯೋಗ ಖಾತರಿ ಯೋಜನೆ, ಕೆರೆಕಟ್ಟೆಗಳ ಸ್ವಚ್ಛತೆ, ಬೆಳೆ ವಿಮೆ, ಬೆಳೆ ನಾಶ ಪರಿಹಾರ ಇತ್ಯಾದಿಗಳಿಗಾಗಿ ಶಕ್ತ್ಯಾನುಸಾರ ವಿಶೇಷ ಮೊತ್ತಗಳನ್ನು ಬಿಡುಗಡೆ ಮಾಡಿವೆ. ನಮ್ಮ ಮುಖ್ಯಮಂತ್ರಿಗಳು ಬರ ಪ್ರದೇಶಗಳ ಪ್ರವಾಸ ಮಾಡಿ ಪರಿಹಾರ ಕ್ರಮಗಳ ಮೇಲೆ ನಿಗಾ ಇಡುವ ವ್ಯವಸ್ಥೆ ಮಾಡಿದಂತಿದೆ. ಪ್ರಧಾನಿಯವರೂ ಈ ಸಂಬಂಧ ಮುಖ್ಯಮಂತ್ರಿಗಳ ಸಭೆ ಕರೆದು ಸಮಾಲೋಚನೆಗಳನ್ನು ಮಾಡಿದ್ದಾರೆ.

ಆದರೆ ಈ ಸಂದರ್ಭದಲ್ಲಿ ಮುಖ್ಯ ಪ್ರಶ್ನೆ, ಪ್ರವಾಸ ಪರಿಹಾರಗಳದ್ದಲ್ಲ. ಅವೇನಿದ್ದರೂ ತತ್ಕಾಲೀನ ಕ್ರಮಗಳು. ಈಗ ಕೇಳಿಕೊಳ್ಳಬೇಕಾಗಿರುವ ಮುಖ್ಯ ಪ್ರಶ್ನೆಗಳೆಂದರೆ, ಬರ ಎಂದರೆ ಏನು ಎಂಬ ಮೂಲಭೂತ ಪ್ರಶ್ನೆಯನ್ನು ನಾವು ಕೇಳಿಕೊಂಡಿದ್ದೇವೆಯೇ? ಮತ್ತು ಈ ಪ್ರಶ್ನೆಗೆ ದೊರೆತ ಉತ್ತರದ ಆಧಾರದ ಮೇಲೆ ನಮ್ಮ ನಾಡನ್ನು ಆದಷ್ಟೂ ಬರಮುಕ್ತ ನಾಡನ್ನಾಗಿ ಮಾಡುವ ಪ್ರಯತ್ನ ಮಾಡಿದ್ದೇವೆಯೇ? ಇದಕ್ಕಾಗಿ ನಮಗೆ ಲಭ್ಯವಿರುವ ವಿಜ್ಞಾನ-ತಂತ್ರಜ್ಞಾನಗಳ ತಿಳುವಳಿಕೆಯನ್ನು ಸಮರ್ಥವಾಗಿ ಬಳಸಿಕೊಂಡಿದ್ದೇವೆಯೇ? ಎಂಬುವಾಗಿವೆ.

ಕಳೆದ ನಾಲ್ಕು ವರ್ಷಗಳಲ್ಲಿ ಸರಾಸರಿ ವಾರ್ಷಿಕ ಮಳೆಯ ಪ್ರಮಾಣ ಗಣನೀಯವಾಗಿ ಕುಸಿದಿದೆ ಮತ್ತು ಕಳೆದ ಮೇ ನಲ್ಲಿಯೇ ಈ ಬಾರಿಯ ಮುಂಗಾರು ಶೇ. ೫೭ರಷ್ಟು ಕಡಿಮೆಯಾಗಲಿದೆ ಎಂದು ಹವಾಮಾನ ತಜ್ಞರು ಎಚ್ಚರಿಸಿದ್ದರು. ಆದರೆ ಏನು ಫಲ? ಬರ ಎಂದರೇನು? ಸರಳವಾಗಿ ಹೇಳುವುದಾದರೆ ನೀರಿನ ಅಭಾವ. ಈ ಅಭಾವ ಏಕೆ ಉಂಟಾಗುತ್ತಿದೆ? ಇದಕ್ಕೆ ಸರಳ ಉತ್ತರ: ಮಳೆಯ ಕೊರತೆ. ಈ ಉತ್ತರ ಮುಂದೆ ಎರಡು ಪ್ರಶ್ನೆಗಳಿಗೆ ಕಾರಣವಾದರೆ ಮಾತ್ರ ನಾವು ಬರವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ. ಆ ಎರಡು ಪ್ರಶ್ನೆಗಳೆಂದರೆ, ಮಳೆಯ ಕೊರತೆ ಏಕೆ ಸಂಭವಿಸುವುದು ಎಂಬುದು ಒಂದಾದರೆ, ಕಾಲಾನುಕಾಲಕ್ಕೆ ಬಿದ್ದ ಮಳೆಯನ್ನು ನಮ್ಮ ಬದುಕಿಗೆ ಹಲವು ರೂಪಗಳ ಉಳಿತಾಯಗಳ ಮೂಲಕ ಭದ್ರತೆ ಮಾಡಿಕೊಂಡಂತೆ ನಾವು ಉಳಿತಾಯ ಮಾಡಿಕೊಳ್ಳುತ್ತಿದ್ದೇವೆಯೇ ಎಂಬುದು.

ಇಲ್ಲಿನ ಮೊದಲ ಪ್ರಶ್ನೆ ಬಹುಚರ್ಚಿತ ಪ್ರಶ್ನೆ. ಅದರ ಚರ್ಚೆ ಇಲ್ಲಿ ಬೇಡ. ಎರಡನೆಯ ಪ್ರಶ್ನೆಯನ್ನು ತೆಗೆದುಕೊಂಡರೆ, ಬಹಳ ಜನ ಜಲತಜ್ಞರ ಅಭಿಪ್ರಾಯದ ಪ್ರಕಾರ ಭಾರತದಲ್ಲಿ ಬಹುಬಾರಿ ಕಾಣಿಸಿಕೊಳ್ಳುತ್ತಿರುವುದು ಮಳೆ ಕೊರತೆ ಮೂಲವಾದ ಬರವಲ್ಲ; ಬದಲಿಗೆ ಮಾನವ ನಿರ್ಮಿತ ಬರ. ಎಲ್ಲಕ್ಕೂ ಬಜೆಟ್ ಮಾಡುತ್ತಾ ಬಂದಿರುವ ನಾವು ಜನರಿಗೆ ಮೂಲ ಅಗತ್ಯವಾದ ·ಜೀವದಾಯಿ ನೀರಿಗೆ ಮಾತ್ರ ಬಜೆಟ್ ಮಾಡುತ್ತಿಲ್ಲ. ನೀರಿನ ವೈಜ್ಞಾನಿಕ ಸಂಗ್ರಹ, ಆದ್ಯತೆಗಳನ್ನನುಸರಿಸಿ ನೀರಿನ ಮರುವಿತರಣೆ, ನಗರಗಳಲ್ಲಿನ ನೀರಿನ ದುಂದು ಬಳಕೆ, ನಮ್ಮ ಕೃಷಿ ಪದ್ಧತಿಗಳಲ್ಲಿ ಮಾಡಬೇಕಾದ ಮಾರ್ಪಾಡು ಇತ್ಯಾದಿಗಳ ಬಗ್ಗೆ ಬರೀ ಮಾತು-ಚರ್ಚೆ ಕೇಳಿ ಬರುತ್ತಿದೆಯೇ ಹೊರತು ಕಾರ್ಯ ಯೋಜನೆಯ ಸುದ್ದಿಯಿಲ್ಲ. ಇದಕ್ಕೆ ಸರ್ಕಾರಗಳ ಒಳಗೂ, ಹೊರಗೂ ಇರುವ ಪಟ್ಟಭದ್ರ ಹಿತಾಸಕ್ತಿಗಳೇ ಕಾರಣ. ಉದಾಹರಣೆಗೆ ನದಿ ಜೋಡಣೆ, ನದಿ ತಿರುವು, ಬೃಹತ್ ಅಣೆಕಟ್ಟುಗಳ ರಾಜಕಾರಣಿ-ಕಂಟ್ರಾಕ್ಟರುಗಳ ಜೋಡಿ ಲಾಬಿ ಸರ್ಕಾರಗಳ ಒಳಗೆ ಕೆಲಸ ಮಾಡುತ್ತಿದ್ದರೆ, ಹೊರಗೆ ಜಲಕ್ರೀಡೆ, ತಂಪುಪಾನೀಯಗಳ ಉದ್ಯಮ ಮತ್ತು ಕ್ರಿಕೆಟ್ ಉದ್ಯಮಗಳಂತಹ ಲಾಬಿಗಳು ಕೆಲಸ ಮಾಡುತ್ತಿರುತ್ತವೆ. ಉದಾಹರಣೆಗೆ, ಕುಡಿಯಲು ನೀರಿಲ್ಲದೆ ತತ್ತರಿಸುತ್ತಿರುವ ಮಹಾರಾಷ್ಟ್ರದಲ್ಲಿ ಮುಂಬೈನ ಮೂರು ಕ್ರಿಕೆಟ್ ಮೈದಾನಗಳನ್ನು ನಿರ್ವಹಿಸಲು ೬೦ ಲಕ್ಷ ಲೀಟರ್ ನೀರು ಅಗತ್ಯವೆಂದು ಹೇಳಿಕೊಂಡ ಭಾರತದ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ಸರ್ವೋಚ್ಚ ನ್ಯಾಯಾಲಯ ಛೀಮಾರಿ ಹಾಕಿ ಪಂದ್ಯಗಳನ್ನು ರಾಜ್ಯದ ಹೊರಗೆ ನಡೆಸುವಂತೆ ಆದೇಶೀಸಿದೆ. ಬರ ಪರಿಶೀಲನೆಗೆ ಬಂದ ಮಂತ್ರಿಯ ಹೆಲಿಕಾಪ್ಟರ್ ಇಳಿಯಲು ಹೆಲಿಪ್ಯಾಡನ್ನು ಸಜ್ಜುಗೊಳಿಸಲು ಸಾವಿರಾರು ಲೀಟರ್ ಖರ್ಚು ಮಾಡುವ ಭಂಡ ಸರ್ಕಾರಿ ವ್ಯವಸ್ಥೆಯನ್ನು ಹೊಂದಿರುವ ನಾವು ಸಾಗಬೇಕಾದ ದಾರಿ ದೂರವಿದೆ.

ಮುಂದಿನ ಪುಟಗಳಲ್ಲಿ ಲೇಖನಗಳು ಈ ವಿಷಯವನ್ನೇ ಹಲವು ದಿಕ್ಕುಗಳಿಂದ ಚರ್ಚಿಸುವ ಪ್ರಯತ್ನ ಮಾಡಿವೆ. ಓದಿ, ಬರೆಯಿರಿ-**ಸಂಪಾದಕ**

ಬರ: ಇದು ವಿಲಾಸಿ ಜೀವನದ ಪರಿಣಾಮ

–ನಾಡೋಜ ಎಲ್. ನಾರಾಯಣ ರೆಡ್ಡಿ

ಕರ್ನಾಟಕದ ಫುಕುವೊಕಾ, ಕೃಷಿ ಋಷಿ ಎಂದೆಲ್ಲ ಜನರಿಂದ ಕರೆಯಲ್ಪಡುವ ಡಾ. ಎಲ್ ನಾರಾಯಣ ರೆಡ್ಡಿ ಅಷ್ಟೇನೂ ಶಿಕ್ಷಿತರಲ್ಲದಿದ್ದರೂ ನೆಲ–ನೀರು–ಗಾಳಿಗಳೊಡನೆ ಒಡನಾಡಿ ಅವುಗಳ ಪರಸ್ಪರ ಸಂಬಂಧಗಳ ಗುಟ್ಟುಗಳನ್ನು ಅರಿತು ಕೃಷಿ ಎಂಬ ಪದಕ್ಕೇ ಹೊಸ ಅರ್ಥ ನೀಡಿದವರು. ಸಮಗ್ರ ಬದುಕು–ಸಮಗ್ರ ಕೃಷಿಯ ಪ್ರತಿಪಾದಕರಾದ ಅವರು ದೊಡ್ಡಬಳ್ಳಾಪುರದ ಬಳಿಯಲ್ಲಿನ ತಮ್ಮ ತೋಟದಲ್ಲಿ ಈಗಲೂ ಪ್ರಯೋಗನಿರತರಾಗಿದ್ದು ನಮಗಾಗಿ ಇಲ್ಲಿ ಮಾತನಾಡಿದ್ದಾರೆ–ಸಂ



ಬರಗಾಲದಲ್ಲೂ ಹಸಿರಿನಿಂದ ನಳನಳಿಸುವ ತಮ್ಮ ತೋಟದಲ್ಲಿ ಯುವ ರೈತರೊಂದಿಗೆ ಮಾತುಕತೆಯಲ್ಲಿ ಎಲ್. ನಾರಾಯಣ ರೆಡ್ಡಿಯವರು

ಭಾರತಕ್ಕೆ ಬರ ಹೊಸದಲ್ಲ, ನಿಸರ್ಗ ನಿರ್ಮಿತ ಹತ್ತಾರು ಭೀಕರ ಬರಗಾಲಗಳನ್ನು ಈ ನಾಡು ಕಂಡಿದೆ. ಆದರೆ ನಾವು ಈಗ ಎದುರಿಸುತ್ತಿರುವ ಬರ ನಿಸರ್ಗ ನಿರ್ಮಿತವಲ್ಲ; ನಾವೇ ನಮ್ಮ ದುರಾಸೆಗಳಿಂದಾಗಿ ಆಹ್ವಾನಿಸಿಕೊಂಡದ್ದು. ಪೆಟ್ರೋಲ್, ಡೀಸೆಲ್‌ಗಳ ಅತಿಯಾದ ಬಳಕೆ, ಕಾಡು–ಭೂಮಿಯ ಅನುಪಾತ ಕ್ಷೀಣಿಸುತ್ತಿರುವುದು ನೈಸರ್ಗಿಕ ಜಲಚಕ್ರದ ಮೇಲೆ ತೀವ್ರತರ ಪರಿಣಾಮ ಬೀರಿ ನಿಸರ್ಗದ ಋತುಚಕ್ರವನ್ನೇ ಅಸ್ತವ್ಯಸ್ತಗೊಳಿಸಿಬಿಟ್ಟಿದೆ. ಅಪಾರ ಪ್ರಮಾಣದಲ್ಲಿ ಇಂಗಾಲದ ಡೈಆಕ್ಸೈಡ್ ವಾತಾವರಣಕ್ಕೆ ಸೇರುತ್ತಿರುವುದು, ತಾಪಮಾನದ ಹೆಚ್ಚಳಕ್ಕೆ ಕಾರಣವಾಗಿದೆ. ವಿಮಾನಗಳೂ ಸೇರಿದಂತೆ ಅತಿಯಾದ ಸ್ವಯಂಚಾಲಿತ ವಾಹನಗಳ ಸಂಚಾರ. ಕೃಷಿಯಲ್ಲಿ ಮಿತಿಮೀರಿದ ರಾಸಾಯನಿಕಗಳ ಬಳಕೆ, ಅಭಿವೃದ್ಧಿಯ ಹೆಸರಿನಲ್ಲಿ ಕಾಡು–ಕಣಿವೆ, ಕೆರೆ–ಕುಂಟೆ, ನದಿ–ಹಳ್ಳಗಳ ನಾಶಮಾಡಿರುವುದು ಬರಕ್ಕೆ ಆಹ್ವಾನ ನೀಡಿದಂತಾಗಿದೆ. ರೈತರಿಗೆ ಉಚಿತ ವಿದ್ಯುತ್ ನೀಡಿರುವುದು ಅಂತರ್ಜಲದ ಶೋಷಣೆಗೆ ಕಾರಣವಾಯ್ತು. ಅಂತರ್ಜಲವನ್ನು ದುರ್ಬಳಕೆ ಮಾಡುತ್ತಿರುವುದರಿಂದ ನೆಲದ ತಂಪು ಮಾಯವಾಯ್ತು. ಬೆಳೆ ಬೆಳೆಯುವ ವಿಧಾನದಲ್ಲಿ ಆದ ಬದಲಾವಣೆ ಮತ್ತು ಕೃತಕ ಆಹಾರ ಪದ್ಧತಿ, ಅತಿಯಾದ ಮಾಂಸದ ಉತ್ಪಾದನೆ ಇವು ಕೂಡ ನೀರಿನ ದುರ್ಬಳಕೆಗೆ ಕಾರಣವಾದವು; ಜೀವ ಸಂಕುಲವನ್ನು ಸಂಕಷ್ಟಕ್ಕೆ ದೂಡಿದವು.

ಮುಖ್ಯವಾಗಿ ರೈತರು ತೃಣಧಾನ್ಯಗಳನ್ನು ಬೆಳೆಯದಿರುವುದು, ಆಹಾರಧಾನ್ಯ ಮತ್ತು ಹುಲ್ಲಿನ ಕೊರತೆಗೆ ಕಾರಣವಾಯ್ತು. ತೃಣಧಾನ್ಯಗಳನ್ನು ಬೆಳೆಯಲು ಕಡಿಮೆ ನೀರು ಸಾಕು, ವೆಚ್ಚವು ಕಡಿಮೆ. ಅದೇ ಭತ್ತ, ಕಬ್ಬು, ಗೋಧಿ, ಮುಸುಕಿನ ಜೋಳ ಮುಂತಾದವು ಹೆಚ್ಚಿನ ನೀರು ಬೇಡುತ್ತವೆ. ವಾಣಿಜ್ಯ ಬೆಳೆಗಳನ್ನು ನೆಚ್ಚಿಕೊಂಡು ನೀರಿನ ದುರ್ಬಳಕೆ ಅತಿಯಾಯ್ತು, ಸರ್ಕಾರ, ಕೃಷಿ ವಿಶ್ವವಿದ್ಯಾಲಯಗಳ ಪಂಡಿತರಿಗೆ ಇದರ ಅರಿವಿಲ್ಲ. ಅವರು ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳನ್ನು ಉತ್ಪಾದಿಸುವ ಬಹುರಾಷ್ಟ್ರೀಯ ಕಂಪನಿಗಳ ಏಜೆಂಟರಾಗಿದ್ದಾರೆ. ಸಂಕರ ತಳಿ, ಅಧಿಕ ಇಳುವರಿ ತಳಿ, ಜಿ.ಎಂ. ತಳಿಗಳು ರೈತರ ಪ್ರಾಣ ಹಿಂಡುತ್ತಿವೆ. ಈ ಹೊಸ ತಳಿಗಳು ಪರಿಸರದ ಸಹಜತೆಯನ್ನು ನಾಶಮಾಡುವ ಮೂಲಕ ಆತಂಕಕಾರಿಯಾದ ಬರಕ್ಕೆ ಕಾರಣವಾಗಿವೆ.

ನೀರಿನ ದುರ್ಬಳಕೆ ನಿಲ್ಲಬೇಕು. ಬೇಳೆ, ತರಕಾರಿ, ಹಣ್ಣು, ಕೃಷಿ ಉಪಕರಣಗಳಿಗಾಗಿ ವಿದೇಶಗಳನ್ನು ಅವಲಂಬಿಸುವುದು ನಿಲ್ಲಬೇಕು. ಸರಳ, ಸ್ವಾವಲಂಬಿ ಜೀವನಶೈಲಿ ರೂಪಿಸಿಕೊಳ್ಳದಿದ್ದರೆ ಇನ್ನೂ ಭೀಕರ ಅಪಾಯ ಕಾದಿದೆ. ಜನ–ಜಾನುವಾರು, ಪಶು–ಪಕ್ಷಿಗಳಿಗೆ ಅನುಕೂಲಕರವಾದ ಪರಿಸರ ಸ್ನೇಹಿ ಬೆಳೆಪದ್ಧತಿಯನ್ನು ರೂಢಿಸಿಕೊಳ್ಳಬೇಕು. ಸುಸ್ಥಿರ ಮತ್ತು ಅವಶ್ಯಕವಾದ ಬೆಳೆ ಪದ್ಧತಿಯನ್ನು ಆದ್ಯತೆಯ ಮೇಲೆ ರೂಢಿಸಿಕೊಂಡು ಆರೋಗ್ಯಕ್ಕೆ ಪೂರಕವಾದ ಆಹಾರವನ್ನು ಮಾತ್ರ ಸ್ವೀಕರಿಸುವ ಜೀವನಶೈಲಿ ನಮ್ಮದಾಗಬೇಕು.

ಅವೈಜ್ಞಾನಿಕ ಕೃಷಿ ಪದ್ಧತಿಯಿಂದ ಮಣ್ಣಿನ ಸಾವಯವ ಇಂಗಾಲದ ಪ್ರಮಾಣ ಶೇ.೦.೦೩ಕ್ಕೆ ಕುಸಿದಿದೆ. ಮಣ್ಣಿನ ಫಲವತ್ತತೆಯನ್ನು, ಸಾವಯವ ಇಂಗಾಲದ ಪ್ರಮಾಣವನ್ನು ಶೇ.೩ಕ್ಕೆ ಹೆಚ್ಚಿಸದಿದ್ದರೆ ಅಪಾಯ ಕಾದಿದೆ. ಇದು ಜರೂರಿನ ಸಂಗತಿ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಭೂಮಿಯ ರಕ್ಷಣೆಗೆ ಮರಗಳು ಅಗತ್ಯ. ಹೂವು, ಹಣ್ಣು, ಸೌದೆ, ಸೊಪ್ಪು ನೀಡುವ ಮರಗಳನ್ನು ಬೆಳೆಸಬೇಕು. ಮರಗಳು ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತವೆ; ಬಿಸಿಲನ್ನು ತಡೆದು ಸಮ ಪ್ರಮಾಣದ ಶಾಖ ಇರುವಂತೆ ನೋಡಿಕೊಳ್ಳುತ್ತವೆ. ಮಳೆನೀರನ್ನು ಭೂಮಿಯಲ್ಲಿ ಸೇರಿಸಿ, ವ್ಯರ್ಥವಾಗಿ ಹರಿದು ಹೋಗುವುದನ್ನು ತಡೆಯುತ್ತವೆ. ಭೂಮಿಯಲ್ಲಿ ಆಮ್ಲಜನಕ ಹರಿದಾಡಲು ನೆರವಾಗುತ್ತವೆ. ಗಾಳಿ, ಬಿಸಿಲಿನಿಂದ ಮಣ್ಣು ಶುಷ್ಕವಾಗುವುದನ್ನು ನಿವಾರಿಸುತ್ತವೆ. ಬರ ತಡೆಯುವಲ್ಲಿ ಮರಗಳ ಪಾತ್ರ ದೊಡ್ಡದು.

ಮತ್ತೊಂದು ಮುಖ್ಯ ಸಂಗತಿ–ನಾವು ಬರಕ್ಕೆ ಹೊಂದಿಕೊಂಡು ಬದುಕುವುದನ್ನು ಮರೆತಿದ್ದೇವೆ. ಸುಸ್ಥಿರ ಬೆಳೆ ಪದ್ಧತಿ, ಸಹಜ–ಸರಳ ಜೀವನಶೈಲಿಯಿಂದ ಬರವನ್ನು ಎದುರಿಸಬಹುದು. ದುಬಾರಿ, ವಿಲಾಸಿ ಜೀವನ ಬರವನ್ನು ಆಹ್ವಾನಿಸಿದರೆ, ಪರಿಸರ ಸ್ನೇಹಿ ಬೆಳೆಪದ್ಧತಿ, ಸರಳ ಜೀವನ ಬರವನ್ನು ಎದುರಿಸುವ ಕಲೆಯನ್ನು ಕಲಿಸುತ್ತವೆ. ರಾಗಿ, ನವಣೆ, ಸಜ್ಜೆ, ಆರ್ಕ, ಬೇಳೆ ಮತ್ತು ಎಣ್ಣೆ ಕಾಳುಗಳು ಜನರ ಜೀವನಕ್ಕೆ ಆಧಾರ. ಈ ತೃಣಧಾನ್ಯಗಳನ್ನು ಬೆಳೆಯುವುದರಿಂದ ಅಂತರ್ಜಲ ಹೆಚ್ಚುವುದು, ಆಹಾರಧಾನ್ಯಗಳ ಕೊರತೆಯೂ ಉಂಟಾಗದು. ಈ ಬೆಳೆಗಳು ಜನ–ಜಾನುವಾರು, ಪಶುಪಕ್ಷಿಗಳಿಗೆ ಆಹಾರ ನೀಡುತ್ತವೆ, ಈ ಬೆಳೆ ಪದ್ಧತಿಯಿಂದ ಕಣಜದಲ್ಲಿ ಕಾಳು, ರೊಪ್ಪದಲ್ಲಿ ಮೇವು ಇರುವುದರಿಂದ ಎಂತಹ ಬರವನ್ನೂ ಎದುರಿಸಬಹುದು. ಈ ಶಕ್ತಿ ನಮ್ಮ ಜನರಿಗೆ ಇತ್ತು, ಆದರೆ ಆಧುನಿಕ ವಾಣಿಜ್ಯ ಬೆಳೆಗಳ ಬೆನ್ನು ಬಿದ್ದು ಒಂದು ವರ್ಷ ಮಳೆ ಕಡಿಮೆಯಾದರೂ ನೀರಿನ ಕೊರತೆಯಿಂದ ಹಾಹಾಕಾರ ಉಂಟಾಗುತ್ತಿದೆ. ರೈತರು ಸರಕಾರದ ಸೌಲಭ್ಯಗಳ ಕಡೆಗೆ ಮುಖ ಮಾಡದೇ, ಸುಸ್ಥಿರ ಕೃಷಿಯತ್ತ ಕಣ್ಣು ನೆಟ್ಟರೆ ಮಾತ್ರ ಉಳಿಯಬಲ್ಲರು. ಸರ್ಕಾರ ಎಂದರೆ ನಾವೇ ಅಲ್ಲವೇ? ನಮಗೆ ಶಕ್ತಿಯಿರುವಷ್ಟು ಬರವನ್ನು ನಿಭಾಯಿಸಬಲ್ಲೆವು. ಸರ್ಕಾರ ಕೂಡ ಅಷ್ಟೇ. ಸರ್ಕಾರ ಕೊಡುವ ಪರಿಹಾರ 'ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎಂಬಂತಾಗಿದೆ.

ಕೃಷಿ ವಿಜ್ಞಾನ ಸುಳ್ಳಿನ ಕಂತೆಗಳನ್ನೇ ಜೋಡಿಸಿದೆ. ಇವರ ಯೋಜನೆಗಳು ರೈತರನ್ನು ದುರ್ಬಲಗೊಳಿಸಿವೆ. ದುಬಾರಿ ಬಿತ್ತನೆ ಬೀಜ, ಗೊಬ್ಬರ, ಕ್ರಿಮಿನಾಶಕ, ಕೃಷಿ ಉಪಕರಣ ರೈತರನ್ನು ಸಂಕಷ್ಟಕ್ಕೆ, ಸಾಲದ ಕೂಪಕ್ಕೆ ತಳ್ಳಿವೆ. ಇಕ್ಕಟ್ಟಿನಲ್ಲಿರುವ ರೈತ ಒಂದು ಸಣ್ಣ ಬರವನ್ನೂ ಎದುರಿಸುವ ಶಕ್ತಿಯಿಲ್ಲದೆ ಕಂಗಾಲಾಗಿದ್ದಾನೆ.

ಪ್ರತಿ ಹೊಲದ ನೀರು ಆ ಹೊಲದ ನೀರು; ಗ್ರಾಮದ ನೀರು ಗ್ರಾಮಕ್ಕೆ ಎಂಬುದನ್ನು ಅರ್ಥಮಾಡಿಕೊಂಡು ಮಳೆನೀರನ್ನು ಭೂಮಿಗೆ ಕುಡಿಸುವ ಕೆಲಸ ಸಮರೋಪಾದಿಯಲ್ಲಿ ಆಗಬೇಕು. 'ನಮ್ಮ ಊರು, ನಮ್ಮ ನೀರು' ಎಂಬ ಘೋಷಣೆ ತಕ್ಷಣ ಕಾರ್ಯರೂಪಕ್ಕೆ ಬರಬೇಕು. ನಮ್ಮ ಪೂರ್ವಿಕರಂತೆ ಮಿಶ್ರಬೆಳೆಗೆ ಆದ್ಯತೆ ದೊರೆಯಬೇಕು. ರೈತರು ಆತ್ಮವಿಶ್ವಾಸದಿಂದ ಸ್ವಾವಲಂಬಿಗಳಾಗಬೇಕು. ನಾವು ಬಳಸುವ ಆಹಾರ ನಮ್ಮ ಸುತ್ತಮುತ್ತಲ ಪರಿಸರದಲ್ಲಿ ಬೆಳೆದ ಧಾನ್ಯಗಳಿಂದ ಸಿದ್ಧವಾಗಬೇಕು. ಸರ್ಕಾರ ರೈತರನ್ನು ಮತ ಬ್ಯಾಂಕ್ ಎಂದು ತಿಳಿಯುವುದನ್ನು ನಿಲ್ಲಿಸಿದಾಗ ಮಾತ್ರ ರೈತರು ಸ್ವಾವಲಂಬಿಗಳಾಗುವರು. ರೈತರು, ಕಾರ್ಮಿಕರು ಸ್ವಾವಲಂಬಿಗಳಾಗದಿದ್ದರೆ ಒಂದು ಸಣ್ಣ ಬರ ಬಂದರೂ ಸರ್ಕಾರದ ಸಮೇತ ಎಲ್ಲರೂ ಒಟ್ಟಿಗೆ ಬರದಲ್ಲಿ ಮುಳುಗಿ ನಾಶವಾಗುವರು. ಈ ಅಪಾಯ ದೂರವಿದೆ ಎಂದು ನಿರಾಳರಾಗುವುದು ಅಪಾಯಕ್ಕೆ ಆಹ್ವಾನ ನೀಡಿದಂತೆಯೇ ಸರಿ.

(ನಿರೂಪಣೆ: ಸಿ. **ರಾಮಚಂದ್ರಯ್ಯ**)

ಬರದ ನಾಡಿನಲ್ಲೊಂದು ಸುತ್ತು ಬಂದು...

–ಶಿವಾನಂದ ಕಳವೆ

ಬರಗಾಲ ನಮಗೆ ಹೊಸತಲ್ಲ, ಅದರಲ್ಲಿಯೂ ಹೈದ್ರಾಬಾದ್ ಕರ್ನಾಟಕ, ಉತ್ತರ ಕರ್ನಾಟಕದಲ್ಲಂತೂ ಆಗಾಗ ಕಾಣಿಸಿಕೊಳ್ಳುತ್ತದೆ. ಆದರೆ ಈ ವರ್ಷದ ಬರದ ಪರಿಣಾಮ ಕೇವಲ ಮಳೆ ಕೊರತೆಯಲ್ಲಿ ಮಾತ್ರ ಕಾಣಿಸಿಲ್ಲ. ಬೆಳೆ ಬದಲಾವಣೆ ಪರಿಣಾಮಗಳೂ ಇದರಲ್ಲಿವೆ ಎನ್ನುತ್ತಾರೆ ಲೇಖಕರು.



(ಚಿತ್ರ: ಶಿವಾನಂದ ಕಳವೆ)

ರಾಜ್ಯದಲ್ಲಿ ಜೂನ್ ತಿಂಗಳ ಹೊತ್ತಿಗೆ ಬರದ ಸುಳಿವು ಸಿಕ್ಕಿತು. ಆದರೂ ಹನಿ ನೀರು ಬಿದ್ದು ಮುಂಗಾರಿನ ಬೆಳೆಯಾದರೂ ದೊರೆಯಬಹುದೆಂದು ರೈತರು ಕಾದಿದ್ದರು. ಸರಕಾರ ೧೩೬ಕ್ಕೂ ಹೆಚ್ಚು ತಾಲೂಕುಗಳನ್ನು ಬರ ಪೀಡಿತವೆಂದು ಘೋಷಿಸಿತು. ಕೇಂದ್ರ, ರಾಜ್ಯ ಸರಕಾರದ ನಡುವೆ ಬರಪರಿಹಾರದ ಮಾಧ್ಯಮ ಚರ್ಚೆಗಳು, ಹೇಳಿಕೆಗಳು ಸಾಗಿದವು. ಅಕ್ಟೋಬರ್ ಬಂದರೂ ಶೇಕಡಾ ೪೦–೪೫ರಷ್ಟು ಮಳೆಯೂ ದೊರೆಯಲಿಲ್ಲ. ಮೇವು, ನೀರಿನ ಕೊರತೆ ಶುರುವಾಯ್ತು. ವಿಜಯಪುರ, ಕಲಬುರಗಿಯ ಆಳಂದ ತಾಲೂಕಿನ ಕೆಲವೆಡೆ ಮಳೆಗಾಲದಲ್ಲಿಯೇ ಟ್ಯಾಂಕರ್ ನೀರು ಪೂರೈಕೆ ಶುರುವಾಯ್ತು. ವಾರದಿಂದ ವಾರಕ್ಕೆ ಪರಿಸ್ಥಿತಿ ಬದಲಾಗುತ್ತ ಮಲೆನಾಡು, ಕರಾವಳಿಗೂ ಜಲಕ್ಷಾಮದ ನೋವು ಅನುಭವಕ್ಕೆ ಬಂದಿತು.

ಬರಗಾಲ ರೈತರನ್ನು ಕಾಡಿದಷ್ಟು ಬೇರೆಯವರಿಗೆ ಕಾಡಿಸಿಲ್ಲವೇ? ಸುಮ್ಮನೆ ಒಂದು ಸುತ್ತು ನಮ್ಮ ನಗರಗಳನ್ನು ನೋಡಿದರೆ ಅಲ್ಲಿ ಜಗಮಗಿಸುವ ಬೆಳಕಿನಲ್ಲಿ ವಿದ್ಯುತ್ ಕೊರತೆ ಕಾಣಿಸುವುದಿಲ್ಲ, ಮಾಲ್‌ಗಳ ಹಬ್ಬದಲ್ಲಿ ರೈತರ ಸುಗ್ಗಿ ಮಾಯವಾಗಿದ್ದು ನೆನಪಾಗುವುದಿಲ್ಲ. ಹಲವರಿಗೆ ಬರ ಹೆಚ್ಚೆಂದರೆ ಫೇಸ್‌ಬುಕ್‌ನ ಲೈಕ್, ಶೇರ್‌ಗಳಿಗೆ ಮೀಸಲಾಗಿದೆ. ಅಕ್ಕಿ, ಜೋಳ, ರಾಗಿ, ತರಕಾರಿ ನೀಡುವ ರೈತರ ಭೂಮಿಗೆ ನೀರಿಲ್ಲ, ವಿದ್ಯುತ್ ಸಿಗುತ್ತಿಲ್ಲವೆಂದರೆ ಖರೀದಿಸಿ ಉಣ್ಣುವವರಿಗೆ ಬೆಲೆ ತುಟ್ಟಿಯಾಗಬಹುದು, ತುಟ್ಟಿಭತ್ಯೆ ಸಿಗಬಹುದು. ಮನೆಯೆದುರಿನ ಹುಲ್ಲು ಹಾಸು, ಕಾರಿಗೆ ನೀರು ಹಾಕುವುದರಲ್ಲಿ ವ್ಯತ್ಯಾಸವಾಗಿದೆಯೇ? ಸ್ನಾನದ ನೀರು ಬಳಕೆಗೆ ನಿಯಂತ್ರಣ ಬಂದಿದೆಯೇ? ಕೆಲವು ಮನೆಗಳಲ್ಲಿ ತೊಂದರೆ ಕಾಣಿಸಿರಬಹುದು. ಕುಡಿಯುವ ನೀರಿನ ಜಲಾಶಯ ಬರಿದಾಗಿ ಟ್ಯಾಂಕರ್ ನೀರು ಓಣಿಗೆ ಬಂದಿತು. ಖಾಸಗಿ ನೀರು ಪೂರೈಕೆಯವರು ೮೦೦ ರೂಪಾಯಿಗೆ ಟ್ಯಾಂಕರ್ ನೀರು ನೀಡುತ್ತಿದ್ದವರು ಈಗ ೧೦೦೦, ೧೫೦೦ಕ್ಕೆ ಏರಿಸಿದರು. ಓಹ್! ಬರವೆಂದು ಎಚ್ಚರಾಗುವ ಕಾಲಕ್ಕೆ ಮಳೆ ಸುರಿಯಿತು. ನಿಧಾನಕ್ಕೆ ಮಳೆಗಾಲ ಶುರುವಾಗುತ್ತಿದೆ. ನಗರದ ಜನಕ್ಕಂತೂ ಬಣ್ಣದ ಬದುಕಿನ ಭರಾಟೆಯಲ್ಲಿ ಬರ ಬಹುಬೇಗ ಮರೆತು ಹೋಗಬಹುದು. ನಮ್ಮ ರೈತರು ನಗರದಲ್ಲಿ ಬರವಿಲ್ಲವೆಂದು ಭಾವಿಸಿದ್ದಾರೆ, ಹೊಲ ಮರೆತು ಕೂಲಿಗೆ ಅತ್ತ ಹೊರಟಿದ್ದಾರೆ. ಬೆಂಗಳೂರಿನ ಯಶವಂತಪುರ ರಸ್ತೆಯಲ್ಲಿ ನಿಂತರೆ ಉತ್ತರ ಕರ್ನಾಟಕದ ರೈತರು ನಗರಕ್ಕೆ ಗುಂಪು ಗುಂಪಾಗಿ ವಲಸೆ ಬರುವದು ನಿತ್ಯ ಮುಂಜಾನೆ ಕಾಣಿಸುತ್ತದೆ.

ರಾಜ್ಯದ ಹತ್ತಾರು ತಾಲೂಕುಗಳಲ್ಲಿ ಆಗೊಮ್ಮೆ ಈಗೊಮ್ಮೆ ಕಾಡಿಸುತ್ತಿದ್ದ ಬರ ಈ ವರ್ಷ ಎಲ್ಲೆಡೆಗೂ ಹಬ್ಬಿದೆ. ಮಳೆ ಸುರಿಯದಿದ್ದರೆ ಏನಾಗುತ್ತದೆಂದು ಕೋಟ್ಯಾಂತರ ಜನಕ್ಕೆ ಈಗ ಸ್ವಲ್ಪವಾದರೂ ಅರ್ಥವಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ನೀರಾವರಿ, ಒಣ ಭೂಮಿಯ ರೈತರು ಈ ವರ್ಷದ ಬರವನ್ನು ಎಂದೂ ಮರೆಯಲಾರರು. ಬೆಳೆ ಕೈಕೊಟ್ಟು ದೊಡ್ಡಿಯ ನಾಲ್ಕಾರು ಜಾನುವಾರು ಸಾಕುವುದು ಕಷ್ಟವಾಗಿದೆ. ದನಕರುಗಳನ್ನು ಮನೆಯೆದುರು ನಿಲ್ಲಿಸಿ ಕೃಷಿ ಜೀವನ ದರ್ಶನ ಮಾಡಿಸುತ್ತಿದ್ದ ಕಲಬುರಗಿಯ ಆಳಂದದ ಹಳ್ಳಿಗಳಲ್ಲಂತೂ ಕೊಟ್ಟಿಗೆಗಳು ಬರಿದಾಗಿವೆ. ಹೆಸರು, ತೊಗರಿ ಕಾಳುಗಳನ್ನು ಲಾತೂರ್ ಮಾರುಕಟ್ಟೆಗೆ ಪೂರೈಸುವ ಇಲ್ಲಿನ ಹಳ್ಳಿಗಳು ಮಹಾರಾಷ್ಟ್ರಕ್ಕೆ ದನದ ಮಾಂಸ ಸಾಗಿಸುವ ನೆಲೆಗಳಾಗಿವೆ. ಎಷ್ಟೋ ಕುಟುಂಬಗಳಲ್ಲಿ ನೇಗಿಲು, ರಂಟೆ, ಕುಂಟೆಗಳು ಮಾತ್ರ ಉಳಿದಿವೆ.

ರಾಜ್ಯದ ಕೃಷಿಯ ಸ್ಥಿತಿಗತಿಗಳನ್ನು ಕಳೆದ ನಾಲ್ಕು ವರ್ಷಗಳಿಂದ ಗಮನಿಸುತ್ತಿದ್ದೇನೆ. ಬೆಳೆ ಬದಲಾವಣೆಯ ಸಮೂಹ ಸನ್ನಿ ದೊಡ್ಡ ಪ್ರಮಾಣದಲ್ಲಿ ಕೃಷಿ ವಲಯಕ್ಕೆ ವ್ಯಾಪಿಸಿದೆ. ಇದು ಬರ ಎದುರಿಸುವ ಪಾರಂಪರಿಕ ರೈತ ಶಕ್ತಿಯನ್ನು ಕುಂದಿಸಿದೆ. ಬರದ ಅಡಿಗಲ್ಲನ್ನು ಕಳೆದ ವರ್ಷ ಉತ್ತಮ ಮಳೆ ಸುರಿದಾಗ ನಾಲ್ಕು ಲಕ್ಷ ಅಡಿಕೆ ಸಸಿ ಮಾರಾಟವಾದ ತುಮಕೂರಿನಲ್ಲಿ ಗುರುತಿಸಬಹುದು, ಹೈನುಗಾರಿಕೆ, ಮಾವು, ರೇಷ್ಮೆ ಮರೆಯುತ್ತ ಕ್ಯಾಪ್ಸಿಕಮ್, ಟೊಮೆಟೋ ಓಟಕ್ಕೆ ನಿಂತ ಕೋಲಾರದಲ್ಲಿ ಕಾಣಬಹುದು. ಆರು ತಿಂಗಳು ಬೆಳೆಯುವ ಹೆಸರನ್ನು ಕೈಬಿಟ್ಟು ಸೋಯಾ ಬೆಳೆಯನ್ನು ಪ್ರೀತಿಸಿದ ಬೆಳಗಾವಿ, ಬೀದರ್‌ದ ಕತೆ ನೋಡಬಹುದು. ಕಬ್ಬಿನಲ್ಲಿ ಲಾಭ ಕಂಡು ಮುಗ್ಗರಿಸಿದ ಮರುವರ್ಷ ಬಾಳೆಗೆ ನುಗ್ಗಿ ಕಿಲೋಕ್ಕೆ ಒಂದು ರೂಪಾಯಿಯೂ ಸಿಗದಾಗ ರೈತ ಕಷ್ಟಗಳು ಬರಕ್ಕೆ ಮುನ್ನವೇ ಬಂದಿವೆ. ಗೋವಿನ ಜೋಳ ಬಿತ್ತನೆಯನ್ನು ಕಿತ್ತೂರಿನಿಂದ ಚಳ್ಳಕೆರೆಯವರೆಗೂ ಕಾಣುವ ಸ್ಥಿತಿ ಬಂದಾಗಂತೂ ರೈತರ ಮಾನೋಕಲ್ಚರ್ ನಡಿಗೆ ಭಯ ಹುಟ್ಟಿಸಿದೆ. ನೆಮ್ಮದಿಗಿಂತ ಹಣ ತೋರಿಸುವ ಬೆಳೆಗಳು ಹಲವು ಬಂದವು. ಸುರಿಯುವ ಮಳೆಯಲ್ಲಿ ಬೆಳೆ ವಿನ್ಯಾಸ ರೂಪಿಸಿದ ಪ್ರದೇಶದಲ್ಲಿ ಅಧಿಕ ನೀರಿನ ಅಗತ್ಯ ಕಾಣಿಸಿತು. ಕೊಳವೆ ಬಾವಿ, ಪೈಪ್, ಪಂಪ್‌ಗಳ ಬಳಕೆ ಹೆಚ್ಚುತ್ತ ಅಂತರ್ಜಲ ಕುಸಿತದ ಆಟ ಶುರುವಾಯ್ತು. ಸಮಯಕ್ಕೆ ಸರಿಯಾಗಿ ಮಳೆ ಕೈಕೊಟ್ಟಿತು. ನೀರಾವರಿ ಮೂಲಕ ಆಹಾರ ಧಾನ್ಯ, ತೋಟಗಾರಿಕೆ ಬೆಳೆ ಬೆಳೆಯುವವರು, ಒಣ ಬೇಸಾಯದವರು ಬಳಲಿದರು. ಬೃಹತ್ ನೀರಾವರಿ ಯೋಜನೆ ಬಂದರಷ್ಟೇ ಬದುಕೆಂದು ರೈತರು ಭಾವಿಸಿದರು. ಮಹದಾಯಿ, ಎತ್ತಿನಹೊಳೆಗಳು ಚರ್ಚೆಯ ಮುನ್ನೆಲೆಗೆ ಬಂದು ನಮ್ಮ ಕೆರೆಗಳನ್ನು ಮರೆಯಲು ಕಲಿಸಿದವು.

ವಾಣಿಜ್ಯ ಬೆಳೆಗಳ ಅಬ್ಬರಕ್ಕೆ ಪಾರಂಪರಿಕ 'ಅಕ್ಕಡಿ' ಬೇಸಾಯ ತಂತ್ರಗಳನ್ನು ರೈತರು ಮರೆತರು, ಕಿರು ಧಾನ್ಯಗಳನ್ನು ಕೈಬಿಟ್ಟರು. ಎಕರೆಗೆ ನಾಲ್ಕಾರು ಬೇವು, ಕರಿಜಾಲಿ ಮರ ಬೆಳೆಸಿದ್ದ ಸಿಂಧನೂರು, ಗಂಗಾವತಿ, ರಾಯಚೂರು ಸೀಮೆಯ ರೈತರು ನೀರಾವರಿ ಬಂದ ಬಳಿಕ ಭತ್ತ ಪ್ರೀತಿಸಿದರು. ಮರ ಗಿಡಗಳ ನೆರಳಿನಿಂದ ಬೆಳೆ ಸರಿಯಾಗಿ ದೊರೆಯುವುದಿಲ್ಲವೆಂದು ಕೃಷಿ ಪರಿಸರ ಬದಲಿಸಿದರು. ನಾವು ಬೆಳೆಯುವ ಬೆಳೆಗೆ ನೀರು ಎಷ್ಟು ಬೇಕೆಂದು ಯಾರೂ ಯೋಚಿಸುವುದಿಲ್ಲ. ಕೊಳವೆ ಬಾವಿಯಲ್ಲಿ ನೀರಿದೆಯೆಂದರೆ ತಾಳೆ, ಬಾಳೆ, ಅಡಿಕೆ, ತೆಂಗು ಏನೂ ಬೇಕಾದರೂ ಬೆಳೆಯಲು ಹೊರಡುತ್ತಾರೆ. ನೀರುಳಿಸುವ ಕನಿಷ್ಟ ಕೆಲಸಕ್ಕೆ ಮುಂದಾಗದೇ ದಿನಕ್ಕೆ ಎಕರೆಗೆ ಲಕ್ಷಾಂತರ ಲೀಟರ್ ನೀರು ಬಳಸುವ ಕೃಷಿಗಳು ಈ ಬರದ ನಾಡಿನಲ್ಲಿವೆ. ಸರಕಾರಿ ಕೆರೆಗಳಲ್ಲಿ ಹೂಳು ತುಂಬಿ, ಹಳ್ಳದ ಬದುಕು ಮರಳಿಗೆ ಬಲಿಯಾಗಿ, ಕಾಡು ನೆಡುತೋಪುಗಳ ಪಾಲಾದ ಹೊತ್ತಿನಲ್ಲಿ ಎರಗಿದ ಬರ ಭಾರೀ ಹೊಡೆತ ನೀಡಿದೆ.

ಬರದ ಸ್ಥಿತಿ ಹೇಗಿದೆಯೆಂದು ಅರಿಯಲು ಹೈದ್ರಾಬಾದ್ ಕರ್ನಾಟಕದ ಹೊಲ, ಹಳ್ಳಿ ಸುತ್ತಬೇಕು. ಹಸಿರು ಎಲ್ಲಿಯೂ ಕಣ್ಣಿಗೆ ಬೀಳುವುದಿಲ್ಲ. ಮೇಲ್ಮೈ ನೀರು ನೋಡಲು ಸಿಗುವುದಿಲ್ಲ. ಟ್ಯಾಂಕರ್, ಕೊಳವೆ ಬಾವಿ ಕೊರೆಯುವ ಯಂತ್ರಗಳು, ದೂರದಿಂದ ಮೇವು ತರುವ. ಲಾರಿಗಳಷ್ಟೇ ದಾರಿಯಲ್ಲಿ ಎದುರಾಗುತ್ತವೆ. ಯುವ ತಲೆಮಾರು ಕೆಲಸ ಹುಡುಕಿ ನಗರಕ್ಕೆ ಓಡಿದೆ. ಉಷ್ಣತೆ ೪೫ ಡಿಗ್ರಿಗೆ ಏರಿ ಮನೆಯಲ್ಲಿ ಕುಳಿತಿರಲು ಯಾರಿಗೂ ಸಾಧ್ಯವಿಲ್ಲ. ಊರಿನ ಬೇವಿನ ಮರದಕಟ್ಟೆಯ ಮೇಲೆ ಕಾಲದ ಕತೆ ಹೇಳುತ್ತ ಹಿರಿಯರು ಕುಳಿತಿರುತ್ತಾರೆ. ಒಂದು ಟ್ಯಾಂಕರ್ ನೀರು ಬಂದರೆ ಬಿಂದಿಗೆಗಳನ್ನು ಹಿಡಿದು ಓಡಿ ಬರುವ ಮಕ್ಕಳು, ಮಹಿಳೆಯರಲ್ಲಿ ಬರದ ದಾಹ ಕಾಣಬಹುದು. ಬರ ವೀಕ್ಷಣೆಗೆ ಬೆಳಗಾವಿಯ ಚಿಕ್ಕೋಡಿಯ ಹಳ್ಳಿಯಲ್ಲಿದ್ದೆ. ಇಲ್ಲಿ ರೊಟ್ಟಿಯ ಜೊತೆ ಕಡ್ಲೆಯ

ಗಿಡದ ಸೊಪ್ಪು ಊಟಕ್ಕೆ ಬರುತ್ತದೆ. ಆದರೆ ಆಹಾರದಲ್ಲಿ ತೊಪ್ಪಲು ಕಣ್ಮರೆಯಾಗಿವೆ. ಹೊಲದಲ್ಲಿ ಬೆಳೆಯಿಲ್ಲ. ಬೀದರ್‌ನಲ್ಲಿ ರೊಟ್ಟಿಯ ಜೊತೆ ಕುಸುಬಿ ಎಲೆ ನಾಪತ್ತೆಯಾಗಿದೆ. ಬಿತ್ತಿದ್ದು ಬೆಳೆಯಲಿಲ್ಲ. ಇಂತಹ ಸಣ್ಣ ಬದಲಾವಣೆಗಳು ಇಲ್ಲಿನ ಜನರ ಆರೋಗ್ಯದ ಮೇಲೆ ಎಂಥ ಪರಿಣಾಮ ಮಾಡಬಹುದೆಂದು ಯಾರಿಗೂ ಗೊತ್ತಿಲ್ಲ.

ಜವೆಗೋಧಿಯ ಹೊಲಗಳು, ಬಿಳಿಜೋಳದ ತೆನೆಗಳು ಚಳಿಗೆ ಸರಿಯಾಗಿ ಹೊಲಕ್ಕೆ ಮೆರಗು ನೀಡುತ್ತಿದ್ದವು. ಬೀದರ್‌ದಿಂದ ವಿಜಯಪುರ, ಬಾಗಲಕೋಟೆ ದಾಟಿ ಬೆಳಗಾವಿ ತಲುಪಿದರೂ ತುಂಡು ಹೊಲದಲ್ಲಿ ಜವೆಗೋಧಿ ಕಾಣಿಸುವದಿಲ್ಲ. ನೀರಿನ ಅಭಾವ ಏನೆಲ್ಲ ಮಾಡಬಹುದೆಂದು ಬರ ದರ್ಶನ ಮಾಡಿಸಿದೆ. ಹಬ್ಬ ಜಾತ್ರೆ ಬಂದಾಗ ಟ್ಯಾಂಕರ್ ಚಾಲಕರಲ್ಲಿ ವಿನಂತಿಸಿಕೊಂಡು ಸ್ನಾನ ಮಾಡಲು ಮಹಿಳೆಯರು ನೀರು ಬೇಡುವ ಸ್ಥಿತಿಯನ್ನು ಕಲಬುರಗಿಯಲ್ಲಿ ನೋಡಿದ್ದೇನೆ. ಅವರಿಗೆ ವಾರಕ್ಕೆ ಒಂದು ಸ್ನಾನವೂ ಸಿಗುವುದಿಲ್ಲ. ಬುಟ್ಟಿಯಲ್ಲಿ ನಿಂತು ಸ್ನಾನ ಮಾಡಿ ಆ ನೀರನ್ನು ಬಟ್ಟೆ ತೊಳೆಯಲು ಬಳಸುವದು, ದನಕರುವಿಗೆ ಐದಾರು ಲೀಟರ್ ನೀರನ್ನು ಮಿತಿಯಲ್ಲಿ ಅಳೆದು ಕುಡಿಸಲಾಗುತ್ತದೆ. ಯಾರಲ್ಲಿಯೂ ನೀರಿಲ್ಲ, ಊರಿಗೆ ಊರೇ ದಾಹಕ್ಕೆ ಬಳಲಿದೆ. ಕೋಟಿ ವೆಚ್ಚದ ದೊಡ್ಡ ಟ್ಯಾಂಕು, ಪೈಪ್ ಲೈನ್‌ಗಳು ನೀರು ನೀಡಲು ಸೋತು ಸ್ಮಾರಕವಾಗಿವೆ. ಜನ ಕೆರೆಯ ಪ್ರೀತಿ ತೋರಿಸಿದ್ದಾರೆ, ನಿಧಾನಕ್ಕೆ ಹೊಲದಲ್ಲಿ ಹನಿ ಹಿಡಿಯುವ ಪ್ರಯತ್ನ ಶುರುವಾಗಿದೆ. ಬರದ ನಾಡು ಸುತ್ತಲು ಆರಂಭಿಸಿ ಐದಾರು ತಿಂಗಳಾಗಿದೆ, ಈಗ ಬರ ಬಂದಿದ್ದೂ ಭೂಮಿಗಷ್ಟೇ ಅಲ್ಲ, ನಮ್ಮ ಚಿಂತನೆಗೆಂಬುದು ಅರ್ಥವಾಗಿದೆ. ಹಳ್ಳಿಯ ಹಸಿರನ್ನು ಚೆನ್ನಾಗಿಡಲು ನೆಲಜಲ ಉಳಿಸುವ ರಚನಾತ್ಮಕ ಕಾರ್ಯ ಮಾತ್ರ ನಾಡಿನ ನಾಳೆಯನ್ನು ನೆಮ್ಮದಿಯಲ್ಲಿಡಬಹುದು.



(ಮೂಲತಃ ಕೃಷಿಕರಾಗಿರುವ ಲೇಖಕರು ಶಿರಸಿ ಬಳಿಯ ಕಳವೆಯಲ್ಲಿ ನೆಲೆಸಿದ್ದು ಪರಿಸರ ರಕ್ಷಣೆ, ಪರಿಸರ ಶಿಕ್ಷಣ ಮತ್ತು ಕೃಷಿ ಅಧ್ಯಯನ ಚಟುವಟಿಕೆಗಳಲ್ಲೂ ತೊಡಗಿಕೊಂಡಿದ್ದು ಈ ಕ್ಷೇತ್ರಗಳ ಬಗ್ಗೆ ವ್ಯಾಪಕವಾಗಿ ಬರೆದೂ ಇದ್ದಾರೆ)

೨ನೇ ಪುಟದಿಂದ

ಮುಲ್ಲಾಗಳು, ಮೌಲ್ವಿಗಳಿಗೆ ಬಿಟ್ಟು ಕೊಟ್ಟಿರುವರು. ಈ ಪ್ರವೃತ್ತಿ ಮುಸ್ಲಿಂರನ್ನು ಇತರರಿಂದ ಪ್ರತ್ಯೇಕಿಸುತ್ತಿದೆ ಮತ್ತು ಅನ್ಯಮತೀಯರ ಅಸಹನೆಗೆ ಕಾರಣವಾಗುತ್ತಿದೆ.

ಇದನ್ನು ಹೋಗಲಾಡಿಸುವ ದಿಶೆಯಲ್ಲಿ ಮುಸ್ಲಿಂ ಯುವ ಪೀಳಿಗೆ ಹೊಸತನ ಹೊಸ ವಿಚಾರ ಧಾರೆಗಳಿಗೆ ತೆರೆದುಕೊಳ್ಳುವದು, ದೇವರು ಧರ್ಮಗಳ ಭಾರವನ್ನು ಕಡಿಮೆ ಮಾಡಿಕೊಳ್ಳುವದು ಅವಶ್ಯಕ. ತ್ವರಿತವಾಗಿ ಬದಲಾಗುತ್ತಿರುವ ಭಾರತೀಯ ಸಮಾಜದಲ್ಲಿ ಮುಸ್ಲಿಂರು ಸ್ವಲ್ಪ ಉದಾರವಾದಿಗಳಾದರೆ ಹಿಂದು ಮತೀಯವಾದಿಗಳಿಗೆ "ಕ್ಯಾರೇ" ಅನ್ನುವವರು ಯಾರೂ ಇರುವದಿಲ್ಲ. ಎರಡೂ ಕೋಮಿನ ಉದಾರವಾದಿ ನಿಲುವಿನ ಚಿಂತಕರು ಎಲ್ಲ ಕಡೆ ಒಂದು ವೇದಿಕೆಯನ್ನು ಹುಟ್ಟು ಹಾಕಿ, ದೇವರು ಧರ್ಮಗಳ ತಲೆಭಾರವನ್ನು ಸಾಮಾನ್ಯ ಜನರಿಂದ ಕಡಿಮೆ ಮಾಡಿದರೆ ಪರಸ್ಪರ ದ್ವೇಷಾಸೂಯೆ, ಅಪನಂಬಿಕೆಗಳು ದೂರಾಗಬಹುದು.

ಬುದ್ಧನನ್ನು ಕುರಿತ ಎಲ್ಲ ಬರಹಗಳೂ ಮನನೀಯವಾಗಿದ್ದವು

–ವೆಂಕಟೇಶ ಮಾಚಕನೂರ, ಧಾರವಾಡ

ಮೇ ಸಂಚಿಕೆಯಲ್ಲಿನ ತಮ್ಮ ಸಂಪಾದಕೀಯ, ಅಕಾಡೆಮಿ ಪ್ರಶಸ್ತಿ–ಹಲಸಂಗಿ ಗೆಳೆಯರ ಬಗೆಗಿನ ಮಾತು, ಗೋರೆಯವರನ್ನು ಕುರಿತ ಬರಹ ಮನಸ್ಸಿಗೆ ನಾಟುವಂತಿವೆ. ಹಾಗೇ, ಇಂದಿರಾ ಕೃಷ್ಣಪ್ಪ,, ಶಿವಾಜಿ ಗಣೇಶನ್ ಅವರ ಬರಹಗಳು ಇತಿಹಾಸದತ್ತ ಕಣ್ಣನ್ನು ಹೊರಳಿಸುತ್ತವೆ. ಬುದ್ಧನನ್ನು ಕುರಿತ ವಿವಿಧ ಚಿಂತಕರ ಸಮಕಾಲೀನ ಚಿಂತನೆಗಳು, ಸ್ಮಾರ್ಟ್ ಸಿಟಿಯ ಬಗೆಗಿನ ಮೂಗಿಗೆ ತುಪ್ಪ ಸವರುವ ಮೋದಿಯ ಸ್ಮಾರ್ಟ್‌ತನ ಓದುಗರನ್ನು ಸಮಕಾಲೀನಗೊಳಿಸಬಲ್ಲುದು. ಈ ನೆಲೆಯಲ್ಲಿ ಸಂಚಿಕೆ ಎಂದಿನಂತೆ ತಣ್ಣನೆಯ ಸಂಘರ್ಷವನ್ನು ಉದ್ದೀಪಿಸುತ್ತದೆ.

–ಡಾ. ಕಾ.ವೆಂ. ಶ್ರೀನಿವಾಸಮೂರ್ತಿ, ಬೆಂಗಳೂರು

ಮೇ ಸಂಚಿಕೆಯ 'ಸಮಕಾಲೀನ'ದಲ್ಲಿ ಬುದ್ಧನ ಬಗ್ಗೆ ಮೂಡಿ ಬಂದ ಲೇಖನಗಳು ನಿಜವಾದ ಬುದ್ಧನನ್ನು ನಮ್ಮಲ್ಲಿ ಕಂಡುಕೊಳ್ಳುವ ಪರಿಯನ್ನು ಹೃದಯಂಗವಾಗಿ ನಿರೂಪಿಸಿದೆ. ಆದರೆ ನಿಮ್ಮ ಸಂಪಾದಕೀಯ ಲೇಖನದಲ್ಲಿ ಕೆಲ ಅನುಮಾನಗಳು ನನ್ನನ್ನು ಕಾಡುತ್ತಿವೆ. ಶಂಕರಾಚಾರ್ಯರು ಪ್ರತಿಪಾದಿಸಿದ ತತ್ವಗಳು ಅವರ ನಡೆಯಲ್ಲೇ ಕಾಣಿಸದಿದ್ದುದು ಮತ್ತು ಜಾತಿ ಪದ್ಧತಿಯ ಮೊರೆ ಹೋಗಿದ್ದು, ಅವರ ಜ್ಞಾನದ ಮಿತಿಗಳೇ ಅಲ್ಲವೆ?. ಹಾಗಾಗಿ ಶಂಕರರ ಆಗಮನ ಸಮಾಜದಲ್ಲಿ ಇನ್ನಷ್ಟು ಗೊಂದಲಗಳು ಮತ್ತು ಸಮಸ್ಯೆಯನ್ನು ಸೃಷ್ಟಿ ಮಾಡಿತೆಂದು ಅನಿಸುತ್ತಿದೆ. ಇನ್ನು ಅಂಬೇಡ್ಕರ್ ಅವರು ಶೋಷಿತ ಸಮುದಾಯಗಳಿಗೆ ಬುದ್ಧನ ಆರ್ಯ ಸತ್ಯಗಳನ್ನು ತಿಳಿಸಿ ಸಾಧಿಸಬೇಕಾದದ್ದು ಏನೂ ಇರಲಿಲ್ಲ. ಅದು ರಾಜಕಾರಣವಾದರೂ ಆ ಶೋಷಿತ ಸಮುದಾಯಗಳಿಗೆ ಪರ್ಯಾಯ ಸ್ವೀಕಾರಾರ್ಹ ಧರ್ಮದ ಮೂಲಕ ಜ್ಞಾನ, ಸಮಾನತೆ, ಸಂಘಟನೆ ಶಕ್ತಿಯನ್ನು ತುಂಬುವ ಅಗತ್ಯವಿತ್ತಲ್ಲವೆ?

ಯಾರೂ ಮತಾಂತರ ಹೊಂದಿ ಬೌದ್ಧರಾಗಬೇಕಿಲ್ಲ ಎನ್ನುವ ಮಾತು, ಅಂಬೇಡ್ಕರ್‌ವಾದಿಗಳು ಅಂಬೇಡ್ಕರರ ಚಿತ್ರ ಮತ್ತು ಗುರೂಜಿಯ ಚಿತ್ರದ ಮಧ್ಯ ಬುದ್ಧನ ಚಿತ್ರವನ್ನು ಇಡಿ ಎಂದು ಹೇ ಳುವ ನೈತಿಕ ಸ್ಥೈರ್ಯವನ್ನು ಕಳೆದುಕೊಂಡಿರುವರು ಎಂಬ ನಿಮ್ಮ ಮಾತುಗಳು ಹಾಗೂ ಅಂತಹ ಶ್ರೇಷ್ಠ ಹಿಂದೂವಾಗಿದ್ದ ಗಾಂಧಿಯವರ ಬಗ್ಗೆ ಅಂಬೇಡ್ಕರ್‌ರವರಿಗೆ ಏಕೆ ಅಷ್ಟೊಂದು ಸಿಟ್ಟು ಇತ್ತು ಎಂಬ ಪ್ರಶ್ನೆ ಮನಮಿಡಿಯುವಂತಿದೆ.

ಇನ್ನು ಲಕ್ಷ್ಮೀಶ ತೋಳ್ಪಾಡಿ ಅವರ ಲೇಖನವಂತೂ ಹೊಸ ಅನುಭೂತಿಯನ್ನೇ ಕೊಡುತ್ತದೆ. ಅವರ ಆರ್ಯ ಸತ್ಯಗಳಲ್ಲಿ ಮೊದಲನೇಯದಾದ ಸಂಸಾರದಲ್ಲಿ ದುಃಖವಿದೆ ಎಂಬುದರ ವಿವರಣೆ, ಸಾವಿನ ಪ್ರಜ್ಞೆಯಿಂದ ಉಂಟಾಗುವ ದುಃಖ, ಆ ದುಃಖದಿಂದಲೇ ಮೂಡಿಬರುವ ದುಃಖ ನಿವಾರಣೆಯ ಅಂಶಗಳಾದ ಕರುಣೆ, ಮೈತ್ರಿಗಳು, ಅನುಭವದ ಮಹತ್ವದ ಬಗೆಗಿನ ವಿವರಣೆಗಳು ಮನೋಜ್ಞವಾಗಿವೆ. ನಿಜಕ್ಕೂ ಬುದ್ಧ ಇಡೀ ಜಗತ್ತಿಗೆ ಒಬ್ಬ MASTER.

ಹಾಗೇ ಅಕಾಡೆಮಿ ಪ್ರಶಸ್ತಿಗಳನ್ನು ಕುರಿತ ನಿಮ್ಮ ಟಿಪ್ಪಣಿಗಳು ಸತ್ಯ ನಿಷ್ಠುರವಾಗಿದ್ದು ಅಕಾಡೆಮಿಯು ಎಂತಹ ಅಧೀನ ಸಂಸ್ಥೆಯಾಗಿದೆ ಎಂಬುದಿಲ್ಲಿ ಸಾಬೀತಾಗಿದೆ

–ಬಿ.ವಿ.ಸುರೇಂದ್ರ, ಧಾರವಾಡ

ನನ್ನ ಬದುಕಿನ ಹೀರೋ, ಆದರ್ಶ ಬುದ್ಧ. ಮೇ ಸಂಚಿಕೆಯಲ್ಲಿನ ಬುದ್ಧನನ್ನು ಕುರಿತ ಎಲ್ಲ ಬರಹಗಳೂ ನನಗೆ ಹೊಸ ಬೆಳಕನ್ನು ನೀಡುವಂತಿದ್ದವು. ನಿಮಗೆ ಅಭಿನಂದನೆಗಳು.

–ಸಿ.ಎಂ. ಅಂಗಡಿ, ನೋಯ್ಡಾ (ಉ.ಪ್ರ)

'ಕಳೆದ ಹೋಗಿರುವ ಬುದ್ಧನನ್ನು ಅರಸುತ್ತಾ...' ಎಂಬ ನಿಮ್ಮ ದಿಟ್ಟ ಮತ್ತು ಹೊಸ ಒಳನೋಟಗಳ ಸಂಪಾದಕೀಯ ಬರಹ ಬುದ್ಧ–ಬಸವ–ಅಂಬೇಡ್ಕರ್‌ರ ಹೆಸರುಗಳನ್ನು ಹೇಳಿಕೊಂಡು ಕೂಗಾಡುತ್ತಾ ಸ್ವಾರ್ಥ ರಾಜಕಾರಣ ಮಾಡುತ್ತಿರುವ ವೃತ್ತಿಪರ ಹೋರಾಟಗಾರರ ಕಣ್ಣು ತೆರೆಸಬೇಕು. ಹಾಗೇ ಲಕ್ಷ್ಮೀಶ ತೋಳ್ಪಾಡಿಯವರ 'ಬುದ್ಧನ ಶೂನ್ಯವೂ, ವೈದಿಕರ ಪೂರ್ಣವೂ' ಲೇಖನ ನಿಮ್ಮ ಟಿಪ್ಪಣಿಗಳಿಗೆ ಪೂರಕವಾಗಿದ್ದು ಬೌದ್ಧ ಮತ್ತು ಹಿಂದೂ ಧರ್ಮಗಳ ಸಂಬಂಧವನ್ನು ಕುರಿತ ನಮ್ಮ ಅನೇಕ ತಪ್ಪು ತಿಳುವಳಿಕೆಗಳನ್ನು ನಿವಾರಿಸುವಂತಿದೆ.

– ಬಿ. ಸುದರ್ಶನ ರಾವ್, ದಾವಣಗೆರೆ

ಮೇ ಸಂಚಿಕೆಯಲ್ಲಿನ ಬುದ್ಧ–ಅಂಬೇಡ್ಕರ್–ಶಂಕರರ ಸುತ್ತ ನಡೆದಿರುವ ಚಿಂತನೆ ಬೋಧಪ್ರದವಾಗಿದ್ದು, ಶಂಕರರು ಬೌದ್ಧ ಧರ್ಮವನ್ನು ಭಾರತದಿಂದ ಓಡಿಸಿದರೆಂಬುದು ಕೆಲ ಎಡಪಂಥೀಯ ಇತಿಹಾಸಕಾರರ ದುರುದ್ದೇಶಪೂರ್ವಕ ಹುನ್ನಾರವಾಗಿದೆ. ಹಾಗೆ ನೋಡಿದರೆ ಶಂಕರರು ಬುದ್ಧನನ್ನು ಖಂಡಿಸಿರುವುದು ತುಂಬಾ ಕಡಿಮೆ. ಅವರು ತಮ್ಮ ಪ್ರಧಾನ ಎದುರಾಳಿ ಎಂದು ಗುರುತಿಸುವುದು ವೈದಿಕ ದರ್ಶನವೇ ಆಗಿದ್ದ ಸಾಂಖ್ಯವನ್ನು.

ದಾರ್ಶನಿಕ ದಲಿತವಾದಿಯೂ, ರಾಷ್ಟ್ರೀಯವಾದಿಯೂ, ಸಮಾಜವಾದಿಯೂ ಆಗಿದ್ದ ಬಾಬಾ ಸಾಹೇಬ ಅಂಬೇಡ್ಕರ್ ಜಡ ಸಿದ್ಧಾಂತವಾದಿಯಾಗಿರಲಿಲ್ಲ. ಹಾಗಾಗಿಯೇ ಅವರು ದಲಿತತ್ವದ ವಿರುದ್ಧ ಒಂದು ದೊಡ್ಡ ಹೆಜ್ಜೆಯಾಗಿ ಬೌದ್ಧ ಧರ್ಮಕ್ಕೆ ಮತಾಂತರಗೊಂಡದ್ದು ಒಂದು ಅತ್ಯದ್ಭುತ, ದೂರಗಾಮಿ ಮತ್ತು ಸಂಬುದ್ಧವಾದ ನಿರ್ಧಾರವಾಗಿತ್ತು.

–ಡಾ. ಎಂ. ಪ್ರಭಾಕರ ಜೋಷಿ, ಮಂಗಳೂರು

ಸರ್ಕಾರಿ ಪ್ರಶಸ್ತಿಗಳನ್ನು ಕುರಿತ ನಿಮ್ಮ ಟಿಪ್ಪಣಿಗಳು ಸರಿಯಾಗಿಯೇ ಇವೆ. ಜಾತಿ ಸಮುದಾಯಗಳ ಬೇಡಿಕೆಗಳಿಗನುಸಾರವಾಗಿ ಸ್ಥಾಪಿತವಾಗುತ್ತಿರುವ ಈ ಪ್ರಶಸ್ತಿಗಳು ಸಂಪೂರ್ಣ ರಾಜಕೀಯಗೊಂಡು ಅವಕ್ಕೆ ಇಂದು ಯಾವುದೇ ಬೆಲೆಯಿಲ್ಲದಾಗಿದೆ. ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಖಾಸಗಿ ಸಂಸ್ಥೆಗಳ ಪ್ರಶಸ್ತಿಗಳು ತಂತಮ್ಮ ಜಾತಿ ಬಾಂಧವರಿಗೆ ಹುಡುಕಿ ಹುಡುಕಿ ಪ್ರಶಸ್ತಿ ನೀಡುತ್ತಾ ಅವನ್ನೂ ಹಾಸ್ಯಾಸ್ಪದಗೊಳಿಸಿದ್ದಾರೆ.

–ಎ.ಶಿವಕುಮಾರ್, ಶಿವಮೊಗ್ಗ

ಬರ ನಿರ್ವಹಣೆಗೆ ಬೇಕಿದೆ ಹೊಸ ದೃಷ್ಟಿಕೋನ, ಹೊಸ ಕಾರ್ಯತಂತ್ರ

–ಮಲ್ಲಿಕಾರ್ಜುನ ಹೊಸಪಾಳ್ಯ



ಸಾಮುದಾಯಿಕ ಜಲ ನಿರ್ವಹಣೆಯ ಪ್ರಯತ್ನಗಳ ಫಲವಾಗಿ ಕಳವೆಯಲ್ಲಿ ನಿರ್ಮಾಣಗೊಂಡಿರುವ ಕೆರೆ. (ಚಿತ್ರ: ಮಲ್ಲಿಕಾರ್ಜುನ ಹೊಸಪಾಳ್ಯ)

ಬರಗಾಲ ಎಂಬುದು ಧುತ್ತೆಂದು ಎದುರು ನಿಂತಿರುವ ಅತಿಥಿ ಏನಲ್ಲ. '೭೦ರ ದಶಕದ ಬರ, ಗೋಟಿಗೆಡ್ಡೆ ಬರ' ಮುಂತಾಗಿ ನಿರ್ದಿಷ್ಟವಾಗಿ ಹೆಸರಿಸುವ ಅಗತ್ಯವೂ ಈಗ ಕಾಣುತ್ತಿಲ್ಲ. ಏಕೆಂದರೆ ಕಳೆದ ಒಂದು ದಶಕದಲ್ಲಿ ನಾಲ್ಕಕ್ಕೂ ಹೆಚ್ಚು ಸಲ ಕರ್ನಾಟಕಕ್ಕೆ ಬರ ಎದುರಾಗಿದೆ. ಕರಾವಳಿ ಮತ್ತು ಹಳೆ ಮೈಸೂರು ಭಾಗದ ಒಂದೆರಡು ಜಿಲ್ಲೆಗಳ ಹೊರತಾಗಿ ಉಳಿದೆಲ್ಲಾ ಕಡೆ ಬರ ಹಾಜರಿ ಹಾಕಿದೆ. ಹೈದರಾಬಾದ್ ಕರ್ನಾಟಕದಲ್ಲಿ ಬರ ಕಾಲು ಮುರಿದುಕೊಂಡು ಬಿದ್ದು ಅಲ್ಲಿಯೇ ನೆಲೆಸಿ ಬಹು ಕಾಲವಾಯಿತು. ಮುಂಬೈ ಕರ್ನಾಟಕದಲ್ಲಿ ಅರೆ ಮಲೆನಾಡು ಬಿಟ್ಟರೆ ಉಳಿದೆಡೆ ಬರ ಇದ್ದಿದ್ದೇ. ಇನ್ನು ಬಯಲುಸೀಮೆಯ ಜಿಲ್ಲೆಗಳಲ್ಲಿಯೂ ಅದೇ ಪರಿಸ್ಥಿತಿ.

ಮೊದಲೆಲ್ಲ ಬರ ಬಂದರೆ ಬಡ ಮತ್ತು ರೈತಾಪಿ ವರ್ಗಕ್ಕೆ ಮಾತ್ರ ತೊಂದರೆ ಆಗುತ್ತಿತ್ತು. ಆದರೆ ಈಗ ಬರಗಾಲದ ತೊಂದರೆ ಎಲ್ಲ ವರ್ಗಗಳಿಗೂ ವ್ಯಾಪಿಸಿದೆ. ಕುಡಿಯುವ ನೀರು, ಕೃಷಿ, ಹೈನುಗಾರಿಕೆ, ಕೈಗಾರಿಕೆ, ಆರೋಗ್ಯ, ಕಟ್ಟಡ ನಿರ್ಮಾಣ ಮುಂತಾದ ಎಲ್ಲ ವಲಯಗಳಿಗೂ ನೀರಿನ ಅಭಾವ ಎದುರಾಗಿದೆ. ಹಾಗಾಗಿ ಬರ ನಿರ್ವಹಣೆಯನ್ನು ಹೊಸ ದೃಷ್ಟಿಕೋನದಿಂದ ನೋಡುವ ಹಾಗೂ ಹೊಸ ಕಾರ್ಯತಂತ್ರ ರೂಪಿಸುವ ತುರ್ತು ಅಗತ್ಯವಿದೆ.

ನಬಾರ್ಡ್ ಸಿದ್ಧಪಡಿಸಿರುವ 'ರಾಜ್ಯ ದೂರದೃಷ್ಟಿ ಪತ್ರ ೨೦೧೪-೧೫' ರಲ್ಲಿ ಪ್ರಸ್ತಾಪಿಸಿರುವಂತೆ ರಾಜ್ಯದ ಶೇ ೬೩ರಿಂದ ೭೨ರಷ್ಟು ಪ್ರದೇಶ ಬರಪೀಡಿತವಾಗಿದೆ. ಕಳೆದ ವರ್ಷ (೨೦೧೫) ಒಂದರಲ್ಲಿಯೇ ಸಾವಿರಕ್ಕೂ ಅಧಿಕ ರೈತರು ಆತ್ಮಹತ್ಯೆ ಮಾಡಿಕೊಂಡ ಉದಾಹರಣೆ ನಮ್ಮ ಮುಂದಿದೆ. ಅದಕ್ಕೆ ಬೇರೆ ಕಾರಣಗಳಿದ್ದರೂ ಸಮಸ್ಯೆ ಬಿಗಡಾಯಿಸಿರುವುದಂತೂ ನಿಜ.

ಭಾರತವು ವಿಶ್ವದಲ್ಲೇ ಅತ್ಯಂತ ಹೆಚ್ಚು ಅಂತರ್ಜಲ ಬಳಕೆ ಮಾಡುವ ರಾಷ್ಟ್ರ. ಅಮೆರಿಕಾ ಹಾಗೂ ಚೀನಾಗಳಿಗಿಂತ ಹೆಚ್ಚು ಅಂತರ್ಜಲವನ್ನು ನಾವು ಹೊರತೆಗೆಯುತ್ತಿದ್ದೇವೆ. ಅದೇ ಹಾದಿಯಲ್ಲಿ ಕರ್ನಾಟಕವೂ ಸಾಗುತ್ತಿದೆ. ನ್ಯಾಯಯುತ ಅಂತರ್ಜಲ ಬಳಕೆಗೆ ಸೂಕ್ತ ಕಾನೂನುಗಳೇ ನಮ್ಮಲ್ಲಿಲ್ಲ. ಇದ್ದರೂ ಅವುಗಳ ಪಾಲನೆ ಬಹುತೇಕ ಶೂನ್ಯ. ಹಣವಿದ್ದವರು ಎಷ್ಟು ಆಳಕ್ಕೆ ಬೇಕಾದರೂ ಕೊಳವೆಬಾವಿ ಕೊರೆದು ನೀರೆತ್ತಬಹುದು. ಸಂಖ್ಯೆಗೂ ಮಿತಿಯಿಲ್ಲ.

ಅಂತರ್ಜಲದ್ದು ಈ ಸ್ಥಿತಿಯಾದರೆ ಆಕಾಶದಿಂದ ಬೀಳುವ ಮಳೆಯ ಬಗೆಗಂತೂ ನಮ್ಮದು ದಿವ್ಯ ನಿರ್ಲಕ್ಷ್ಯ. ನಮ್ಮ ರಾಜಕಾರಣಿಗಳ ಹಾಗೂ ನೀತಿನಿರೂಪಕರ ಗಮನವೆಲ್ಲಾ ನದಿ ತಿರುವಿನ ಕಡೆಗೇ ಇದೆ. ಚುನಾವಣಾ ಪ್ರಣಾಳಿಕೆಗಳಲ್ಲಿ, ಭಾಷಣಗಳಲ್ಲಿ ಅದಕ್ಕೇ ಹೆಚ್ಚಿನ ಒತ್ತು. ಆದರೆ ಮಹಾನಗರ, ನಗರ ಹಾಗೂ ಪಟ್ಟಣಗಳಲ್ಲಿ ಛಾವಣಿ ನೀರು ಸಂಗ್ರಹಕ್ಕೆ ಅಪಾರ ಅವಕಾಶವಿದೆ. ಗ್ರಾಮೀಣ ಪ್ರದೇಶಗಳಲ್ಲಿ ಮಣ್ಣಿನಲ್ಲಿ ಇಂಗಿಸುವ ಮೂಲಕ ಅಂತರ್ಜಲ ಮರುಪೂರಣ ಮಾಡಬಹುದಾಗಿದೆ. ಆದರೆ ಆ ನಿಟ್ಟಿನಲ್ಲಿ ನಮ್ಮ ಗಮನವಿಲ್ಲ. ಬೆಂಗಳೂರಿನಲ್ಲಿ ಹೊಸದಾಗಿ ಮನೆಕಟ್ಟುವವರು ಕಡ್ಡಾಯವಾಗಿ ಛಾವಣಿ ನೀರು ಸಂಗ್ರಹಿಸಬೇಕೆಂಬ ನಿಯಮವಿದೆ, ಆದರೆ ಅನುಷ್ಠಾನ ನಗಣ್ಯ. ಜನರಲ್ಲಿ ಅರಿವಿನ ಕೊರತೆಗಿಂತಲೂ ನಿರ್ಲಕ್ಷ್ಯವೇ ಹೆಚ್ಚಾಗಿದೆ. ನೀರು ಕೊಡುವುದು ಸರ್ಕಾರದ ಕೆಲಸ ಎಂಬುದು ಎಲ್ಲರ ಮನಸ್ಸಿನಲ್ಲಿದೆ.

ಹಳ್ಳಿಗಳಲ್ಲೂ ಇದೇ ಪರಿಸ್ಥಿತಿ. ನೆಲಕ್ಕೆ ನೀರಿಂಗಿಸುವವರು ಒಬ್ಬರಾದರೆ ತೆಗೆಯುವವರು ಹತ್ತು ಜನ. ಬ್ಯಾಂಕಿನಲ್ಲಿ ಹಣವನ್ನೇ ಉಳಿಸದೆ ವಿತ್ ಡ್ರಾ ಮಾಡುವ ದುರಾಸೆ.

ನಮ್ಮಲ್ಲಿ ಅತಿ ಹೆಚ್ಚು ನೀರು ಬಳಸಲ್ಪಡುತ್ತಿರುವುದು ಕೃಷಿಗಾಗಿ. ಅಲ್ಲಿಯೂ ನಿರ್ವಹಣೆ ಮತ್ತು ಸಮರ್ಪಕ ನೀತಿಗಳ ಕೊರತೆ ಎದ್ದು ಕಾಣುತ್ತದೆ. ಏಕೆಂದರೆ ಕೃಷಿ ಅಭಿವೃದ್ಧಿಗಾಗಿ ಇರುವ ಹಲವು ಇಲಾಖೆಗಳಲ್ಲಿಯೇ ಪರಸ್ಪರ ವೈರುಧ್ಯ ಇಟ್ಟಾಡುತ್ತಿದೆ. ಉದಾಹರಣೆಗೆ ಕೃಷಿ ಇಲಾಖೆಯ ಒಂದು ಅಂಗ ರಸಗೊಬ್ಬರ, ಕೀಟನಾಶಕ, ಸುಧಾರಿತ ಬಿತ್ತನೆ ಬೀಜಗಳನ್ನು ಬಳಸಲು ಹೇಳಿದರೆ, ಅದೇ ಇಲಾಖೆಯ ಮತ್ತೊಂದು ಅಂಗ ಸಾವಯವ ಕೃಷಿ ಪ್ರಚಾರ ಮಾಡುತ್ತದೆ. ಕೃಷಿ ವಿಜ್ಞಾನ ಕೇಂದ್ರಗಳು ತರಕಾರಿ ಬೆಳೆಯಲು ಪ್ರೇರೇಪಿಸಿದರೆ, ತೋಟಗಾರಿಕೆ ಇಲಾಖೆ ದಾಳಿಂಬೆ, ಮಾವು, ಪಪ್ಪಾಯಗಳಿಗೆ ಪ್ರೋತ್ಸಾಹಿಸುತ್ತದೆ. ಒಂದು ಸಂಸ್ಥೆ ಭತ್ತದ ಗದ್ದೆಗಳ ಉಳಿವಿಗೆ ಎಚ್ಚರಿಸಿದರೆ ಮತೊಂದು ಅದೇ ಗದ್ದೆಗಳಲ್ಲಿ ಬಾಳೆ ಹಾಕಿದರೆ ಉತ್ತಮ ಲಾಭ ಎನ್ನುತ್ತದೆ. ಕೃಷಿ ವಿಶ್ವವಿದ್ಯಾಲಯಗಳು ಏಕಬೆಳೆ ಅಳವಡಿಕೆಯಿಂದ ಆಹಾರೋತ್ಪಾದನೆ ಹೆಚ್ಚಿಸಬಹುದು ಎನ್ನುತ್ತವೆ. ಪ್ರಗತಿಪರ ಕೃಷಿಕರು ಮಿಶ್ರಬೆಳೆಯೇ ಪರಿಹಾರ ಎನ್ನುತ್ತಾರೆ. ಒಟ್ಟಾರೆ ಗೊಂದಲ.

ಒಂದೆಡೆ ಸೂಕ್ತ ನೀತಿಗಳ ಕೊರತೆ, ಮತ್ತೊಂದೆಡೆ ಈ ವೈರುಧ್ಯಮಯ ಮಾಹಿತಿಗಳ ಮಹಾಪೂರ. ಈ ಯಾವ ಇಲಾಖೆಗಳೂ ಇಲ್ಲದ ಕಾಲದಲ್ಲಿ ನಮ್ಮ ರೈತರು ಆಯಾ ಪ್ರದೇಶದ ಮಳೆ ಪ್ರಮಾಣಕ್ಕನುಗುಣವಾಗಿ ಬೆಳೆ ಹಾಕಿಕೊಳ್ಳುತ್ತಿದ್ದರು. ಸಾವಿರ ಮಿಲಿಮೀಟರ್ ಮಳೆ ಬೀಳುವೆಡೆ ಅಡಿಕೆ ಇತ್ತು, ಮುನ್ನೂರು ಮಿಲಿಮೀಟರ್ ಬೀಳುವೆಡೆ ರಾಗಿ ಇತ್ತು. ಈಗ ಉಲ್ಟಾಪಲ್ಟಾ. ಭೀಕರ ನೀರಿನ ಕೊರತೆ ಎದುರಿಸುತ್ತಿರುವ ಬೆಳಗಾವಿ, ಬೀದರ್ ಭಾಗಗಳಲ್ಲಿ ಶೇ ೯೦ರಷ್ಟು ಅಂತರ್ಜಲ ಕಬ್ಬಿನ ಗದ್ದೆಗಳ ಪಾಲಾಗುತ್ತಿದೆ. ೬೦೦ ಮಿ.ಮೀ. ಮಳೆಯಾಗುವ ತುಮಕೂರು, ಚಿತ್ರದುರ್ಗಗಳಲ್ಲೂ ಅಡಿಕೆ ತೋಟಗಳು ಹಬ್ಬುತ್ತಿವೆ. ಇದಕ್ಕೆ ಸ್ವಯಂ ನಿಯಂತ್ರಣವೂ ಇಲ್ಲ, ಕಾನೂನಿನ ನಿಯಂತ್ರಣವೂ ಇಲ್ಲವಾಗಿದೆ.

ಬರಗಾಲ ನಿಸರ್ಗದ ಕೊಡುಗೆ, ನೈಸರ್ಗಿಕ ಪ್ರಕೋಪ, ಭೂ ತಾಯಿಯ ಮುನಿಸು ಎಂದೆಲ್ಲಾ ಹೇಳುವುದುಂಟು. ೬೦-೭೦ರ ದಶಕಕ್ಕೆ ಈ ಮಾತು ಸರಿ. ಆದರೆ ಕಳೆದ ಒಂದು ದಶಕದ ಬರ ಮಾತ್ರ ಸಂಪೂರ್ಣ ಮಾನವ ನಿರ್ಮಿತ. ಅತಿವೇಗದ ಅಭಿವೃದ್ಧಿ, ಐಶಾರಾಮಿ ಜೀವನಶೈಲಿಯ ಪರಿಣಾಮ. ಇಷ್ಟೂ ದಶಕಗಳಲ್ಲಿ ಅಳವಡಿಸಿಕೊಂಡ ಅವೈಜ್ಞಾನಿಕ ನೀತಿಗಳ ಪ್ರತಿಫಲ ಇದು.

ಉದಾಹರಣೆಗೆ ೧೯೭೦ರಲ್ಲಿ ಆರಂಭವಾದ ಬರ ಪೀಡಿತ ಪ್ರದೇಶ ಅಭಿವೃದ್ಧಿ ಯೋಜನೆ *(ಡಿಪಿಎಪಿ)* ಯಿಂದ ಮೊದಲುಗೊಂಡು ಈಗಿನ *ನರೇಗಾ* ಯೋಜನೆಗಳವರೆಗೆ ಎಲ್ಲವೂ ಬರಪರಿಹಾರ ಕಾಮಗಾರಿಗಳಾಗಿ ವಿನ್ಯಾಸಗೊಂಡವುಗಳೇ ಹೊರತು ಬರ ನಿರೋಧಕ ಕಾರ್ಯಕ್ರಮಗಳಲ್ಲ. ಇದಕ್ಕೆ ಪ್ರಮುಖ ಕಾರಣ ನಮ್ಮ ಸರ್ಕಾರಗಳು ಬರಗಾಲ ವಿಪರೀತಕ್ಕೆ ಹೋದಾಗ ಮಾತ್ರವೇ ಅದಕ್ಕೆ ಪ್ರತಿಕ್ರಿಯಿಸುತ್ತಿರುವುದು. ಆ ತಕ್ಷಣದ ಪ್ರತಿಕ್ರಿಯೆಯಲ್ಲಿ ಗೋಶಾಲೆ ತೆರೆಯುವುದು, ಮೇವು ಪೂರೈಕೆ, ಟ್ಯಾಂಕರ್ ಹಾಗೂ ರೈಲುಗಳ ಮೂಲಕ ನೀರು ಪೂರೈಕೆ, ಗಂಜಿ ಕೇಂದ್ರ ಸ್ಥಾಪನೆ, ಜನರಿಗೆ ಕೂಲಿಗಾಗಿ ಕಾಳು ಮುಂತಾದ ಚಟುವಟಿಕೆಗಳನ್ನಷ್ಟೇ ಮಾಡಲು ಸಾಧ್ಯ. ಅದನ್ನು ಮಾಡಿ ಮುಗಿಸುತ್ತವೆ. ಮಳೆಗಾಲ ಪ್ರಾರಂಭವಾಗುತ್ತಿದ್ದಂತೆ ಇವೆಲ್ಲಾ ಬಂದ್.

ಮತ್ತೊಂದು ಗಮನಾರ್ಹ ವಿಷಯವೆಂದರೆ, ಈ ಸಮಯದಲ್ಲಿ ಕೈಗೊಳ್ಳುವ ಕಾಮಗಾರಿಗಳು ಜನರಿಗೆ ಉದ್ಯೋಗ ನೀಡುವ ನಿಟ್ಟಿನಲ್ಲಿ ಅನುಷ್ಠಾನಗೊಳ್ಳುತ್ತವೆಯೇ ವಿನಃ ಮಣ್ಣು ನೀರು ಸಂರಕ್ಷಣೆಯ ದೂರಾಲೋಚನೆ ಇರುವುದಿಲ್ಲ. ೨೦೦೬ರಿಂದ

೨೦೧೬ರವರೆಗೆ ಅನುಷ್ಠಾನಗೊಂಡ ಉದ್ಯೋಗ ಖಾತ್ರಿ ಯೋಜನೆಯಡಿ ದೇಶಾದ್ಯಂತ ೧.೨೩ ಕೋಟಿ ನೀರು ಹಿಡಿದಿಡುವ ಇಂಗುಗುಂಡಿ, ಒಡ್ಡು ಇತ್ಯಾದಿ ರಚನೆಗಳನ್ನು ನಿರ್ಮಿಸಿರುವುದಾಗಿ ಅಂಕಿ-ಅಂಶಗಳು ಹೇಳುತ್ತವೆ. ಅಂದರೆ ಪ್ರತಿಹಳ್ಳಿಗೆ ಸರಾಸರಿ ೨೧ ಆದಂತಾಯಿತು. ಮಳೆ ಬಂದಾಗ ಇವುಗಳಲ್ಲಿ ಅಪಾರ ಪ್ರಮಾಣದ ಮಳೆ ನೀರು ಇಂಗಬೇಕಿತ್ತಲ್ಲವೇ? ಅಂತರ್ಜಲ ಮರುಪೂರಣ ಆಗಬೇಕಿತ್ತಲ್ಲವೇ? ಆದರೆ ವಾಸ್ತವಾಗಿ ಹಾಗಾಗಿಲ್ಲ. ಏಕೆಂದರೆ ಈ ರಚನೆಗಳು ಜನರಿಗೆ ಏನೋ ಒಂದು ಉದ್ಯೋಗ ತೋರಿಸುವ ನೆಪಮಾತ್ರ ಯೋಜನೆಗಳಾಗಿವೆಯೇ ಹೊರತು ನೀರು ಇಂಗಿಸುವ ಉದ್ದೇಶ ಇಲ್ಲ. ನೀತಿನಿರೂಪಣೆಯ ಬಹುದೊಡ್ಡ ಸೋಲು ಇದು. ಯೋಜನಾ ವಿನ್ಯಾಸದಲ್ಲಿಯೇ ಇರುವ ಲೋಪ

ದಾಖಲೆಯ ಪ್ರಕಾರ ನಮ್ಮ ರಾಜ್ಯದಲ್ಲಿದ್ದ ಸುಮಾರು ೩೬೦೦೦ ಜೀವಂತ ಕೆರೆಗಳ ಪೈಕಿ ಬಹಳಷ್ಟು ಈಗ ಪತ್ತೆಯೇ ಇಲ್ಲವಾಗಿವೆ. ಎರಡು ದಶಕಗಳ ಹಿಂದೆ ನಮ್ಮ ರಾಜ್ಯದ ಕೆರೆಗಳಿಂದ ೬ ಲಕ್ಷ ಹೆಕ್ಟೇರ್ ಭೂಮಿಗೆ ನೀರು ಲಭಿಸುತ್ತಿತ್ತು. ಆದರೆ ಇಂದು ಆ ಪ್ರಮಾಣ ಕೇವಲ ಎರಡು ಲಕ್ಷಕ್ಕಿಳಿದಿದೆ. ಇದಕ್ಕೆ ಕಾರಣ ಇರುವ ಕೆರೆಗಳೂ ಸಹ ನೀರಿಲ್ಲದೆ ಒಣಗಿವೆ, ಒತ್ತುವರಿಯಾಗಿವೆ, ಜಲಾನಯನ ಪ್ರದೇಶದ ಹಳ್ಳಗಳು ಈಗ ಮರಳು ಲಾಬಿಯ ಲೂಟಿ ತಾಣಗಳಾಗಿವೆತಿ ಇದೇ ರೀತಿ ಸಾವಿರಾರು ಸಂಖ್ಯೆಯಲ್ಲಿದ್ದ ಕಲ್ಯಾಣಿ, ತೆರೆದ ಬಾವಿ, ತಲಪರಿಗೆ, ಚಿಲುಮೆ ಮುಂತಾದವೂ ಒಣಗಿ ನಿಂತಿವೆ.. ಇವುಗಳ ನಿರ್ವಹಣೆಯು ಸಮುದಾಯದ ಕೈಯಿಂದ ಸರ್ಕಾರದ ಕೈಗೆ ಹೋಗಿರುವುದೇ ಇದಕ್ಕೆ ಕಾರಣ. ಹಿಂದಿನ ಬರಗಾಲಗಳಲ್ಲೆಲ್ಲಾ ನಮ್ಮನ್ನು ಪೊರೆದಿದ್ದು ಈ ಸಾಂಪ್ರದಾಯಿಕ ಸಾಮುದಾಯಿಕ ಜಲನಿರ್ವಹಣೆಯೇ.

೧೯೬೦ರಿಂದ ೯೦ರವರೆಗೆ ಬಂದ ಬರಗಾಲಗಳು ಬಡ ಭಾರತವನ್ನು ಅಪ್ಪಳಿಸಿದ್ದವು, ಆದರೆ ಈಗ ಸ್ಥಿರ ಆರ್ಥಿಕತೆಯುಳ್ಳ, ಉತ್ಕೃಷ್ಟ ಮಾನವ ಸಂಪನ್ಮೂಲ ಉಳ್ಳ, ಮತ್ತು ಅತಿವೃಷ್ಟಿ ಅನಾವೃಷ್ಟಿಗಳ ಮುನ್ಸೂಚನೆ ಸಾಕಷ್ಟು ಮುಂಚೆ ಲಭ್ಯವಾಗುವ ಕಾಲವಿದು. ಹೀಗಿದ್ದರೂ ನಮ್ಮ ಬರಗಾಲ ನಿರ್ವಹಣೆ ಹಾಸ್ಯಾಸ್ಪದವಾಗಿದೆ. ನೀರಿನ ಕೊರತೆಯಿಂದ ಅಥವಾ ನೀರಿನ ಕೊರತೆಯಿಂದ ಬರಗಾಲ ವಿಪರೀತಕ್ಕೆ ಹೋಗಿಲ್ಲ, ಕೊರತೆ ಇರುವುದು ಸೂಕ್ತ ಯೋಜನೆ ಹಾಗೂ ಮುಂದಾಲೋಚನೆಯಲ್ಲಿ. ಉದಾಹರಣೆಗೆ ನಮ್ಮಲ್ಲಿ ಒಟ್ಟು ೭ ನದಿ ಜಲಾನಯನ ಪ್ರದೇಶಗಳಿವೆ, ಕೃಷ್ಣ, ಕಾವೇರಿ, ಗೋದಾವರಿ, ಪಾಲಾರ್, ದಕ್ಷಿಣ ಮತ್ತು ಉತ್ತರ ಪೆನ್ನಾರ್ ಹಾಗೂ ಪಶ್ಚಿಮಕ್ಕೆ ಹರಿಯುವ ನದಿಗಳು. ಇವೆಲ್ಲವುಗಳಿಂದ ೩೪೭೫.೨ ಟಿ.ಎಂ.ಸಿ. ನೀರು ನಮ್ಮ ಪಾಲಿಗೆ ದೊರಕುತ್ತದೆ, ಇದರಲ್ಲಿ ನಾವು ವಾಸ್ತವವಾಗಿ ಬಳಸಿಕೊಂಡಿರುವ ಪಾಲು ೧೬೯೦.೩೦ ಟಿ.ಎಂ.ಸಿ. ಮಾತ್ರ.. ನಾವು ಎಲ್ಲಿ ತಪ್ಪಿದ್ದೇವೆ ಎಂದು ಇಲ್ಲಿ ಸ್ಪಷ್ಟ..

ಅಂತರ್ಜಲ, ಮಳೆ ನೀರು, ನದಿಗಳು ಹಾಗೂ ಅಣೆಕಟ್ಟುಗಳ ನೀರು ನಿರ್ವಹಣೆಗೆ ಒಂದು ಸಮಗ್ರ ನೀತಿಯೇ ನಮ್ಮಲ್ಲಿಲ್ಲ ಎಂಬುದು ಇದರಿಂದ ತಿಳಿಯುತ್ತದೆ. ಹಾಗಂತ ಹಣದ ಕೊರತೆ ಇಲ್ಲ. ನೂರಾರು ಕೋಟಿಯನ್ನು ಬಜೆಟ್ ನಲ್ಲಿ ಮೀಸಲಿಡಲಾಗುತ್ತಿದೆ. ಬೃಹತ್ ಅಣೆಕಟ್ಟುಗಳ ನಿರ್ಮಾಣಕ್ಕೆಂದು ನಡೆಸುವ ಸಮೀಕ್ಷೆಗಳಿಗೇ ಹತ್ತಾರು ಕೋಟಿ ಖರ್ಚಾಗುತ್ತಿದೆ.

ನೀರಿನ ನಿರ್ವಹಣೆಯಲ್ಲಿ ನಾವು ಮೊದಲಿಗೆ ಮಾಡಬೇಕಿರುವುದು ನಿರ್ದಾಕ್ಷಿಣ್ಯವಾಗಿ ನೀರಿನ ದುರ್ಬಳಕೆಯನ್ನು ತಡೆಯುವುದು. ನೀರಿನ ಸೋರಿಕೆಗೆ ಕಡಿವಾಣ ಹಾಕುವುದು. ಮಿತ ಬಳಕೆ ಮತ್ತು ಮರುಬಳಕೆಯನ್ನು ಕಡ್ಡಾಯವಾಗಿ ಜಾರಿ ಮಾಡುವುದು. ಎರಡನೆಯದಾಗಿ ಬೀಳುವ ಪ್ರತಿ ಹನಿ ಮಳೆ ನೀರನ್ನೂ ಸಹ ನೆಲದಲ್ಲಿ ಇಂಗಿಸಬೇಕು.

ನಿರಂತರ ಆಲೋಚನೆ ಹಾಗೂ ಕಾರ್ಯತತ್ಪರತೆಯಿಂದ ಮಾತ್ರ ಬರ ನಿರಂತರವಾಗುವುದನ್ನು ತಪ್ಪಿಸಬಹುದು. ಇದನ್ನು ವಿಷದೀಕರಿಸಲು ನಾನು ಈ ಕೆಳಗೆ ಕೆಲವು ಜೀವಂತ ಉದಾಹರಣೆಗಳನ್ನು ನೀಡುತ್ತಿರುವೆ:

ಕುಣಿಗಲ್ ತಾಲ್ಲೂಕು ಗುಳ್ಳಹಳ್ಳಿಯ ಶಂಕರ್ ೨೪ ವರ್ಷಗಳ ಹಿಂದೆ ಕೊರೆಸಿದ ೪೦೦ ಅಡಿ ಆಳದ ಕೊಳವೆಬಾವಿ ಈಗಲೂ ಸುಸ್ಥಿತಿಯಲ್ಲಿದೆ. ಸುತ್ತಮುತ್ತಲ ರೈತರು ಒಂದರ ಮೇಲೊಂದು ಕೊಳವೆಬಾವಿ ಕೊರೆಸಿ ನೀರು ಸಿಗದೆ ಹತಾಶರಾಗಿರುವಾಗ ಇವರಿಗೆ ಇದು ಹೇಗೆ ಸಾಧ್ಯವಾಯಿತು? ಹೇಗೆಂದರೆ ಇವರ ಕೊಳವೆಬಾವಿಗೆ ಹತ್ತಿರದಲ್ಲೇ ಒಂದು ತೊರೆ ಹರಿಯುತ್ತದೆ. ಅದರ ಸ್ವಲ್ಪ ನೀರನ್ನು ತೆರೆದಬಾವಿಗೆ ತುಂಬಿಸುತ್ತಾರೆ. ಮಳೆಗಾಲದಲ್ಲಿ ಹಲವು ಬಾರಿ ಬಾವಿ ತುಂಬಿ ಅಂತರ್ಜಲ ಮರುಪೂರಣಗೊಳಿಸುತ್ತದೆ. ಕೊಳವೆಬಾವಿಗೆ ಈ ಅಂತರ್ಜಲವೇ ಆಧಾರ. "ತುಪ್ಪದಂತೆ ನೀರು ಬಳಸ್ತಾ ಇದ್ದೀವಿ, ಹಂಗಾಗಿ ಇಷ್ಟ್ ವರ್ಷ ಆದ್ರೂ ಇನ್ನೊಂದ್ ಕೊಳವೆಬಾವಿ ಹಾಕ್ಸೋ ಛಾನ್ಸೇ ಬರ್ಲಿಲ್ಲ" ಶಂಕರ್ ನುಡಿಯುತ್ತಾರೆ.

ಶಂಕರ್‌ಗೆ ಇರುವ ಅವಕಾಶ ನಮ್ಮ ಬಹುತೇಕ ರೈತರಿಗೂ ಇರುತ್ತದೆ. ಉಪಯೋಗಿಸಿಕೊಳ್ಳಬೇಕಷ್ಟೇ.


ಇನ್ನೊಂದು ಉದಾಹರಣೆ ಎಂದರೆ, ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿಗೆ ಹೇಮಾವತಿ ನದಿ ನೀರನ್ನು ಕಾಲುವೆಗಳ ಮೂಲಕ ಪೂರೈಸುವ ಯೋಜನೆಯನ್ನು ಆರಂಭದ ಒಂದೆರಡು ವರ್ಷಗಳ ನಂತರ ಬದಲಾಯಿಸಿ ಕೆರೆಗಳಿಗೆ ತುಂಬಿಸಲಾಗುತ್ತಿದೆ. ಪರಿಣಾಮ ತಾಲ್ಲೂಕಿನ ಬಹುತೇಕ ಭಾಗದ ಅಂತರ್ಜಲ ಮಟ್ಟ ಸುಧಾರಿಸಿದ್ದು ಕೆರೆಗಳೂ ಉಳಿದಿವೆ. ಜನ, ಪಶುಪಕ್ಷಿ ಪ್ರಾಣಿಗಳ ದಾಹವನ್ನು ಹಿಂಗಿಸಿವೆ.

೨೦೦೪ರಿಂದ ೨೦೧೨ರವರೆಗೂ ರಾಜ್ಯದಲ್ಲಿ ಕೆರೆ ಬಳಕೆದಾರರ ಸಂಘಗಳ ಮೂಲಕವೇ ಸಮಗ್ರವಾಗಿ ಕೆರೆ ಅಭಿವೃದ್ಧಿಪಡಿಸುವ ಕೆರೆ ನಿರ್ವಹಣೆ ಯೋಜನೆ ಜಾರಿಯಲ್ಲಿತ್ತು. ಇದರಡಿ ೬೦೦೦ ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿತ್ತು. ಹಲವು ಅಡೆತಡೆಗಳ ಹೊರತಾಗಿಯೂ ಇದು ಪರಿಣಾಮಕಾರಿಯಾಗಿತ್ತು ಎಂಬುದು ಆರು ವರ್ಷ ಅಲ್ಲಿ ಕೆಲಸ ಮಾಡಿದ ನನ್ನ ಅನುಭವ. ಈ ಯೋಜನೆಯಡಿ ಅಭಿವೃದ್ಧಿಯಾದ ಕೆರೆಗಳ ಧಾರಣ ಶಕ್ತಿ ಹೆಚ್ಚಿದೆ. ಕಳೆದ ವರ್ಷ ನವಂಬರ್-ಡಿಸೆಂಬರ್‌ನಲ್ಲಿ ವಾಯುಭಾರ ಕುಸಿತದಿಂದಾಗಿ ಬಂದ ಮಳೆಯಿಂದ ತುಂಬಿದ್ದ ತುಮಕೂರು, ಚಿತ್ರದುರ್ಗ ಭಾಗದ ಕೆರೆಗಳಲ್ಲಿ ಈ ವರ್ಷದ ಬೇಸಿಗೆಯಲ್ಲಿಯೂ ನೀರು ಲಭ್ಯ ಇರುವುದೇ ಇದಕ್ಕೆ ಸಾಕ್ಷಿ. ದುರದೃಷ್ಟವಶಾತ್ ಈ ಯೋಜನೆ ಮುಂದುವರಿಯುತ್ತಿಲ್ಲ.

ಶಿರಸಿಯಿಂದ ೧೦ ಕಿಲೋ ಮೀಟರ್ ಸನಿಹದ ಕಳವೆ ಗ್ರಾಮದಲ್ಲಿ ಗ್ರಾಮ ಅರಣ್ಯ ಸಮಿತಿ ಹಾಗೂ ಅರಣ್ಯ ಇಲಾಖೆಯ ನೇತೃತ್ವದಲ್ಲಿ ಸುಮಾರು ೩೫೦ ಎಕರೆ ಪ್ರದೇಶದಲ್ಲಿ ವಿವಿಧ ಸಸ್ಯಗಳನ್ನು ಬೆಳೆಸಲಾಗಿದೆ. ಗ್ರಾಮದಲ್ಲಿ ವಾರ್ಷಿಕ ಸುರಿಯುವ ೮೫ರಿಂದ ೯೦ ಲಕ್ಷ ಲೀಟರ್ ಮಳೆ ನೀರನ್ನು ಹಿಡಿಯುವ ಪ್ರಯತ್ನ ನಡೆಯುತ್ತಿದೆ. ಕದಂಬರ ಕಾಲದಲ್ಲಿ ನಿರ್ಮಿಸಲಾಗುತ್ತಿದ್ದ 'ಗುಡ್ಡತಟಾಕ' ಮಾದರಿ ರಚನೆಯ ಪ್ರೇರಣೆಯಿಂದ ಕೆರೆ ನಿರ್ಮಾಣ ಮಾಡಲಾಗಿದೆ.

ಒಂದು ಕೋಟಿಯಿಂದ ಆರಂಭಿಸಿ ಐವತ್ತು ಲಕ್ಷ ಲೀಟರ್ ನೀರು ಹಿಡಿಯುವ ಸಾಮರ್ಥ್ಯದ ರಚನೆಗಳು ಇಲ್ಲಿವೆ. ಮಳೆ ಸುರಿದಾಗ ಓಡುತ್ತಿದ್ದ ನೀರು ಭೂಮಿಗೆ ಇಂಗುತ್ತಿದೆ, ಗುಡ್ಡದ ಕೆಲವು ಕೆರೆಗಳಲ್ಲಿ ಬೇಸಿಗೆಯಲ್ಲೂ ನೀರು ಲಭ್ಯ. ಅಂತರ್ಜಲ ಏರಿಕೆ ಪರಿಣಾಮ ಒಣಗುತ್ತಿದ್ದ ಸುತ್ತಮುತ್ತಲ ಅಡಿಕೆ ತೋಟಗಳು ಹಸಿರಾಗಿವೆ. ಸೊಪ್ಪಿನ ಬೆಟ್ಟದ ೧೮೦ ಎಕರೆ ಕ್ಷೇತ್ರದಲ್ಲಿ ನೀರಿಂಗಿಸುವ ರಚನೆಗಳನ್ನು ಮಾಡಲಾಗಿದೆ.


ಗ್ರಾಮ ಅರಣ್ಯ ಸಮಿತಿಗಳು ಕೇವಲ ಕಾಟಾಚಾರಕ್ಕೆ ಮಾತ್ರ, ಅವುಗಳಿಂದ ಅರಣ್ಯಕ್ಕಾಗಲೀ, ಅರಣ್ಯ ಇಲಾಖೆಗಾಗಲೀ ಅಥವಾ ಜನರಿಗಾಗಲೀ ಏನೂ ಉಪಯೋಗವಿಲ್ಲ ಎಂಬ ಅಭಿಪ್ರಾಯವಿದೆ. ಅದು ಬಹುತೇಕ ನಿಜ ಸಹ. ಆದರೆ ಕಳವೆಯಲ್ಲಿನ ಗ್ರಾಮ ಅರಣ್ಯ ಸಮಿತಿಯು ಇದಕ್ಕೆ ತದ್ವಿರುದ್ಧ. ಇಲ್ಲಿನ ಜನರ ಬದ್ಧತೆಗೆ ಇಲಾಖೆಯೂ ಸಹ ಕೈಜೋಡಿಸಿರುವುದು ಗಮನಾರ್ಹ. ಸರ್ಕಾರದ ಇಲಾಖೆಗಳ ಜೊತೆ ಕೆಲಸ ಮಾಡುವುದು ಕಷ್ಟ ಎನ್ನುವವರೂ ಸಹ ಈ ಮಾದರಿಯನ್ನು ಗಮನಿಸಬಹುದು. ಸರಳ, ಕಡಿಮೆ ವೆಚ್ಚ ಹಾಗೂ ಅನುಕರಣ ಯೋಗ್ಯ ಪ್ರಯತ್ನವಿದು.



(ತುಮಕೂರಿನಲ್ಲಿ ನೆಲೆಸಿರುವ ಲೇಖಕ ಮಲ್ಲಿಕಾರ್ಜುನ ಹೊಸಪಾಳ್ಯ ಅಪರೂಪದ ಬದ್ಧತೆಯ ಜಲನಿರ್ವಹಣಾ ತಜ್ಞ. ಇವರು ಹವ್ಯಾಸಿ ಪತ್ರಕರ್ತ ಮತ್ತು ಲೇಖಕರೂ ಹೌದು)

ಬರ ಅಂದ್ರೆ ಎಲ್ಲರಿಗೂ ಇಷ್ಟ!

-ಗೀತಾ, ಎಚ್.



ನಮ್ಮ ದೇಶದಲ್ಲಿ ಕ್ರಿಕೆಟ್‌ಗೆ ಮಾತ್ರ ನೀರಿನ ಬರವಿಲ್ಲ!

ಬರ ಕುರಿತ ಅಭಿವೃದ್ಧಿ ಅಧ್ಯಯನಗಳ ವಿದ್ವಾಂಸ ಪಿ. ಸಾಯಿನಾಥ್‌ರ ಪುಸ್ತಕದ ಹೆಸರೇ 'Everybody loves a good drought'. ಬರ ಅಂದ್ರೆ ಇಂಜಿನಿಯರ್, ರಾಜಕಾರಣಿ, ಅಧಿಕಾರಶಾಹಿ ಇವರೆಲ್ಲರಿಗೂ ಇಷ್ಟ. ಏಕೆ ಗೊತ್ತೆ? ಭಾರತದಲ್ಲಿ ಇತ್ತೀಚೆಗೆ ಕಂಡ ಮಾನವ ಜನ್ಯ ಬರಕ್ಕೆ ೨೦೧೨ರಿಂದೀಚೆಗಿನ ಮಹಾರಾಷ್ಟ್ರದ ಮರಾಠವಾಡ ಭಾಗದ ಬರವನ್ನೇ ಒಂದು ಉದಾಹರಣೆಯನ್ನಾಗಿ ನೋಡಿ. ೨೦೧೧ರಲ್ಲಿ ಎಂದಿಗಿಂತಲೂ ಅಧಿಕ ಮಳೆಯಾಗಿ ಅಲ್ಲಿನ ಬಹುತೇಕ ಎಲ್ಲಾ ಅಣೆಕಟ್ಟೆಗಳೂ ಭರ್ತಿಯಾಗಿದ್ದವು. ಇಂದಿಗೂ ಮಹಾರಾಷ್ಟ್ರವೇ ನಮ್ಮ ದೇಶದಲ್ಲಿ ಅತಿಹೆಚ್ಚು ಅಣೆಕಟ್ಟುಗಳನ್ನು ಹೊಂದಿರುವ ರಾಜ್ಯ. ದಕ್ಷಿಣ ಏಷಿಯಾದ ಅಣೆಕಟ್ಟು, ನದಿಗಳು ಹಾಗು ಜನರನ್ನು ಬೆಸೆಯುವ ಜಾಲ SANDRP ೨೦೧೩ರಲ್ಲಿ ನಡೆಸಿದ ಅಧ್ಯಯನದಂತೆ, ಒಳ್ಳೆಯ ಮಳೆಯಿಂದ ಒಳ್ಳೆಯ ಬೆಳೆ ಕಾಣಬೇಕಿದ್ದ ಮರು ವರ್ಷವೇ ಬರವುಂಟಾಗಲು ಕಾರಣ ಭ್ರಷ್ಟಾಚಾರ.


ಯೋಜನೆಗಳ ಅನುಷ್ಠಾನದಲ್ಲಿ ವಿನಾಕರಣ ವಿಳಂಬ, ಮಿತಿ ಮೀರಿದ ವೆಚ್ಚ ಇವುಗಳಿಂದ ಸೊರಗಿದ ಪ್ರದೇಶಕ್ಕೆ ಅಂದಿನ ಜಲಸಂಪನ್ಮೂಲ ಮಂತ್ರಾಲಯದ ಕಾರ್ಯದರ್ಶಿಗಳಾದ ಮಾಧವ ಚಿತಾಳೆಯವರು ತನಿಖಾಧಿಕಾರಿಗಳಾಗಿ ನಿಯಮಿಸಲ್ಪಟ್ಟಿದ್ದರು. ಅವರು ಕಂಡುಕೊಂಡದ್ದು ಇದು: ೨೦೧೩ರಲ್ಲಿ ೩೭೧೨ ದೊಡ್ಡ, ಮಧ್ಯಮ ಹಾಗು ಸಣ್ಣ ನೀರಾವರಿ ಯೋಜನೆಗಳಿದ್ದ ಮಹಾರಾಷ್ಟ್ರ ಶೇ.೧೭.೯ ವಿಸ್ತಾರ ನೀರಾವರಿ ಪ್ರದೇಶವನ್ನು ಹೊಂದಿತ್ತು. ನಂತರದ ಸರ್ವೆಗಳಲ್ಲಿ ಈ ವ್ಯಾಪ್ತಿಯ ಚಿತ್ರಣವನ್ನು ಮಹಾರಾಷ್ಟ್ರ ಎಕನಾಮಿಕ್ ಸರ್ವೆ ಒದಗಿಸಲಿಲ್ಲ. ಕಾರಣ, ಯಾವುದೇ ಮಹತ್ತರ ಬದಲಾವಣೆಗಳಿಲ್ಲದೆ ಕೇವಲ ಶೇ.೦.೧ರಷ್ಟು ಮಾತ್ರ ವ್ಯಾಪ್ತಿ ಹೆಚ್ಚಿತ್ತು. ಆದರೆ ಹಣ ಹೊಳೆಯಂತೆ ಹರಿದಿತ್ತು. ಇಷ್ಟೆಲ್ಲಾ ಹಗರಣಗಳ ಮಧ್ಯೆ ಕೆಲವು ಬಲಿಷ್ಠ ರಾಜಕಾರಣಿಗಳನ್ನು ಓಲೈಸಲು ರಾಜ್ಯ ಸರ್ಕಾರ ಹೇರಳ ನೀರನ್ನು ಬೇಡುವ ಕಬ್ಬಿನ ಬೆಳೆಗೆ ಉತ್ತೇಜನ ನೀಡಲಾರಂಭಿಸಿತು. ಅದರ ಪ್ರಭಾವದಿಂದ ನೀರಾವರೀ ಪದ್ಧತಿಯ ವಿಕೃತಿ ಮಾತ್ರವಲ್ಲದೆ ಅಂತರ್ಜಲದ ಮಟ್ಟವೂ ಕುಸಿಯಲಾರಂಭಿಸಿತು. ರಾಜ್ಯದ ಬಹುತೇಕ ಶೇ.೭೦ರಷ್ಟು ನೀರಾವರಿಯ ನೀರು ಮತ್ತು ಭಾವಿ ನೀರನ್ನು ಕೇವಲ ಕಬ್ಬಿನ ಬೆಳೆಯೊಂದಕ್ಕೇ ಒದಗಿಸಲಾಗುತ್ತಿತ್ತು. ಚಿತಾಳೆಯವರ ಸೂಚನೆಯ ನಂತರದ ವರ್ಷಗಳಲ್ಲಿ ಸರ್ಕಾರ ಕಬ್ಬು ಬೆಳೆಗೆ ನಿಷೇಧ ಹೇರಿತು. ಆದರೆ ಬಲಿಷ್ಠ ಮತ್ತು ಭ್ರಷ್ಟ ರಾಜಕಾರಣಿಗಳ ಮಾಲೀಕತ್ವ ಹೊಂದಿದ್ದ ಸಕ್ಕರೆ ಕಾರ್ಖಾನೆಗಳ ಒತ್ತಡದಿಂದ ಪರಿಸ್ಥಿತಿಯೇನೂ ಬದಲಾಗಲಿಲ್ಲ. ಅಲ್ಲಿ ಇಂದಿಗೂ ಮುಂದುವರೆದ ಬರಕ್ಕೆ ಇದೇ ಕಾರಣ.

ಆದರೆ ಇದೇ ಭಾಗಕ್ಕೆ ಹೊಂದಿಕೊಂಡಂತಿರುವ ಹಿವಾರೆ ಬಜಾರ್ ಮತ್ತು ಪುಲಕೋಟಿಗಳು ಬರದಿಂದ ಪಾರಾಗಿವೆ. ಅದೇ ರಾಜ್ಯಾಡಳಿತ ಹಾಗೂ ಕೇಂದ್ರಾಡಳಿತಕ್ಕೆ ಸೇರಿದ್ದರೂ ರಾಳೇಗಣಸಿದ್ಧಿಯ ಅಣ್ಣಾ ಹಜಾರೆ, ಹಿವಾರೆ ಬಜಾರ್‌ನ ಪೋಪಟ ರಾವ ಪವಾರರಂತಹ ವಿವೇಕಿಗಳ ಪ್ರಯತ್ನದಿಂದ ಹಳ್ಳಿಗರಲ್ಲಿ, ರೈತರಲ್ಲಿ ಜಾಗೃತಿ ಮೂಡಿದೆ. ಜೋಳ ಮತ್ತು ಕಿರುಧಾನ್ಯಗಳಂತಹ ಬೆಳೆಯಿಂದ ಒಂದೂವರೆ ಮೀಟರಿನಷ್ಟು ಅಂತರ್ಜಲ ವೃದ್ಧಿಸಿದೆ. ಬೀಳುವ ಮಳೆಯನ್ನು ಹಿಂಗಿಸಿ ಮಳೆಕೊಯ್ಲು ಮಾಡಿ ಈ ಗ್ರಾಮಗಳು ಸಮೃದ್ಧಿಯನ್ನು ಕಂಡಿವೆ. ಪುಲಕೋಟಿಯ ಮನ್ನ್ ದೇಶಿ ಫೌಂಡೇಷನ್ ಮಳೆಯ ಪ್ರತಿ ಹನಿಯನ್ನೂ ತೊರೆಗಳಿಗೆ ಸೇರಿಸುವ ಯೋಜನೆ ನಿರ್ಮಿಸಿ ೮ ಕೋಟಿ ಲೀಟರ್‌ನಷ್ಟು ನೀರನ್ನು ಒಡ್ಡುಗಳಲ್ಲಿ ಸಂಗ್ರಹಿಸಿ ೧೫ ಗ್ರಾಮಗಳ ಬರ ನಿವಾರಿಸಿದೆ. ನಮ್ಮ ದೇಶದ ಕಾಲುಭಾಗಕ್ಕಿಂತಲೂ ಹೆಚ್ಚಿನ ಸಕ್ಕರೆ ಪೂರೈಕೆಯಾಗುವುದು ಬರಪೀಡಿತ ಜಿಲ್ಲೆಗಳಿಂದ ಎಂಬುದನ್ನು ನಾವು ಗಮನಿಸಬೇಕು. ಹಾಗೇ, ನಮ್ಮದೇ ಮಂಡ್ಯ ಜಿಲ್ಲೆಯಲ್ಲೇಕೆ ರೈತರ ಆತ್ಮಹತ್ಯೆಗಳು ಹೆಚ್ಚೆಂಬುದಕ್ಕೆ ಇದೂ ಒಂದು ಕಾರಣವಿರಬಹುದಲ್ಲವೆ?



(ಮೈಸೂರಿನ ಪರಿಸರ ಶಿಕ್ಷಣ ಉದ್ದೇಶದ 'ಹಸಿರು ಹೆಜ್ಜೆ' ಎಂಬ ಸಂಸ್ಥೆಯ ಸದಸ್ಯೆಯಾದ ಲೇಖಕಿ ವೃತ್ತಿಯಿಂದ ಜೀವಶಾಸ್ತ್ರ ಬೋಧಿಸುವ ಶಾಲಾ ಅಧ್ಯಾಪಕಿ)

ಒಳ್ಳೆಯ ಬರವೆಂದರೆ ಪ್ರತಿಯೊಬ್ಬರಿಗೂ ಇಷ್ಟ ! : ಏಕೆ ? : ಪಿ. ಸಾಯಿನಾಥ್‌ರ ಉತ್ತರಗಳು



ನಮ್ಮ ಗ್ರಾಮಾಭಿವೃದ್ಧಿ ಯೋಜನೆಗಳ ಬಹುಪಾಲು ಹಣವನ್ನು ತಿನ್ನುವ 'ಬರಪೀಡಿತ ಪ್ರದೇಶ ಕಾರ್ಯಕ್ರಮಗಳ(DPAP)' ಹಿಂದಿರುವ ದೊಡ್ಡ ಮೋಸವನ್ನು ಗಮನಿಸಿದರೆ ಸಾಕು ನಮ್ಮ ಪ್ರಜಾಪ್ರಭುತ್ವ ಮತ್ತು ಅಭಿವೃದ್ಧಿ ಕಲ್ಪನೆಗಳು ಈಗ ಎಷ್ಟು ವಿಕ್ಷಿಪ್ತಗೊಂಡಿವೆ ಎಂಬುದು ಗೊತ್ತಾಗುತ್ತದೆ. ದೇಶದ ವಾರ್ಷಿಕ ಸರಾಸರಿ ಮಳೆ ೭೫೦ ಮಿ.ಮೀ ಇದ್ದು, ಇದಕ್ಕಿಂತ ಕಡಿಮೆ ಮಳೆ ಬೀಳುವ ಪ್ರದೇಶಗಳನ್ನಷ್ಟೇ ಬರಪೀಡಿತವೆಂದು ಘೋಷಿಸಬೇಕು. ಆದರೆ ಮಳೆಯ ಈ ಲೆಕ್ಕವನ್ನೇ ಪರಿಗಣಿಸದೆ ಸ್ಥಳೀಯ ಶಾಸಕರು, ಅಧಿಕಾರಿಗಳು, ಪತ್ರಕರ್ತರು ಗುತ್ತಿಗೆದಾರರು ಒಟ್ಟುಗೂಡಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ತಮ್ಮ ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿತವಾಗುವಂತೆ ನೋಡಿಕೊಳ್ಳುತ್ತಾರೆ. ನಂತರ ಇವರೆಲ್ಲ ಸೇರಿ ರಸ್ತೆ ನಿರ್ಮಾಣ, ಕೆರೆ ಹೂಳೆತ್ತುವುದು, ವನ ನಿರ್ಮಾಣ ಇತ್ಯಾದಿ ಕಾಮಗಾರಿಗಳ ಹೆಸರಲ್ಲಿ ಹಣ ಲೂಟಿ ಮಾಡುತ್ತಿರುವುದರ ಬೃಹತ್ ಯೋಜನೆಯೇ ಡಿಪಿಎಪಿ ಎಂಬ ಹೆಸರಲ್ಲಿ ರಾಷ್ಟ್ರಾದ್ಯಂತ ಜಾರಿಯಾಗುತ್ತಿರುವುದನ್ನು ಸಾಯಿನಾಥ್ ತಮ್ಮ 'Everybody loves a good drought' ಪುಸ್ತಕದಲ್ಲಿ ಅನೇಕ ದೃಷ್ಟಾಂತಗಳ ಮೂಲಕ ನಮ್ಮ ಗಮನಕ್ಕೆ ತರುತ್ತಾರೆ. ಉದಾಹರಣೆಗೆ ಮಹಾರಾಷ್ಟ್ರದಲ್ಲೇ ಅತಿ ಹೆಚ್ಚು ಮಳೆ ಬೀಳುವ ಗಿರಿಧಾಮ ಪ್ರದೇಶವಾದ ಲೋನಾವಾಳವು ಬರಪಡೀತ ಪ್ರದೇಶವಂತೆ! ಹೀಗಾಗಿ ಮಹಾರಾಷ್ಟ್ರದಲ್ಲಿ ಶೇ. ೭೫ರಷ್ಟು ಕಬ್ಬು ಬೆಳೆಯುವುದು ಇಂತಹ ಬರಪೀಡಿತ ಬ್ಲಾಕುಗಳಲ್ಲೇ!

ವಾರ್ಷಿಕ ಸರಾಸರಿ ೯೦೦ ಮಿ.ಲೀ. ಮಳೆ ಬೀಳುವ ಒರಿಸ್ಸಾದ ಕಾಳಹಂಡಿ ತಾಲ್ಲೂಕನ್ನು 'ಹಸಿವಿನಿಂದ ಸತ್ತವರ ತಾಲ್ಲೂಕು' ಎಂಬ ಹಳೆಯ ದಾಖಲೆಯ ನೆಪದಲ್ಲಿ ಈಗ ನಿರಂತರ ಬರಪೀಡಿತ ತಾಲ್ಲೂಕನ್ನಾಗಿ ಪರಿವರ್ತಿಸಲಾಗಿದೆ! ಆದರೆ ವಾಸ್ತವ ಸಂಗತಿ ಎಂದರೆ, ಈ ತಾಲ್ಲೂಕಿನ ಸರಾಸರಿ ತಲಾ ಆಹಾರ ಉತ್ಪಾದನೆ ರಾಜ್ಯ ಸರಾಸರಿಗಿಂತ ಹೆಚ್ಚು. ಸಾಯಿನಾಥರ ಪ್ರಕಾರ ಕಾಳಹಂಡಿಯ ನಿಜವಾದ ಸಮಸ್ಯೆ ಮಳೆಯದ್ದೂ ಅಲ್ಲ, ಬೆಳೆಯದ್ದೂ ಅಲ್ಲ. ಅಲ್ಲಿನ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ದುರುಪಯೋಗಪಡಿಸಿಕೊಂಡು ಅಲ್ಲಿನ ವ್ಯಾಪಾರಿ ಹಾಗೂ ನೌಕರಶಾಹಿ ಜೊತೆಗೂಡಿ ಅಲ್ಲಿ ಉತ್ಪಾದಿತವಾಗುವ ಆಹಾರ ಧಾನ್ಯಗಳನ್ನು ಅತಿ ಲಾಭಕ್ಕಾಗಿ ಹೊರಕ್ಕೆ ಸಾಗಿಸುತ್ತಿರುವುದೇ ಆಗಿದೆ. ಆದರೆ ನಮ್ಮ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು ಇಂತಹುದ್ದನ್ನೆಲ್ಲ ಒಪ್ಪಿಕೊಂಡೇ ಯೋಜಿತವಾಗಿರುತ್ತವೆ. ಹಾಗಾಗಿ ನಮ್ಮ ದೇಶದಲ್ಲಿ ಬರ ಎಂದರೆ ವ್ಯಾಪಾರಿಗಳಿಗೆ, ದಲ್ಲಾಳಿಗಳಿಗೆ, ಗುತ್ತಿಗೆದಾರರಿಗೆ, ಪುಢಾರಿಗಳಿಗೆ ಮತ್ತು ನೌಕರಶಾಹಿಗೆ ಸುಗ್ಗಿ! ಈ ಹಿನ್ನೆಲೆಯಲ್ಲೇ ಸಾಯಿನಾಥ್‌ಗೆ ಇಂತಹ ಬರಪೀಡಿತ ತಾಲ್ಲೂಕು ಕೇಂದ್ರವೊಂದರಲ್ಲಿ ಗುತ್ತಿಗೆ ಕೆಲಸ ಮಾಡಿಸುವ ವಕೀಲನೊಬ್ಬ ಹೇಳಿದ್ದು, 'ಈ ವರ್ಷದ ಬರದಿಂದಾಗಿ ನಾನು ಸ್ಕೂಟರ್ ಕೊಂಡುಕೊಂಡೆ. ಮುಂದಿನ ವರ್ಷದ ಬರಕ್ಕೆ ಕಾರ್ ಕೊಳ್ಳುವೆ!' ಅಷ್ಟೇ ಅಲ್ಲ, ತಮ್ಮ ಜಮೀನುಗಳಲ್ಲಿ ಮೂರು ಬೆಳೆ ಬೆಳೆಯುವ ಇಂತಹ ತಾಲ್ಲೂಕುಗಳ ದೊಡ್ಡ ರೈತರುಗಳು ಈ ಬರ ಪರಿಹಾರವನ್ನು ನಾಲ್ಕನೇ ಬೆಳೆಯೆಂದು ಕರೆಯುತ್ತಾರಂತೆ!

(ಇವು ಡಿ.ಎಸ್. ನಾಗಭೂಷಣ ಅವರ 'ರೈತಭಾರತ: ಅವಸಾನದ ಅಂಚಿನಲ್ಲಿ'(*೨೦೦೮: ಲೋಹಿಯಾ ಪ್ರಕಾಶನ*) **ಪುಸ್ತಕದಿಂದ ಆಯ್ದ ಭಾಗಗಳು)**

ಸಾಹಿತ್ಯ–ಸಂಸ್ಕೃತಿ–ಪ್ರಗತಿಪರತೆ ಇತ್ಯಾದಿ... ಮೂರು ಟಿಪ್ಪಣಿಗಳು




ಕಳೆದ ತಿಂಗಳು ಧಾರವಾಡದಲ್ಲಿ ನಡೆದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಪ್ರಶಸ್ತಿ ಪ್ರದಾನ ಮಾಡಲು ಬರಬೇಕಿದ್ದ ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಮಂತ್ರಿ ಉಮಾಶ್ರೀಯವರು ಬರಲಿಲ್ಲ. ಸಾಹಿತ್ಯ ಅಕಾಡೆಮಿಯು ತನ್ನ ಆಹ್ವಾನ ಪತ್ರಿಕೆಯ ಒಂದು ಪುಟದ ತುಂಬ ತುಂಬಿದ್ದ ಸ್ಥಳೀಯ ರಾಜಕಾರಣಿಗಳಾರೂ ಬರಲಿಲ್ಲ. ಆದರೆ ಅಕಾಡೆಮಿಯ ಅಧ್ಯಕ್ಷೆ ಮಾಲತಿ ಪಟ್ಟಣಶೆಟ್ಟಿಯವರು ತಮ್ಮೂರೆಂದು ಅತಿ ಆಸ್ಥೆಯಿಂದ ಆಯೋಜಿಸಿದ್ದ ಸಮಾರಂಭಕ್ಕೆ ಜನ ಮಾತ್ರ ವಿದ್ಯಾವರ್ಧಕ ಸಂಘದ ಸಭಾ ಭವನ ತುಂಬಿ ತುಳುಕುವಂತೆ ಬಂದಿದ್ದರು..

ಉಮಾಶ್ರೀಯವರು ಅಕಾಡೆಮಿಯ ಕಳೆದ ಎರಡು ಮೂರು ಪ್ರಶಸ್ತಿ ಸಮಾರಂಭಗಳಿಗೂ ಬಂದಿಲ್ಲವಂತೆ. ಕನ್ನಡ ಸಂಸ್ಕೃತಿ ಮಂತ್ರಿಗೆ ಸಾಹಿತ್ಯ ಅಕಾಡೆಮಿಯ ವಾರ್ಷಿಕ ಪ್ರಶಸ್ತಿಗಳ ಸಮಾರಂಭಕ್ಕೆ ಬರುವುದಕ್ಕಿಂದ ಮಹತ್ವದ ಕೆಲಸ ಇನ್ನಾವುದಿದೆಯೋ ತಿಳಿಯದು! ಅದೂ ಡಾ. ಷ. ಶೆಟ್ಟರ್ ರಂತಹ ಹಿರಿಯ ವಿದ್ವಾಂಸರಿಗೆ ಪ್ರಶಸ್ತಿ ನೀಡುವ ಮತ್ತು ಡಾ. ಗಣೇಶ್ ದೇವಿಯವರಂತಹ ಪ್ರಖ್ಯಾತ ಭಾಷಾ ತಜ್ಞರು ಮುಖ್ಯ ಅತಿಥಿಯಾಗಿದ್ದ ಸಮಾರಂಭಕ್ಕೆ!

ಕರ್ನಾಟಕ ಸರ್ಕಾರಗಳ ಇತಿಹಾಸದಲ್ಲೇ ಸಾಹಿತಿಯೊಬ್ಬರ ಪ್ರಾತಿನಿಧ್ಯವಿಲ್ಲದೆ ನಡೆದಿರುವ ವಿಧಾನ ಪರಿಷತ್ತನ್ನು ಹೊಂದಿರುವ ಸಿದ್ಧರಾಮಯ್ಯನವರ ಸರ್ಕಾರದ ಸಂಸ್ಕೃತಿ ಮಂತ್ರಿ ಹೇಗಿರಬೇಕೋ ಹಾಗೇ ಇದ್ದಾರೆ ಉಮಾಶ್ರೀಯವರು. ಷ. ಶೆಟ್ಟರ್ ತಮ್ಮ ಭಾಷಣದಲ್ಲಿ ಇದನ್ನೇ ಪರೋಕ್ಷವಾಗಿ ಹೇಳಿದ್ದು ಹೀಗೆ: 'ಅವರು ಬಂದಿದ್ದರೆ ಸಂಸ್ಕೃತಿಯ ಒಂದಿಷ್ಟು ಪ್ರಾಥಮಿಕ ಪಾಠಗಳನ್ನಾದರೂ ಕಲಿಯಬಹುದಿತ್ತು! ಅದರಿಂದಲೂ ಅವರು ಇಂದು ವಂಚಿತರಾಗಿದ್ದಾರೆ!!'

***



ಷೆಲ್ಡನ್ ಪೊಲಾಕ್ ಕನ್ನಡ, ತಮಿಳು, ಸಂಸ್ಕೃತವೂ ಸೇರಿದಂತೆ ಹಲವು ಭಾರತೀಯ ಭಾಷೆಗಳನ್ನು ಬಲ್ಲ ಮತ್ತು ಅವುಗಳ ಸಾಹಿತ್ಯ ಹಾಗೂ ಸಾಹಿತ್ಯ ಮೀಮಾಂಸೆಗಳ ಆಳವಾದ ಅಧ್ಯಯನ ಮಾಡಿರುವ ಅಮೆರಿಕಾದ ವಿದ್ವಾಂಸ. ಅವರು ಕನ್ನಡದ ಆದಿ ಕೃತಿಯೆಂದು ಹೆಸರಾದ ನೃಪತುಂಗನ 'ಕವಿರಾಜ ಮಾರ್ಗ' ಕುರಿತ ಅಧ್ಯಯನ ಈ ಕೃತಿಯ ಸಾಂಸ್ಕೃತಿಕ ಮಹತ್ವವನ್ನು ಜಗತ್ತಿಗೆ ಪರಿಚಯ ಮಾಡಿಕೊಟ್ಟಿವೆ. ಅವರು ಈ ಕೃತಿಯನ್ನು ಕನ್ನಡ–ಸಂಸ್ಕೃತಗಳ ಸಂಬಂಧವನ್ನು ಕನ್ನಡ ಮತ್ತು ಇತರ ದ್ರಾವಿಡ ಭಾಷೆಗಳ ಸಂಬಂಧಕ್ಕೆ ಪ್ರತಿಯಾಗಿ ವೈಭವೀಕರಿಸಿ ಅರ್ಥೈಸಿದ್ದಾರೆ ಎಂಬ ಕೆಲವರ ನಡುವೆಯೂ ಅವರ ವಿದ್ವತ್ತಿನ ಪ್ರಾಮಾಣಿಕೆಯನ್ನು ಯಾರೂ ಪ್ರಶ್ನಿಸಿರಲಿಲ್ಲ.

ಆದರೆ ಈಗ ಈ ಪ್ರಾಮಾಣಿಕತೆಯನ್ನು ಪ್ರಶ್ನಿಸುವ ವಿದ್ವಾಂಸರ ಒಂದು ಪಡೆಯೇ ಹುಟ್ಟಿಕೊಂಡಿದೆ. ಪೊಲಾಕ್ ಈಗ ಇನ್ಫೋಸಿಸ್‌ನ ನಾರಾಯಣ ಮೂರ್ತಿಯವರ ಮಗ ರೋಹನ್‌ಮೂರ್ತಿಯವರಾರಂಭಿಸಿರುವ–ಆಯ್ದ ಭಾರತೀಯ ಅಭಿಜಾತ ಕೃತಿಗಳನ್ನು ಇಂಗ್ಲಿಷ್‌ಗೆ ಅನುವಾದಿಸುವ–ಕೋಟ್ಯಾಂತರ ರೂಪಾಯಿಗಳ ವೆಚ್ಚದ *ಮೂರ್ತಿ ಕ್ಲಾಸಿಕಲ್ ಲೈಬ್ರರಿ ಆಫ್ ಇಂಡಿಯಾ* ಯೋಜನೆಯ ಸಂಪಾದಕರಾಗಿದ್ದು, ಆ ಸ್ಥಾನದಿಂದ ಅವರನ್ನು ತೆಗೆಯಬೇಕೆಂದು ಈ ಪಡೆ ಆಗ್ರಹಿಸಿದೆ.

ಪ್ರಶ್ನೆ, ಈ ಪಡೆ ಇಂತಹ ಮಹತ್ವದ ಯೋಜನೆಗೆ ಭಾರತದ ಸಾಂಸ್ಕೃತಿಕ ಪರಂಪರೆಗೆ ಸೇರಿ ಅದರಲ್ಲಿ ಆಳವಾಗಿ ಮುಳುಗೆದ್ದ ವ್ಯಕ್ತಿ ಮಾತ್ರ ಸಂಪಾದಕನಾಗಿರಬೇಕು ಎಂದು ಆಗ್ರಹಿಸಿದೆ! ಆದರೆ ಈ 'ಸಾಂಸ್ಕೃತಿಕ ಜಾಗೃತಿ' ಇದ್ದಕ್ಕಿದಂತೆ ಈಗ ಉಂಟಾದ್ದೇಕೆ? ಇದಕ್ಕೆ ಇತ್ತೀಚಿನ ಜೆಎನ್‌ಯು ವಿವಾದದ ಸಂದರ್ಭದಲ್ಲಿ ಈ ವಿಶ್ವವಿದ್ಯಾಲಯದಲ್ಲಿರುವ ಮುಕ್ತ ಶೈಕ್ಷಣಿಕ ವಾತಾವರಣಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕೆಂದು ಆಗ್ರಹಿಸಿದ ಜಾಗತಿಕ ವಿದ್ವಾಂಸರ ಪೈಕಿ ಷೆಲ್ಡನ್ ಪೊಲಾಕ್ ಕೂಡಾ ಒಬ್ಬರಾಗಿದ್ದುದೇ ಕಾರಣವೆಂದು ಹೇಳಲಾಗುತ್ತದೆ. ಆದರೆ ಬಲ್ಲವರ ಪ್ರಕಾರ ನಿಜವಾದ ಕಾರಣ, ರಾಮಾಯಣ ರಚಿತವಾಗಿದ್ದೇ ಭಾರತದಲ್ಲಿ ಬ್ರಾಹ್ಮಣರ ಶ್ರೇಷ್ಠತೆಯನ್ನು ಸ್ಥಾಪಿಸಲು ಎಂಬ ಅವರ ವಾದ. ಜೆಎನ್‌ಯು ಪ್ರಸಂಗ ಈ ರಾಮ ಭಕ್ತರಿಗೆ ಒಂದು ನೆಪ ಒದಗಿಸಿತಷ್ಟೆ!

***



ಮಂಡ್ಯದಲ್ಲಿ ಕೆಲವು ಸಮಾನ ಮನಸ್ಕ ಸಂಘಟನೆಗಳು ಸೇರಿ ಕಳೆದ ೯ರಂದು ಬಸವ ಜಯಂತಿ ಸಂದರ್ಭದಲ್ಲಿ 'ವಿಶ್ವಮಾನವ ವೇದಿಕೆ'ಯಡಿ ಜಾತ್ಯತೀತ ಒಲವಿನ ಅಂತರ್ಜಾತಿ ಮತ್ತು ಅಂತರ್‌ಧರ್ಮೀಯ ವಿವಾಹಿತರ ರಾಜ್ಯ ಮಟ್ಟದ ಸಮಾವೇಶ ನಡೆಸಿದ್ದಾರೆ. ಬಹುಶಃ ಇತ್ತೀಚೆಗೆ ಮಂಡ್ಯದ ಸುತ್ತಮುತ್ತ ನಡೆದ ಮಾನಗೇಡಿ ಹತ್ಯೆಗಳಿಗೆ ಅಲ್ಲಿನ ಪ್ರಗತಿಪರರು ವ್ಯಕ್ತಪಡಿಸಿದ ಪ್ರತಿಸ್ಪಂದನ ಇದು. ಅಲ್ಲಿ ಜನ ಭರ್ಜರಿಯಾಗಿ ಸೇರಿದ್ದರೆಂದು ಅಲ್ಲಿಗೆ ಹೋಗಿಬಂದವರಿಂದ ಕೇಳಿದೆ. ಕನಿಷ್ಟ ಆ ಜನರಲ್ಲಿ ಯಾರೊಬ್ಬರೂ ಮುಂದೆ ಮರ್ಯಾದೆಗೇಡಿ ಹತ್ಯೆಗೆ ಕೈಹಾಕದಿದ್ದರೆ ಸಾಕು, ಅಲ್ಲಿ ನಮ್ಮ 'ಪ್ರಗತಿಪರ' ಗೆಳೆಯರು ಮಾಡಿದ ಭಾಷಣಗಳು ಸಾರ್ಥಕವಾದಂತೆ!

ಏಕೆಂದರೆ ನಮ್ಮ ಪ್ರಗತಿಪರರು ಯಾವಾಗಲೂ ಮನೆಗೆ ಬೆಂಕಿ ಬಿದ್ದಾಗ ಬಾವಿ ತೋಡಲು ಹೊರಡುವ ಜನ. ಜೊತೆಗೆ ಆರಂಭಶೂರತ್ವದಲ್ಲಿ ಎತ್ತಿದ ಕೈ. ಇನ್ನೊಮ್ಮೆ ಬೆಂಕಿ ಬೀಳುವವರೆಗೂ ಅವರದ್ದು ಬೇರೊಂದು ಅರ್ಥದ 'ಪ್ರಗತಿಪರ' ಚಟುವಟಿಕೆಗಳು! ಇದನ್ನು ನಾನು ಇಲ್ಲಿ ಏಕೆ ಹೇಳುತ್ತಿರುವೆನೆಂದರೆ, ೨೦ ವರ್ಷಗಳ ಹಿಂದೆ–ಬಹುಶಃ ೧೯೯೬ರಲ್ಲಿ–ಯಾರೋ ಅನಾಮಿಕರೊಬ್ಬರು– ಒಂದಿಷ್ಟು ದೊಡ್ಡ ಮೊತ್ತದ ಹಣ ಕೊಟ್ಟರೆಂದು ಮೈಸೂರಿನ ನಮ್ಮ ಕೆಲವು ಪ್ರಗತಿಪರ ಗೆಳೆಯರು 'ಮಾನವ ಮಂಟಪ' ಎಂಬ ಅಂತರ್ಜಾತಿ ಒಲವಿನ ವಿವಾಹ ವೇದಿಕೆಯನ್ನು ಕಟ್ಟಿದರು. ಅಂತರ್ಜಾತಿ ವಿವಾಹವಾಗಬಯಸುವವರಿಗೆ ಇದೊಂದು ರಾಜ್ಯಮಟ್ಟದ ವೇದಿಕೆಯಾಗಿ ಅಂತಹವರಿಗೆ ಬೆಂಬಲವಾಗಿ ನಿಲ್ಲುವ ವಿಶಾಲ ಉದ್ದೇಶ ಇದಕ್ಕಿತ್ತು. ಅದಕ್ಕೊಂದು ಪ್ರಣಾಳಿಕೆಯನ್ನೂ ಸಿದ್ಧಮಾಡಲಾಗಿತ್ತು! ಆದರೆ ಅದನ್ನು ಹಾಗೆ ಕಟ್ಟುವಾಗಲೇ ಹಣ ನಿರ್ವಹಣೆಯ ಸಂಬಂಧವಾಗಿ ಜಗಳ ಸ್ಫೋಟಿಸಿ ಅಶಾಂತಿಯ ವಾತಾವರಣ ಸೃಷ್ಟಿಯಾಯಿತು. ಈ ಅಶಾಂತಿಯ ನಡುವೆಯೇ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿರುವ ಗಾಜಿನ ಮನೆಯಲ್ಲಿ ಇದರ ಮೊದಲ ಸಮಾವೇಶ ಡಾ. ಶಿವರಾಮ ಕಾರಂತರಿಂದ ಉದ್ಘಾಟನೆಯಾಯಿತು. ನಾನು ಸಂಪಾದಿಸಿದ್ದ 'ಒಲವು' ಎಂಬ ಸ್ಮರಣ ಸಂಚಿಕೆ ಅಲ್ಲಿ ಬಿಡುಗಡೆಯಾಯಿತು. ಜನ ಆಗಲೂ ಕಿಕ್ಕಿರಿದು ಸೇರಿದ್ದರು. ಅದು ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯೂ ಆಯಿತು. ಆದರೆ ನಂತರ ಆದದ್ದೇನು?

ಈ ಸಂಸ್ಥೆಯ ಹಿಂದಿದ್ದ ಒಂದಿಷ್ಟು ಹಣವೋ ಅಥವಾ ಅದರ 'ಪಟ್ಟ'ದ ಆಸೆಯೋ ಅದನ್ನು ಅಬ್ಬೇಪಾರಿ ಮಾಡಿ ಅದು ಸ್ಥಾಪಿತವಾಗಿದ್ದ ಉದ್ದೇಶವೇ ಹಿನ್ನೆಲೆಗೆ ಸರಿಯಿತು. ಕಾಲಾಂತರದಲ್ಲಿ ಅದು ಇನ್ನಾರೋ ಒಂದಿಬ್ಬರು ಆಸಕ್ತರ ಕೈಗೆ ಸಿಕ್ಕಿ ಒಂದೆರೆಡೇನೋ 'ಸಮಾವೇಶ'ಗಳು ನಡೆದವಾದರೂ, ಅವು ಯಾರ ಗಂಭೀರ ಗಮನವನ್ನೂ ಸೆಳೆಯಲಿಲ್ಲ.. ಏಕೋ ಈಗ ಅದರ ಪ್ರಸ್ತುತ ದಾತರೂ ಎಲ್ಲ ಲೆಕ್ಕ ವ್ಯವಸ್ಥಿತಗೊಳಿಸಿ ಅದರಿಂದ ಮುಕ್ತಗೊಳ್ಳುವ ಸಿದ್ಧತೆಯಲ್ಲಿದ್ದಾರಂತೆ. ಬಹುಶಃ ಅವರಿಗೆ ಕೆಲಸ ಮಾಡುವುದು ಭಾಷಣ ಮಾಡಿದಷ್ಟು ಸುಲಭವಲ್ಲ ಎಂಬುದು ಗೊತ್ತಾಗಿರಬೇಕು!


ಇದೆಲ್ಲ ಪುರಾಣವನ್ನು ನಾನು ಇಲ್ಲಿ ಹೇಳಲು ಕಾರಣವೆಂದರೆ, 'ಮಾನವ ಮಂಟಪ' ಎಲ್ಲರನ್ನೂ ಒಳಗೊಂಡು ಆರೋಗ್ಯಪೂರ್ಣವಾಗಿ ಮತ್ತು ತನ್ನ ಮೂಲ ಆಶಯದಂತೆ ಅಂತರ್ಜಾತಿ ಹಾಗೂ ಅಂತರ್‌ಧರ್ಮೀಯ ವಿವಾಹವಾಗಬಯಸುವವರಿಗೆ ಒಂದು ವಿಶ್ವಾಸಾರ್ಹ ಆಸರೆಯಾಗಿ ಬೆಳೆದಿದ್ದರೆ ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಜಾತಿ–ಧರ್ಮಗಳನ್ನು ಮೀರಿ ವಿವಾಹವಾಗಬಯಸುವವರು ಎದುರಿಸುತ್ತಿರುವ ಹಿಂಸೆ,ಕೊಲೆ ಮತ್ತು ಆತ್ಮಹತ್ಯೆಯಂತಹ ಸಂದರ್ಭಗಳು ಉಂಟಾಗುತ್ತಿರಲಿಲ್ಲ. ಮಂಡ್ಯದ ಸಮಾರಂಭದ ವೇದಿಕೆಯಲ್ಲಿ ಈ 'ಮಾನವ ಮಂಟಪ'ದ ಆ ಕೆಲ ಹಳೆಯ ಗಿರಾಕಿಗಳೇ ಇದ್ದು ಭರ್ಜರಿ ಭಾಷಣಗಳನ್ನೂ ಬಿಗಿದರು ಎಂದು ಕೇಳಿದೆ. ಒಳ್ಳೆಯದು. ಆದರೆ ಈಗಲಾದರೂ ಇವರು ತಮ್ಮ ಮೂಲ ಸಂಘಟನೆಯನ್ನು ಪುನರುಜ್ಜೀವನಗೊಳಿಸುವ ಪ್ರಯತ್ನ ಮಾಡಬೇಕು. ಮಂಡ್ಯದ ಸಮಾರಂಭದ ಸಂಘಟಕರು ಇದಕ್ಕೆ ಕೈಜೋಡಿಸಬೇಕು. ಆಗ ಮಾತ್ರ ಈ ಮಂಡ್ಯದ ಸಮಾರಂಭ ಸಾರ್ಥಕವಾದಂತೆ.

–ಡಿ.ಎಸ್. ನಾಗಭೂಷಣ

ಪುಸ್ತಕಾವಲೋಕನ

ಪು: ನಮ್ಮ ಶಾಮಣ್ಣ (ಕಡಿದಾಳು ಶಾಮಣ್ಣ ಗೌರವ ಗ್ರಂಥ) ಸಂ: **ಡಿ.ಎಸ್. ನಾಗಭೂಷಣ, ಎಂ.ಬಿ. ನಟರಾಜ್, ಬಿ.ಚಂದ್ರೇಗೌಡ** ಪ್ರ: **ಅಹರ್ನಿಶಿ, ಶಿವಮೊಗ್ಗ** ಪು: **೪೫೨** ಬೆಲೆ: **ರೂ. ೩೭೫/-**

ನೀರಿನಂತಹ ಮನುಷ್ಯ ಮತ್ತು ಹಾಲಿನಂತಹ ಪುಸ್ತಕ



ಹಿರಿಯರಾದ ಶ್ರೀ ಕಡಿದಾಳು ಶಾಮಣ್ಣನವರು ಕರ್ನಾಟಕದಲ್ಲಿರುವ ಅನುಕರಣೀಯವಾದ ಮಾದರಿಗಳಲ್ಲಿ ಒಬ್ಬರು. ಅವರು ಜೀವನಪ್ರೀತಿ ಮತ್ತು ಆದರ್ಶವಾದಗಳು ಕೂಡಿಬಾಳುವ ಬಗೆಯನ್ನು ಬದುಕಿ ತೋರಿಸುತ್ತಿದ್ದಾರೆ. ಸರಳತೆಯು ಒಣಗದೆ ಆರ್ದ್ರವಾದಾಗ, ಜನರನ್ನು, ನಗುವನ್ನು, ಅನ್ಯರಿಗೆ ತೊಂದರೆ ಕೊಡದ ಸಂತೋಷಗಳನ್ನು ಮತ್ತು ಪ್ರೀತಿಯನ್ನು ಪ್ರೀತಿಸುವ, ಇಂತಹವರು ಕಾಣಿಸಿಕೊಳ್ಳುತ್ತಾರೆ. ತೇಜಸ್ವಿಯವರ ಹಾಗೆಯೇ ಇವರು ಕೂಡ ಜನೋಪಕಾರಿಯಾದ ವಿಜ್ಞಾನ, ತಂತ್ರಜ್ಞಾನಗಳನ್ನು ತಿರಸ್ಕರಿಸುವುದಿಲ್ಲ. ಆರಾಮ ಕುರ್ಚಿಯಲ್ಲಿ ಕುಳಿತುಕೊಂಡು ಸುಧಾರಣೆಗಳ ಬಗ್ಗೆ ಕನವರಿಸುವುದಿಲ್ಲ. ಪರಿವರ್ತನೆಯು ಸಾವು-ಬದುಕಿನ ಪ್ರಶ್ನೆಯೆನ್ನುವಂತೆ ಹಲ್ಲು ಕಚ್ಚಿಕೊಂಡು, ಮನೆಮಾರುಗಳನ್ನು ಬಿಟ್ಟು ಅಲೆದರೂ ಸರ್ವಸಂಗ ಪರಿತ್ಯಾಗಿಯಾಗಿಲ್ಲ. ಅನ್ನ ತಿನ್ನುವ ಯಾವ ಮನುಷ್ಯನಾದರೂ ಅವರ ಹಾಗೆ ಬದುಕಲು ಪ್ರಯತ್ನಿಸಬಹುದು. ಅದು ಸುಲಭವೂ ಅಲ್ಲ, ಕಷ್ಟವೂ ಅಲ್ಲ. ಅವರ ಸರಳತೆಯ ಒಳಗೆ ಸಂಕೀರ್ಣತೆಯಿದೆ.

ಇಂತಹ ಶಾಮಣ್ಣನವರ ಬಗ್ಗೆ ಪುಸ್ತಕ ತರುವುದು ಸುಲಭವಲ್ಲ. ಅವರೇ ನಿರೂಪಿಸಿರುವ ಕಥನವಾದ 'ಕಾಡತೊರೆಯ ಜಾಡು' ಈಗಾಗಲೇ ಜನಮನವನ್ನು ಗೆದ್ದಿದೆ. ಈಗ 'ನಮ್ಮ ಶಾಮಣ್ಣ' ಆಪ್ತಲೋಕದ ಕಣ್ಣುಗಳಿಂದ ಅವರನ್ನು ನೋಡುವ ಕೆಲಸವನ್ನು, ಗಂಭೀರವಾಗಿ ಹೊಣೆಯರಿತು ಮಾಡಿದೆ. ಶಾಮಣ್ಣನವರ ಬಂಧುಮಿತ್ರರಲ್ಲಿ ಅನೇಕರು ಹೋರಾಟಗಾರರು ಮತ್ತು ಯಾವುದೇ ರಕಮಿನ, ಜಾತಿಯ ಹೋರಾಟಗಾರರೆಲ್ಲರೂ ಈ ಶಾಮಣ್ಣನವರ ಬಂಧುಮಿತ್ರರೇ ಆಗಿಬಿಡುತ್ತಾರೆ. ಆದ್ದರಿಂದ ಈ ಪುಸ್ತಕದಲ್ಲಿ ಸಂತೋಷ, ಬೆರಗು ಮತ್ತು ಅಭಿಮಾನಗಳು ಇಡಿಕಿರಿದಿವೆ. ಅಂತೆಯೇ ಅವರ ಗೆಳೆಯರಲ್ಲಿ ಅನೇಕರು ಉಡಪಟ್ಟಿನ ಖಂಡಿತವಾದಿಗಳಾದುದರಿಂದ, ಇಲ್ಲಿ ವಿಮರ್ಶೆ, ಟೀಕೆ ಮತ್ತು ವಿಶ್ಲೇಷಣೆಗಳ ಎಳೆಗಳೂ ಸೇರಿಕೊಂಡು ಪುಸ್ತಕದ ಸಮತೂಕವನ್ನು ಕಾಪಾಡಿವೆ. ಸ್ವತಃ ಪುಸ್ತಕದ ಸಂಪಾದಕರಲ್ಲೊಬ್ಬರಾದ ಎಂ.ಬಿ. ನಟರಾಜ್, ಎಚ್.ಆರ್. ಬಸವರಾಜಪ್ಪ, ಬಿ.ಎನ್ ಶ್ರೀರಾಮ, ಜಿ.ಪಿ. ಬಸವರಾಜು, ಕೋಡ್ಲು ವೆಂಕಟೇಶ್, ಶೃಂಗೇಶ್ ಮುಂತಾದವರ ಲೇಖನಗಳು ಈ ಕೆಲಸವನ್ನು ಸಮರ್ಥವಾಗಿ ಮಾಡುತ್ತವೆ. ಶಾಮಣ್ಣನವರ ಬಗ್ಗೆ ನ್ಯಾಯವಾಗಿಯೇ ಅಪಾರ ಪ್ರೀತಿ, ಗೌರವಗಳನ್ನು ಇಟ್ಟುಕೊಂಡು, ಅಲ್ಪ ಸ್ವಲ್ಪ ಭಿನ್ನಮತಗಳನ್ನು ದಾಖಲೆ ಮಾಡಲು ಇವರು ಹಿಂಜರಿದಿಲ್ಲ. ಇಂತಹ ಆಯ್ಕೆಗಳಲ್ಲಿ ಪುಸ್ತಕದ ಸಂಪಾದಕರ ಸಮಚಿತ್ತ ಮತ್ತು ವಸ್ತುನಿಷ್ಠತೆಗಳು ಸ್ಪಷ್ಟವಾಗಿವೆ.

ಇಲ್ಲಿನ ಯಾವ ಲೇಖನವೂ ಹೊಗಳುಭಟ್ಟರು ಬರೆದಂತೆ ತೋರುವುದಿಲ್ಲ ಎನ್ನುವುದು ಶಾಮಣ್ಣನವರ ಮತ್ತು ಬರೆದವರ ದೊಡ್ಡತನವನ್ನು ತೋರಿಸುತ್ತದೆ. ಈ ಲೇಖನಗಳನ್ನು ಒಟ್ಟಿಗೆ ನೋಡಿದಾಗ ಮಲೆನಾಡಿನ ಇತಿಹಾಸದ ಕೆಲವು ಪುಟಗಳು ಅಬ್ಬರವಿಲ್ಲದೆ ಕಾಣಿಸಿಕೊಳ್ಳುತ್ತವೆ. ಹಾಗೆಯೇ ರೈತಸಂಘದ ಏಳುಬೀಳುಗಳ ಕಥನವೂ ಕೂಡ. ಶಾಮಣ್ಣನವರು 'ರೈತಸಂಘದ ಹೃದಯ' ಎನ್ನುವ ಕೆ.ಟಿ. ಗಂಗಾಧರ್ ಅವರ ಮಾತು ಮತ್ತು 'ತುಂಬಾ ಒಳ್ಳೆಯತನ ತುಂಬಾ ಕೆಟ್ಟದ್ದು' ಎಂಬ ಎಚ್.ಎಲ್. ಕೇಶವಮೂರ್ತಿಯವರ ಮಾತು ಮನಸ್ಸಿನಲ್ಲಿ ಉಳಿಯುತ್ತವೆ.

ಶಾಮಣ್ಣನವರಂತಹ ಜನನಾಯಕರ ಬದುಕು ನಿರ್ದಿಷ್ಟ ಕಾಲ, ದೇಶ, ಸಂದರ್ಭಗಳ ಬದುಕೂ ಆಗಿರುತ್ತದೆ. ಅವರು ಮಾಡಿಕೊಂಡ/ಮಾಡಿಕೊಳ್ಳದ ಆಯ್ಕೆಗಳು, ಅವು ಅವರ ಮೇಲೆ ಮತ್ತು ಸುತ್ತಲ ಪರಿಸರದ ಮೇಲೆ ಬೀರಿದ ಪರಿಣಾಮಗಳು ಕೂಡ ಅಷ್ಟೇ ಮಹತ್ವದವು. ಶಾಂತವೇರಿ ಗೋಪಾಲಗೌಡರು, ಶಾಮಣ್ಣನವರು ಮತ್ತು ಸಾರೆಕೊಪ್ಪ ಬಂಗಾರಪ್ಪನವರು ಮಾಡಿಕೊಂಡ ಆಯ್ಕೆಗಳನ್ನು ಒಟ್ಟಂದದಲ್ಲಿ ವಿಶ್ಲೇಷಿಸಿದಾಗ ನನ್ನ ಮಾತು ಸ್ಪಷ್ಟವಾಗುತ್ತದೆ. ಶಾಮಣ್ಣನವರ ಮನಸ್ಸು ದಲಿತ ಚಳುವಳಿ, ಹಿಂದುಳಿದ ವರ್ಗಗಳ ಹೋರಾಟ, ಭೂರಹಿತ ಕಾರ್ಮಿಕರ ಹೋರಾಟಗಳು, ಹೆಣ್ಣುಮಕ್ಕಳ ಹಕ್ಕೊತ್ತಾಯಗಳು ಮುಂತಾದ ಹಲವು ಚಳುವಳಿಗಳ ಆಶಯಗಳಿಗೆ ಸಹಮತವಾದುದು. ಕಕ್ಕಸ್ಸು ಮನೆಯಿಂದ ಗ್ರಂಥಾಲಯದವರೆಗೆ ಹರಡಿಕೊಂಡ ಅವರ ಆಸಕ್ತಿಗಳು ಈ ಚಳುವಳಿಗಳಿಗೆ ಪರೋಕ್ಷವಾಗಿ ಒತ್ತಾಯ ನೀಡುವಂಥವು. ಆದರೆ ಶಾಮಣ್ಣನವರು ಚಳುವಳಿಗಳನ್ನು ಒಳಗೊಂಡ ಹಾಗೆ, ಚಳುವಳಿಗಳು ಅವರನ್ನು ಒಳಗೊಂಡಂತೆ ತೋರುವುದಿಲ್ಲ. ಅವರು ಚಳುವಳಿಗಳನ್ನು ಮಿಕ್ಕು ಮೀರಿದವರು.

ಇದು ಏಕೆ ಹೀಗೆ? 'ಓಪನ್ ಮೈಂಡೆಡ್' ಆಗಿರುವುದು ನಮ್ಮ ಕಾಲದ ಚಳುವಳಿಗಳಿಗೆ ಹಿಡಿಸುವುದಿಲ್ಲವೇ? ಕಳೆದ ಮೂರು-ನಾಲ್ಕು ದಶಕಗಳಲ್ಲಿ ರಾಜಕಾರಣ(ಪಾಲಿಟಿಕ್ಸ್) ಮತ್ತು ರಾಜಕೀಯ(ಪೊಲಿಟಿಕಿಂಗ್)ಗಳು ಬೆರೆತುಹೋಗಿವೆಯೇ? ಪ್ರಜಾಪ್ರಭುತ್ವದ ಮಾತನಾಡುತ್ತಲೇ ಮೂಡಿಬಂದ ಸರ್ವಾಧಿಕಾರಿ ನಾಯಕರು (ಹೆಸರುಗಳು ನಮಗೆಲ್ಲರಿಗೂ ಗೊತ್ತು) ಇದಕ್ಕೆ ಕಾರಣವೇ? ಶಾಮಣ್ಣ, ಅನಸೂಯಮ್ಮ, ಕಾಮ್ರೇಡ್ ಗೌರಿ, ಲಂಕೇಶ್ ಪತ್ರಿಕೆಯಲ್ಲಿ ಬರೆದ/ಕೆಲಸ ಮಾಡಿದ ಹಲವರು ಪಕ್ಷಗಳಿಂದ, ಸಂಘಟನೆಗಳಿಂದ ಉಚ್ಚಾಟಿತರಾಗುವ ಸನ್ನಿವೇಶ ಯಾಕೆ ಉಂಟಾಗುತ್ತದೆ? ವ್ಯಕ್ತಿಗಳ ಸ್ವಭಾವ, ಸಮುದಾಯಗಳ ಸ್ವಭಾವ ಮತ್ತು ಸಂಘಟನೆಗಳ ಸ್ವಭಾವದ ನಡುವೆ ಉಂಟಾಗುವ ಒಡಕುಗಳ ಕಾರಣವೇನು? ಇಂಥವರು ಸಕ್ರಿಯ ರಾಜಕಾರಣದಿಂದ ದೂರ ಉಳಿದಿದ್ದು ಹೇಗೆ ಸರಿ? ಇಂಥ ಮುಖ್ಯ ಪ್ರಶ್ನೆಗಳ ಬಗ್ಗೆ ಆಲೋಚನೆ ಮಾಡುವುದಕ್ಕೆ ಈ ಪುಸ್ತಕದಲ್ಲಿ ಅವಕಾಶವಿತ್ತು. ಈ ಕೆಲಸವು ಶಾಮಣ್ಣನವರ ಜೀವನದ ಹಿನ್ನೆಲೆಯಲ್ಲಿ ಮತ್ತು ಅದರಿಂದ ಅಲಾಯಿದವಾಗಿ ನಡೆಯಬಹುದಿತ್ತು. ಮರುಕಳಿಸುವ ಆಶಯಗಳು ಮತ್ತು ವಿವರಗಳ ಜಾಗದಲ್ಲಿ ಇವಕ್ಕೆ ಜಾಗ ಕೊಡಬಹುದಿತ್ತು. ಶಾಮಣ್ಣನವರ ಹಾಸ್ಯಪ್ರಜ್ಞೆ ಮತ್ತು ಲಘು ಮಾನಸಗಳನ್ನು ದಟ್ಟವಾದ ಬಣ್ಣಗಳಲ್ಲಿ ಚಿತ್ರಿಸಿರುವುದರಿಂದ ಅವರ ವ್ಯಕ್ತಿತ್ವದ ಇತರ ಆಯಾಮಗಳು ಹಿಂದುಳಿದಂತೆ ತೋರುತ್ತದೆ. ಅವರಂಥ ನಾಯಕರಿಗೆ ನಮ್ಮ ಕಾಲದಲ್ಲಿ ಒಂಟಿತನ ಹಾಗೂ ವಿಷಾದಗಳು ಕಾಡುವುದು ಸಹಜ. ಅವರಿಗೆ. ಅದನ್ನು ಹೇಳಿಕೊಳ್ಳಲಾರದಷ್ಟು ಜೀವನಪ್ರೀತಿ ಇರಬಹುದು ಅಥವಾ ತಮಗೆ ತೋರಿದಂತೆ ಬದುಕಿದವರಿಗೆ ಪಶ್ಚಾತ್ತಾಪವು ಕಾಡುವುದಿಲ್ಲವೇನೋ. ಮಂದಹಾಸ, ಅಟ್ಟಹಾಸಗಳ ಹಿಂದೆ ಕಂಬನಿಯೂ ಕಾಣದಂತೆ ಅಡಗಿರುತ್ತದೆ. ನಾಗಸಮುದ್ರದ ಗೋಲೀಬಾರ್ ಅವರ ಮೇಲೆ ಬೀರಿದ ಮಾನಸಿಕ ಆಘಾತವನ್ನು ಅವರ ಮಗಳೇ ದಾಖಲೆ ಮಾಡಿದ್ದಾರೆ.

ಈ ಪುಸ್ತಕವನ್ನು ಓದಿ ಮುಗಿಸಿದಾಗ ಮನಸ್ಸಿನಲ್ಲಿ ಉಳಿಯುವ ಮತ್ತೊಂದು ಬಿಂಬ ಶ್ರೀದೇವಕ್ಕನವರದು. ಸದಾ ಚಲಿಸುವ ಶಾಮಣ್ಣನವರಿಗೆ ಸ್ಥಾವರವಾಗಿ ಅವರ ಬದುಕಿನ ಗಾಳಿಪಟವನ್ನು ಮುಗಿಲಿನಲ್ಲಿಯೇ ಮೆರೆಸುತ್ತಿರುವ ಇವರನ್ನು ಒಮ್ಮೆ ನೋಡಬೇಕೆನಿಸಿದೆ ನನಗೆ. ಆ 'ಶಾಮದೇವ'ರಿಗೆ ಈ 'ಶ್ರೀದೇವಿ' ಒಬ್ಬರು ಇನ್ನೊಬ್ಬರಿಗೆ ಆಸರೆ ಆಗಿದ್ದಾರೆ.

ಹಾಗೆಯೇ ಇಲ್ಲಿರುವ ಹಲವು ಲೇಖನಗಳು ಕತೆ-ಕಾದಂಬರಿಗಳ ಬನಿಯನ್ನು ಶೈಲಿಯನ್ನು ಗಳಿಸಿಕೊಂಡಿವೆ. ಕಲ್ಪನೆಯಲ್ಲಿ ಅಲ್ಲ, ಕಥನದಲ್ಲಿ. ಅಂಥ ಲೇಖನಗಳು ಶಾಮಣ್ಣನವರಿಗೆ ಮಾತ್ರವಲ್ಲ, ಬರೆದವರ ವ್ಯಕ್ತಿತ್ವಕ್ಕೂ ಕನ್ನಡಿ ಯಾಗಿವೆ. ಲೇಖನಗಳಲ್ಲಿ ಇರಬಹುದಾದ ಏಕತಾನತೆ ಕಡಿಮೆಯಾಗಿದೆ.

ಹೊನ್ನಾಳಿ ಚಂದ್ರಶೇಖರ್ ಅವರ ಮಕ್ಕಳಿಗೆ ಶ್ರೀದೇವಕ್ಕ ಒಂದು ನೋಟು ಕೊಟ್ಟು, "ಏನಾದ್ರೂ ಪುಸ್ತಕ ತಗೊಳ್ರೋ" ಎನ್ನುತ್ತಾರಂತೆ. ಆ ಮಕ್ಕಳು ಅದರ ಮೇಲೆ 'ಶಾಮಣ್ಣ ಕೊಟ್ಟ ನೋಟು' ಎಂದು ಬರೆದು, ಡೈರಿಯೊಳಗೆ ಇಡುವರಂತೆ. ಈ ಘಟನೆಯು ಶಾಮಣ್ಣನವರ ಬದುಕು ಮತ್ತು ಅದು ಹರಡಿರುವ ಬೆಳಕಿಗೆ ಒಂದು ರೂಪಕವೆಂದು ನನಗೆ ತೋರುತ್ತದೆ.

ಇಂಥ ದಿಟವಾದ ಮನುಷ್ಯನ ಬಗ್ಗೆ ಇಂಥ ಪುಸ್ತಕವನ್ನು ತಮಗೆ ಸಹಜವಾದ ಪ್ರೀತಿ ಮತ್ತು ನಿಷ್ಠೆಗಳಿಂದ ಸಂಪಾದಿಸಿ ಕೊಟ್ಟಿರುವ ಮೂವರು ಸಂಪಾದಕರಿಗೆ ಅಭಿನಂದನೆಗಳು ಮತ್ತು ವಂದನೆಗಳು.

-ಡಾ. ಎಚ್.ಎಸ್. ರಾಘವೇಂದ್ರ ರಾವ್

'ಹೊಸ ಮನುಷ್ಯ' ಓದುಗರೆಲ್ಲರಿಗೆ
ಹಾರ್ದಿಕ ಶುಭಾಶಯಗಳು




–ಡಾ. ಸಬಿತಾ ಬನ್ನಾಡಿ
ಮತ್ತು ಕುಟುಂಬ
ಶಂಕರಘಟ್ಟ (ಭದ್ರಾವತಿ ತಾ.)

'ಹೊಸ ಮನುಷ್ಯ' ಓದುಗರೆಲ್ಲರಿಗೆ
ಹಾರ್ದಿಕ ಶುಭಾಶಯಗಳು



–ಇಸ್ಮಾಯಿಲ್ ಎಂ. ಅರಳಿಕಟ್ಟಿ
ಇಂಜಿನಿಯರಿಂಗ್ ವರ್ಕ್ಸ್
ಫ್ಯಾಬ್ರಿಕೇಶನ್ ಗುತ್ತಿಗೆದಾರರು
ಯಾಲಕ್ಕಿಶೆಟ್ರ ಕಾಲೋನಿ
ಧಾರವಾಡ

ತಿಂಗಳ ಸಾಲುಗಳು...



ಮಾಡಬೇಕು, ಮಾಡದಂತಿರಬೇಕು
ಮಾಡುವ ಮಾಟದಲ್ಲಿ ತಾನಿಲ್ಲದಿರಬೇಕು

-ಬಸವಣ್ಣ

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5, Kallahally Extn., Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

Regd. News Paper RNI No. KARKAN/2012/47568
Rgd No. KA/SK/SMG-1209/2016-18

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204(Karnataka)